# ಕರ್ನಾಟಕ ವಿಕಾಸ
# Karnataka Vikas

ಸೆಪ್ಟೆಂಬರ್ 2017
September 2017



ಬೆಂಗಳೂರಿನ ಜಕ್ಕೂರು ವಿಮಾನ ತರಬೇತಿ ಕೇಂದ್ರದಿಂದ ಮೋಡ ಬಿತ್ತನೆಗಾಗಿ ಅತ್ಯಾಧುನಿಕ ಪರಿಕರಗಳನ್ನು ಅಳವಡಿಸಿದ ವಿಮಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕೃಷಿ ಸಚಿವರು ಮತ್ತು ಅಭಿವೃದ್ಧಿ ಆಯುಕ್ತರು, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಚಾಲನೆಯ ನೋಟ.






ಬೆಂಗಳೂರಿನ ಜಕ್ಕೂರು ವಿಮಾನ ತರಬೇತಿ ಕೇಂದ್ರದಿಂದ ಮೋಡ ಬಿತ್ತನೆಗಾಗಿ ಅತ್ಯಾಧುನಿಕ ಪರಿಕರಗಳನ್ನು ಅಳವಡಿಸಿದ ವಿಮಾನವನ್ನು ಇಲಾಖೆ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿಗಳಿಂದ ಚಾಲನೆಯ ನೋಟ.



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


| | |
|---|---|
| ಸೆಪ್ಟೆಂಬರ್ 2017 | ಸಂಪುಟ : 58<br>Volume : 58 |
| September 2017 | ಸಂಚಿಕೆ : 10<br>Issue : 10 |


## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 5 |
| ವರದಿ | – ಉಮೇಶ್ ಹುಲಿಕುಂಟೆ | 7 |
| | – ಮಹಾಂತೇಶ ಮು. | 11 |
| | – ಮುರಳಿ.ಕೆ | 13 |
| | – ರಾಜೇಂದ್ರ ದೇಸಾಯಿ | 15 |
| ಯಶೋಗಾಥೆ | – ಗುರುರಾಜ.ಬ.ಕನ್ನೂರ | 19 |
| | – ಮಂಜುಳ ಎನ್ ಪಿ | 21 |
| | – ಹೆಚ್ ಆರ್ ರಾಜೇಶ್ | 24 |
| | – ಎನ್. ಕೋಡಿಪಾಳ್ಯ ಕೃಷ್ಣಪ್ಪ | 27 |
| | – ಸೂರ್ಯನಾರಾಯಣ್ ಆರ್. ಭಟ್ | 29 |
| ಲೇಖನ | – ಹೆಚ್.ಪಿ.ಪ್ರಕಾಶ್, ಐಎಫ್ಎಸ್ | 32 |
| | – ನಿಂಗೇಗೌಡ | 41 |
| ಕವಿಯ(ಕ್ಷ) ಪ್ರಶ್ನೆ | – ಹರ್ಷಿತಾ ಗಾಂಧಿ | 44 |
| ಕಾವ್ಯ ವಿಕಾಸ | – ಎಮ್.ಜಿ ದಾಸರ್ | 45 |
| ಸುತ್ತೋಲೆಗಳು | | 46 |






ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಡಾ॥ ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಆಗ್ನೇಸ್ ಮೇರಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–

ಸಂಸ್ಥೆಗಳಿಗೆ ರೂ. 120/–

ಬಿಡಿ ಪ್ರತಿ ರೂ. 10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವಿಧಿ,
ಬೆಂಗಳೂರು – 560 001.
ದೂರವಾಣಿ: 080–22353857
www.rdpr.kar.nic.in
Email: kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಆಗಸ್ಟ್ 2017ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಹಲವಾರು ಮಹತ್ವದ ವಿಷಯಗಳು ಹಾಗೂ ಸಂಗತಿಗಳನ್ನು ಹೊತ್ತು ತಂದಿದೆ. ಗ್ರಾಮೀಣ ಪುನರ್ ನಿರ್ಮಾಣದಲ್ಲಿ ದಿಟ್ಟ ಹೆಜ್ಜೆ ಗದಗದಲ್ಲಿ ಸ್ಥಾಪಿತಗೊಂಡ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯವೆಂದು ಹೇಳಲು ಹೆಮ್ಮೆ ಹಾಗೂ ಅಭಿಮಾನ ಬರುತ್ತದೆ. ಮಾನ್ಯ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ರವರ ದೂರ ದೃಷ್ಟಿಗೆ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಸಾಕ್ಷಿಯಾಗಿದೆ ಎಂದು ಹೇಳಬಹುದು. ನೆಡುತೋಪು ಅಭಿವೃದ್ಧಿ, ನದಿಗೆ ಮೆಟ್ಟಿಲು, ಕಷ್ಟಕಾಲದಲ್ಲಿ ಕಿರಾಣಿ ಅಂಗಡಿ ಜೀವನಕ್ಕೆ ಆಸರೆ, ಆಡು ಸಾಕಾಣೆ... ಇತ್ಯಾದಿ ಯಶೋಗಾಥೆಗಳು ಇನ್ನುಳಿದವರಿಗೆ ಸ್ಫೂರ್ತಿದಾಯಕಗಳಾಗಿವೆ. ಶ್ರದ್ಧೆ, ಪರಿಶ್ರಮ, ಸತತ ಪ್ರಯತ್ನಗಳಿದ್ದರೆ ಸಾಹಸದಿಂದ ಜೀವನದಲ್ಲಿ ಯಶಸ್ಸು ಶ್ರೇಯಸ್ಸು ಪಡೆಯಲು ಸಾಧ್ಯ ಎಂಬುದು ಇದರಿಂದ ತಿಳಿಯುತ್ತದೆ.

**ಶ್ರೀ ಕೊತ್ತಲ ಮಹಾದೇವಪ್ಪ,**
ಶಿಕ್ಷಕ, ಸಾಹಿತಿ,
ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಆಗಸ್ಟ್ 2017ರ ಸಂಚಿಕೆಯು ಆಕರ್ಷಕವಾಗಿ ಮೂಡಿಬಂದಿದೆ. ಜನರು ಡೆಂಗ್ಯೂವಿನಿಂದ ಬಳಲುತ್ತಿದ್ದು, ಡೆಂಗ್ಯೂ ನಿಯಂತ್ರಣಕ್ಕಾಗಿ ಇಲಾಖೆ ವತಿಯಿಂದ ಹಲವಾರು ಕ್ರಮಗಳನ್ನು ಕೈಗೊಂಡಿರುವುದು, ರಾಜ್ಯದಲ್ಲಿನ ಅತಿವೃಷ್ಟಿ ಮತ್ತು ಅನಾವೃಷ್ಟಿ ಪರಿಸ್ಥಿತಿಯ ಬಗ್ಗೆ ಚಿಂತನೆಯ ಕುರಿತ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸಂದೇಶ ನೀಡಿರುವುದು ಸಂತೋಷವಾಗಿದೆ. ಅಂತೆಯೇ ಪತ್ರಿಕೆಯಲ್ಲಿ ಲೇಖನಗಳು, ಯಶೋಗಾಥೆಗಳು ಮತ್ತು ಸುತ್ತೋಲೆಗಳು ಬಹಳ ಉಪಯುಕ್ತವಾಗಿವೆ.

**ಶ್ರೀ ಹ್ಯಾರಿ**
ನಂ.6, ಧನಪಾಲ್ ಬಡಾವಣೆ,
ರಾಘವೇಂದ್ರ ಬಡಾವಣೆ, ಕೆ.ಜಿ.ಹಳ್ಳಿ, ಎಕ್ಸ್‌ಟೆನ್ಷನ್,
ಜಾಲಹಳ್ಳಿ ವೆಸ್ಟ್, ಬೆಂಗಳೂರು 560015.

ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯದೊಂದಿಗೆ ಆಗಸ್ಟ್ 2017ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಬಹಳ ಚೆನ್ನಾಗಿ ಮೂಡಿಬಂದಿದೆ. ಶ್ರೀ ಕೆ.ಜಿ.ಜಗದೀಶ್ ರವರ ಆಸ್ತಿ ಮತ್ತು ಆಸ್ತಿ ತೆರಿಗೆ ಸುಧಾರಣಾ ಕ್ರಮಗಳ ಕುರಿತು ಲೇಖನವು ಬಹಳ ಉಪಯುಕ್ತವಾಗಿದೆ. ಜಗದೀಶ್‌ರವರ ಕೋಲಾರ ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲು ಪಣ ತೊಟ್ಟಿರುವ ಯಶೋಗಾಥೆಯು ಇತರೆ ಜಿಲ್ಲೆಗಳಿಗೆ ಮಾದರಿಯಾಗಿದೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ಪುಸ್ತಕಗಳಿಗೆ ಮಾನ್ಯತೆ ನೀಡುವಂತೆ ಸಂದೇಶ ನೀಡಿರುವ ಕವಿಯ(ಕ್ಷ)ಪ್ರಶ್ನೆ? ಅಂಕಣವು ಬಹಳ ಉಪಯುಕ್ತವಾಗಿದೆ.

**ಶ್ರೀ ಸುಕನ್ಯ**
ಬಿಂಡಿಗನವಿಲೆ ಹೋಬಳಿ,
ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ.

# ಸಚಿವಾಲಯದಿಂದ ಸಂದೇಶ



**ಡಾ|| ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಕರ್ನಾಟಕ ಸರ್ಕಾರ**

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

ಪ್ರಿಯ ಬಂಧುಗಳೇ,

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ರೂಢಿಯಲ್ಲಿರುವಂತಹ **"ಬಯಲು ಬಹಿರ್ದೆಸೆ ಪದ್ಧತಿ"**ಯನ್ನು ಮುಕ್ತಗೊಳಿಸಿ ಗ್ರಾಮೀಣ ಜನರಿಗೆ ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ನಿರ್ಮಿಸಿ ಜನರ ಜೀವನ ಮಟ್ಟವನ್ನು ಸುಧಾರಿಸುವ ಉದ್ದೇಶದೊಂದಿಗೆ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೆ ಶೌಚಾಲಯ ನಿರ್ಮಿಸಲು **"ಶೌಚಾಲಯಕ್ಕಾಗಿ ಸಮರ"** ಎಂಬ ಕಾರ್ಯಕ್ರಮವನ್ನು ಜಾರಿಗೆ ತಂದು ಅನುಷ್ಠಾನ ಮಾಡಲಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ ಕೋಲಾರ, ದಾವಣಗೆರೆ, ಚಿಕ್ಕಮಗಳೂರು, ಚಾಮರಾಜನಗರ, ಬೆಳಗಾವಿ, ಹಾಸನ, ರಾಮನಗರ ಜಿಲ್ಲೆಗಳಲ್ಲಿ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಅಧಿಕಾರಿಗಳನ್ನು ಹಾಗೂ ಚುನಾಯಿತ ಪ್ರತಿನಿಧಿಗಳನ್ನು ಒಗ್ಗೂಡಿಸಿಕೊಂಡು ಗ್ರಾಮಗಳಿಗೆ ಭೇಟಿ ನೀಡಿ ಶೌಚಾಲಯ ನಿರ್ಮಾಣ ಹಾಗೂ ಬಳಕೆಗೆ ಜನರ ಮನವೊಲಿಸುತ್ತಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮ ಪ್ರಗತಿಯನ್ನು ಸಾಧಿಸುವ ಮೂಲಕ ತಮ್ಮ ಜಿಲ್ಲೆಯನ್ನು ನಿಗಧಿತ ಅವಧಿಯಲ್ಲಿ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿಸಲು ಮುಂದಾಗಿ ಶ್ರಮಿಸುತ್ತಿರುವುದು ಶ್ಲಾಘನೀಯವಾಗಿರುತ್ತದೆ ಹಾಗೂ ಇದು ಇತರರಿಗೂ ಮಾದರಿಯಾಗಿದೆ.

ಈ ರೀತಿಯಲ್ಲಿ ಜಿಲ್ಲೆಗಳಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಈ ಕಾರ್ಯಕ್ರಮದಲ್ಲಿ ನಿಯೋಜಿಸಿಕೊಂಡು ಪ್ರತಿ ಗ್ರಾಮ ಪಂಚಾಯಿತಿಗೆ ಈ ಅಧಿಕಾರಿಗಳ ತಂಡಗಳನ್ನು ರಚಿಸಿ, ನಿಗದಿತ ಅವಧಿಯೊಳಗೆ ತಮ್ಮ ಗ್ರಾಮ ಪಂಚಾಯಿತಿಗಳನ್ನು ಬಯಲು ಬಹಿರ್ದೆಸೆ ಮುಕ್ತ ಮಾಡಲು ಸಂಕಲ್ಪಿಸಿ, ಅದರಂತೆ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿದ್ದೀರೆಂದು ನಾನು ಭಾವಿಸಿದ್ದೇನೆ.

ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಭಾಗದಲ್ಲಿನ ವಿವಿಧ ಸಂಘ ಸಂಸ್ಥೆಗಳು, ಮೂರು ಹಂತದ ಚುನಾಯಿತ ಪ್ರತಿನಿಧಿಗಳು, ಯುವಕ–ಯುವತಿ ಮಂಡಳಿಗಳು, ಸ್ವ–ಸಹಾಯ ಸಂಘಗಳು ಹಾಗೂ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಉದ್ದೇಶವನ್ನು ಈಡೇರಿಸುವ ಮೂಲಕ ನಮ್ಮ ರಾಜ್ಯವನ್ನು ಜನವರಿ 26, 2018ರೊಳಗೆ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸಲು ಸಂಕಲ್ಪಿಸಲಾಗಿದೆ. ಈ ಸಂಕಲ್ಪವನ್ನು ಸಾಕಾರದೆಡೆಗೆ ಕೊಂಡೊಯ್ಯುವ ಗುರುತರವಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಕನ್ನಡ ನಾಡನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸಿ ನಿರ್ಮಲ ಕರ್ನಾಟಕದ ಕನಸನ್ನು ಸಾಕಾರಗೊಳಿಸಿ ತನ್ಮೂಲಕ ಚೆಲುವ ಕನ್ನಡ ನಾಡನ್ನು ಕಟ್ಟುವ ಸಿದ್ಧತೆಗೆ ನಾವೆಲ್ಲ ನಾಂದಿ ಹಾಡೋಣ. ಬನ್ನಿ ಕೈ ಜೋಡಿಸಿ, ಚೆಲುವ ಕನ್ನಡ ನಾಡನ್ನು ಕಟ್ಟುವ ಕನಸು ನನಸಾಗಿಸಲು ಜನಾಂದೋಲನದಲ್ಲಿ ಪಾಲ್ಗೊಳ್ಳಲು ಮುಂದಾಗಿ.

**(ಡಾ॥ ಎನ್. ನಾಗಾಂಬಿಕಾ ದೇವಿ)**




**ಉಮೇಶ್ ಹುಲಿಕುಂಟೆ**

ಜಿಲ್ಲಾ ಐ.ಇ.ಸಿ.
ಸಂಯೋಜಕರು
ಜಿಲ್ಲಾ ಪಂಚಾಯತ್,
ತುಮಕೂರು.


# ರಜತ ವರ್ಷಾಚರಣೆ
# ಪಂಚಾಯತ್ ರಾಜ್ ಸಮಾವೇಶ

ಸಂವಿಧಾನದ 73 ನೇ ತಿದ್ದುಪಡಿ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ರ ರಜತ ವರ್ಷಾಚರಣೆ ಹಾಗೂ ತುಮಕೂರು ಜಿಲ್ಲೆಯ ಪಂಚಾಯತ್ ರಾಜ್ ಸಮಾವೇಶವನ್ನು ಕರ್ನಾಟಕ ಪಂಚಾಯತ್ ರಾಜ್ ಪರಿಷತ್ ತುಮಕೂರು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಮತ್ತು ಗ್ರಾಮ ಪಂಚಾಯತಿಗಳ ಸಹಯೋಗದಲ್ಲಿ ದಿನಾಂಕ :22.08.2017 ರಂದು ಸಿದ್ದಗಂಗಾ ಮಠದ ಪ್ರಾರ್ಥನಾ ಮಂದಿರದಲ್ಲಿ ಆಯೋಜಿಸಲಾಗಿತ್ತು.

ಸಮಾವೇಶವನ್ನು ಉದ್ಘಾಟಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಸಣ್ಣನೀರಾವರಿ ಸಚಿವರು ಮತ್ತು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ಶ್ರೀ.ಟಿ.ಬಿ.ಜಯಚಂದ್ರ ರವರು ಮಾತನಾಡಿ, ಇಂತಹ ಸಮಾವೇಶಗಳಲ್ಲಿ ಭಾಗವಹಿಸುವುದರಿಂದ ಜನಪ್ರತಿನಿಧಿಗಳ ಜ್ಞಾನ ಹೆಚ್ಚಾಗುತ್ತದೆ ಇದರಿಂದ ಸದುಪಯೋಗ ಪಡೆಯಬೇಕು ಎಂಬುದಾಗಿ ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಹಾತ್ಮಗಾಂಧಿ ನರೇಗಾ ಯೊಜನೆ ಅಡಿಯಲ್ಲಿ ತುಮಕೂರು ಜಿಲ್ಲಾ ಪಂಚಾಯತ್ ಹೊರತಂದಿರುವ 'ಕಾಮಗಾರಿಗಳ ಮಾಹಿತಿ ಕೈಪಿಡಿ' ಯನ್ನು ಬಿಡುಗಡೆಗೊಳಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ.ಎಚ್.ಕೆ.ಪಾಟೀಲ್‌ರವರು ಮಾತನಾಡಿ, ಗಾಂಧೀಜಿಯವರು ಸ್ವಾತಂತ್ರ್ಯಪೂರ್ವ ದಲ್ಲಿಯೇ ಶೌಚಾಲಯದ ಮಹತ್ವವನ್ನು ಸಾರಿದ್ದರು. ರಾಜ್ಯದಲ್ಲಿ ಸರ್ಕಾರದ ವತಿಯಿಂದ ಕಳೆದ 4 ವರ್ಷಗಳಲ್ಲಿ ಶೇ 75% ರಷ್ಟು ಶೌಚಾಲಯ ನಿರ್ಮಾಣ ಮಾಡಿಸಲಾಗಿದೆ, ರಾಜ್ಯದ ಎಲ್ಲಾ 30 ಜಿಲ್ಲೆಗಳನ್ನು ಬಯಲು ಶೌಚಾಲಯ ಮುಕ್ತ ಮಾಡಲು ಗುರಿ




**ಸಮಾವೇಶದಲ್ಲಿ ವೇದಿಕೆಯನ್ನಲಂಕರಿಸಿರುವ ಗಣ್ಯರು**



**ಕೇಂದ್ರ ಸರ್ಕಾರದ ಮಾಜಿ ಸಚಿವ ಶ್ರೀ.ಮಣಿಶಂಕರ್ ಅಯ್ಯರ್‌ರವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿರುವುದು.**



**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ.ಎಚ್.ಕೆ.ಪಾಟೀಲ್‌ರವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿರುವುದು.**

ಹೊಂದಿದ್ದು ಮುಂಬರುವ ಅಕ್ಟೋಬರ್ 2ನೇ ತಾರೀಖಿನ ಒಳಗೆ 15 ಜಿಲ್ಲೆಗಳನ್ನು ಶೌಚಮುಕ್ತ ಮಾಡಲಾಗುವುದು ಎಂದು ತಿಳಿಸಿದರು.

ಸರ್ಕಾರವು ಯಾವುದೇ ಒಂದು ಕಾನೂನನ್ನು ರಚಿಸುವುದು ಒಂದು ಸಹಜವಾದ ಪ್ರಕ್ರಿಯೆ ಆದರೆ ಅನುಷ್ಠಾನ ಬದ್ದತೆ ಇಲ್ಲದಿದ್ದರೆ ಅದು ರದ್ದಿ ಕಾಗದಕ್ಕೆ ಸಮನಾಗುತ್ತದೆ. ಪಂಚಾಯಿತಿ ಸದಸ್ಯರು ಕಾನೂನನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕು. ಕಾನೂನನ್ನು ಅನುಷ್ಠಾನ ಮಾಡಲು ಜನಪ್ರತಿನಿಧಿಗಳು ಜಾಗೃತರಾಗಬೇಕು ಹಾಗೆಯೇ ಬೇರೆಯವರ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬುದಾಗಿ ಕಿವಿಮಾತು ಹೇಳಿದರು. ಹಳ್ಳಿಗಳಲ್ಲಿ ಮುಂದಾಳುಗಳು ಜನರಿಗೆ ಮಾಹಿತಿ ನೀಡಿ ಮನವರಿಕೆ ಮಾಡುವ ಕಾರ್ಯವನ್ನು ಮಾಡಿದಾಗ ಮಾತ್ರ ಜನರ ಕಲ್ಯಾಣವಾಗುತ್ತದೆ ಎಂದರು.

ಇಡೀ ಕಾರ್ಯಕ್ರಮದ ಕೇಂದ್ರಬಿಂದು ಹಾಗೂ ಪ್ರಧಾನ ಭಾಷಣಕಾರರಾದ ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಾಜಿ ಸಚಿವ ಶ್ರೀ ಮಣಿಶಂಕರ್ ಅಯ್ಯರ್ ರವರು ತಮ್ಮ ಮನದಾಳದ ಮಾತುಗಳನ್ನು ಸಭೆಯೊಂದಿಗೆ ಹಂಚಿಕೊಳ್ಳುತ್ತಾ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅನುಧಾನವನ್ನು ನೀಡಿ ಅವುಗಳನ್ನು ಸಶಕ್ತಗೊಳಿಸಿದಾಗ



**ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳ ಮಾಹಿತಿ ಕೈಪಿಡಿಯನ್ನು ಬಿಡುಗಡೆಗೊಳಿಸಿದ ಗಣ್ಯರು**

ಮಾತ್ರ ಎಲ್ಲಾ ಜನರನ್ನು ಅಭಿವೃದ್ಧಿಯ ತೆಕ್ಕೆಯಲ್ಲಿ ತರಲು ಸಾದ್ಯ ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕೆಂಬ ಸೋಸಿಯಲ್ ಇಂಜಿನಿಯರಿಂಗ್ ಅಸ್ಥಿತ್ವದಲ್ಲಿರುವುದೇ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ. ಇದು ಮತ್ತಷ್ಟು ಬಲಿಷ್ಟವಾಗಿ ಕಾರ್ಯನಿರ್ವಹಿಸಬೇಕಾದರೆ 14ನೇ ಹಣಕಾಸು ಯೋಜನೆಯಲ್ಲಿ ಈಗಿರುವ ಶೇ.4%ರಷ್ಟು ಅನುದಾನವನ್ನು ಶೇ.8%ಕ್ಕೆ ಹೆಚ್ಚಿಸುವುದು ಸೂಕ್ತ ಎಂಬುದಾಗಿ ಅಭಿಪ್ರಾಯಪಟ್ಟರು.

ಪಂಚಾಯತ್ ಕಾಯ್ದೆ ರಚಿಸಿದ ರಾಜ್ಯಗಳಲ್ಲಿ ಕರ್ನಾಟಕ ಮೊದಲ ರಾಜ್ಯವಾಗಿದೆ ಹಾಗೂ ರಾಜ್ಯದ ಕಾಯ್ದೆಯು ದೇಶದಲ್ಲಿಯೇ ಮಾದರಿಯಾಗಿದೆ ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಗೆ ವಿರೋಧ ಪಕ್ಷಗಳು ಯಾವುದೇ ಪ್ರತಿರೋಧ ತೋರದೆಯೇ ಒಪ್ಪಿಗೆ ಸೂಚಿಸಿರುವುದು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಪಕ್ಷಾತೀತವಾಗಿ ಬೆಂಬಲ ವ್ಯಕ್ತವಾಗಿರುವುದು ಈ ಕಾಯ್ದೆಯ ಮೇಲೆ ಜನಪ್ರತಿನಿಧಿಗಳು ಹೊಂದಿರುವ ವಿಶ್ವಾಸವನ್ನು ಧೃಡಪಡಿಸುತ್ತದೆ. 25 ವರ್ಷಗಳ ಅವಧಿಯಲ್ಲಿ ಪಂಚಾಯತ್ ರಾಜ್ ಕಾನೂನಿನ ಸಮರ್ಪಕ ಜಾರಿಗೆ ಇದ್ದ ಎಲ್ಲಾ ಅಡೆ ತಡೆಗಳನ್ನು ಸಂಪೂರ್ಣವಾಗಿ ನಿವಾರಿಸಿ ಕಾನೂನು ಜಾರಿ ಗೊಳಿಸಲಾಗಿದೆಂದು ನುಡಿದರು.

ಸರ್ಕಾರದ ಎಲ್ಲಾ ಇಲಾಖೆಗಳ ಯೋಜನೆಗಳು ಗ್ರಾಮ ಸಭೆಗಳ ಮೂಲಕ ಅನುಷ್ಠಾನಗೊಳ್ಳಬೇಕು. ಗ್ರಾಮ ಸಭೆಗೆ ಸ್ಥಳೀಯವಾಗಿ ನೈಜವಾದ ಮಾಹಿತಿ ಇರುತ್ತದೆ,ತಮಗೆ ಬೇಕಾದ ಸೌಲಭ್ಯಗಳ ಬಗ್ಗೆ ತೀರ್ಮಾನಿಸುವ ಪರಾಧಿಕಾರವನ್ನು ಗ್ರಾಮ ಸಭೆಗಳು ಬಳಸಿಕೊಂಡು ಯೋಜನೆಗಳನ್ನು ಸಫಲತೆಗೊಳಿಸಬೇಕು ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ ರಾಜ್ಯ ಸರ್ಕಾರವು ವಿಸ್ತೃತ



**ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಕೆ.ಜಿ ಶಾಂತಾರಾಮ ಐ.ಎ.ಎಸ್ ರವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿರುವುದು.**

ಯೋಜನೆ ರೂಪಿಸಲು ಪಂಚಾಯತ್ ರಾಜ್ ಪರಿಷತ್ ಒತ್ತಡ ಹೇರಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಸಾಮಾಜಿಕ ಲೆಕ್ಕ ಪರಿಶೋಧಕ ಬಿಗಿಯಾಗಿರಬೇಕು ವೃತ್ತಿಪರ ಸಂಸ್ಥೆಯಿಂದ ತರಬೇತಿ ಪಡೆದವರಿಂದಲೇ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಬೇಕು, ಈ ನಿಟ್ಟಿನಲ್ಲಿ ನವದೆಹಲಿಯಲ್ಲಿರುವ ಭಾರತೀಯ ಸಾರ್ವಜನಿಕ ಲೆಕ್ಕಸಂಸ್ಥೆ ತನ್ನ ಲೆಕ್ಕ ಪರಿಶೋಧಕರ ಮೂಲಕ ಪಂಚಾಯತ್ ಸಾಮಾಜಿಕವು ಲೆಕ್ಕ ಪರಿಶೋಧನೆ ಕೈಗೊಳ್ಳಲು ಆಸಕ್ತಿ ತಳೆದಿದೆ ಇದಕ್ಕಾಗಿ ಸರ್ಕಾರ ಸೂಕ್ತ ನಿಯಮ ರೂಪಿಸಿ ಅವಕಾಶ ಕಲ್ಪಿಸಬೇಕು ಎಂದರು.



**ಸಮಾವೇಶದಲ್ಲಿ ಕಿಕ್ಕಿರಿದು ನೆರೆದಿರುವ ಜನಸ್ತೋಮ**



**ಗ್ರಾಮೀಣಾಭಿವೃದ್ಧಿ ನೇತಾರರ ಭಾವಚಿತ್ರಗಳಿಗೆ ಗಣ್ಯರಿಂದ ಪುಷ್ಪ ನಮನ**

ಪಂಚಾಯತ್ ರಾಜ್ ಪರಿಷತ್ ಕಾರ್ಯಾಧ್ಯಕ್ಷರಾದ ಶ್ರೀ.ಸಿ.ನಾರಾಯಣಸ್ವಾಮಿರವರು ಪ್ರಸ್ತಾವಿಕ ನುಡಿಗಳನ್ನು ನುಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ತುಮಕೂರು ಗ್ರಾಮಾಂತರ ಶಾಸಕ ಶ್ರೀ.ಬಿ.ಸುರೇಶ್‌ಗೌಡರವರು ಗ್ರಾಮಗಳನ್ನು ಸಂಪೂರ್ಣ ಮದ್ಯಪಾನ ಮುಕ್ತವಾಗಿಸಿ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ ಮಾಡಲು ಪ್ರತಿಯೊಬ್ಬರು ಪ್ರಯತ್ನಿಸಬೇಕು ಎಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ಗ್ರಾ. ಪಂ. ಸದಸ್ಯರ ಮಹಾಕೂಟದ ಅಧ್ಯಕ್ಷ ಕೆ.ಎಸ್ ಸತೀಶ್, ತುಮಕೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಲತಾ ರವಿಕುಮಾರ್, ಉಪಾಧ್ಯಕ್ಷರಾದ ಶ್ರೀಮತಿ ಶಾರದ ನರಸಿಂಹಮೂರ್ತಿ, ಶಾಸಕರಾದ ಶ್ರೀ. ಪಿ.ಆರ್.ಸುಧಾಕರ್‌ಲಾಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕಾಂತರಾಜು, ಕೇಂದ್ರ ಸರ್ಕಾರದ ನಿವೃತ್ತ ಜಂಟಿ ಕಾರ್ಯದರ್ಶಿ ಶ್ರೀ.ಟಿ.ಆರ್.ರಘುನಂದನ್, ಪಂಚಾಯತ್ ರಾಜ್ ನಿರ್ದೇಶಕರಾದ ಶ್ರೀ.ಯಾಲಕ್ಕಿಗೌಡರವರು ಉಪಸ್ಥಿತರಿದ್ದರು.

ಸಮಾವೇಶದ ಅಂಗವಾಗಿ ವಿವಿಧ ಇಲಾಖೆಗಳ ವತಿಯಿಂದ ವಸ್ತು ಪ್ರದರ್ಶನ, ಸಾಕ್ಷ್ಯಚಿತ್ರಗಳ ಪ್ರದರ್ಶನ, ಗಾಂಧೀಜಿ ಕನಸು ಚಲನ ಚಿತ್ರ ಪ್ರದರ್ಶನ, ಮಹಾತ್ಮಗಾಂಧಿ ನರೇಗಾ 'ಕಾಮಗಾರಿಗಳ ಮಾಹಿತಿ ಕೈಪಿಡಿ' ಬಿಡುಗಡೆ, ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು.

ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತದ ಚುನಾಯಿತ ಜನ ಪ್ರತಿನಿಧಿಗಳು, ಅಧಿಕಾರಿಗಳು, ಮತ್ತು ನೌಕರರು ಈ ಸಮಾವೇಶದಲ್ಲಿ ಅತ್ಯಂತ ಸಂತಸ ಮತ್ತು ಸಡಗರದಿಂದ ಪಾಲ್ಗೊಂಡು ಸಮಾವೇಶವನ್ನು ಯಶಸ್ವಿಗೊಳಿಸಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳಾದ ಶ್ರೀ.ಕೆ.ಜಿ.ಶಾಂತರಾಮರವರ ನೇತೃತ್ವದಲ್ಲಿ ಎಲ್ಲಾ ಅಧಿಕಾರಿ ವರ್ಗದವರು ಮತ್ತು ನೌಕರರು ಅವಿರತವಾಗಿ ತುಂಬು ಉತ್ಸುಕತೆಯಿಂದ ಶ್ರಮಿಸಿ ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ, ಕ್ರಮವಾಗಿ ಎಲ್ಲಿಯೂ ಕಿಂಚಿತ್ತು ಲೋಪವಾಗದಂತೆ ಇಡೀ ಕಾರ್ಯಕ್ರಮವನ್ನು ಆಯೋಜಿಸಿ ಜನರ ಅಭಿನಂದನೆಗೆ ಪಾತ್ರರಾಗಿ ಧನ್ಯತಾ ಭಾವವನ್ನು ಹೊಂದಿದರು. ■

ವರದಿ

ಮಹಾಂತೇಶ ಮು.

ಅಂಚೆ ಕೆ ಜುನಿಪೇಠ
ರಾಮದುರ್ಗ ತಾಲ್ಲೂಕು,
ಬೆಳಗಾವಿ ಜಿಲ್ಲೆ.

# ಶೌಚಾಲಯ ಕಟ್ಟಿಸಿಕೊಳ್ಳುವಲ್ಲಿ ಶಾಲಾ ಮಕ್ಕಳ ಪ್ರೇರಣೆ

ಕಿಲ್ಲಾ ತೋರಗಲ್ಲ ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಮಾದರಿ ಗ್ರಾಮ ಎನ್ನಬಹುದು ಕಾರಣ ಕಿಲ್ಲ ತೋರಗಲ್ಲ ಗ್ರಾಮದಲ್ಲಿ ಬೆಳಗಾವಿಯ ಜಿ.ಪಂ. ಹಾಗೂ ಕೆ.ಜುನಿಪೇಠ ಗ್ರಾ.ಪಂ. ಮತ್ತು ಸ್ಥಳಿಯ ಸ.ಕಿ.ಪ್ರಾ.ಕ.ಗಂ ಶಾಲೆ ಸ.ಹಿ.ಪ್ರಾ ಉರ್ದು ಶಾಲೆ ಕಿಲ್ಲಾ ತೋರಗಲ್ಲರವರುಗಳ ಸಂಯುಕ್ತ ಆಶ್ರಯದಲ್ಲಿ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ಸ್ಥಳೀಯ ಮಟ್ಟದ ಪ್ರತಿ ಕುಟುಂಬ ಶಾಲೆ ಅಂಗನವಾಡಿಗಳಲ್ಲೂ ಶೌಚಾಲಯ ನಿರ್ಮಿಸಿ ಕೊಳ್ಳುವಂತೆ ಪ್ರೇರಣೆ ಹಾಗೂ ಸಹಕಾರ ನೀಡುವಂತೆ ಶಾಲಾ ಮಕ್ಕಳ ಜಾಥಾ ಹಾಗೂ ಜನರಲ್ಲಿ ಅರಿವು ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು.

ಸದರಿ ಕಾರ್ಯಕ್ರಮಕ್ಕೆ ಮುಂಚೆ ಪೂರ್ವಭಾವಿಯಾಗಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಶ್ರೀ.ಬಸವರಾಜ ಕೆ. ರಾಯಪ್ಪರವರು ಗ್ರಾ.ಪಂ. ವ್ಯಾಪ್ತಿಯಲ್ಲಿನ ಗ್ರಾಮಗಳಾದ ಖಾನಪೇಠ.ಕೆ ಜುನಿಪೇಠ, ಗೊಣಗನೂರ, ಹಾಲೊಳ್ಳಿ ಹಾಗೂ ಬಂಡೆಮ್ಮನಗರ ತೋಟದ ಶಾಲೆ, ಸರ್ವಾಪೂರಗಳಲ್ಲಿನ ಶಾಲಾ ಶಿಕ್ಷಕ/ಶಿಕ್ಷಕಿಯರು, ಅಂಗನವಾಡಿ ಆಶಾ ಕಾರ್ಯಕರ್ತೆಯರು ಮತ್ತು ವಿಕಲಚೇತನ ಸಬಲೀಕರಣದ ಕಾರ್ಯಕರ್ತೆಯರಿಗಾಗಿ ಗ್ರಾ.ಪಂ.ದಲ್ಲಿ ಸಭೆ ನಡೆಸಿ ಕಾರ್ಯಕ್ರಮ ಯೋಜನೆ ರೂಪಿಸಿದರು.

ಗ್ರಾ.ಪಂ ವ್ಯಾಪ್ತಿಯ ಪ್ರತಿ ಹಳ್ಳಿಗಳಲ್ಲೂ ಸುಮಾರು ಆರು ದಿನಗಳವರೆಗೆ ಜನರಿಗೆ ಶುಚಿತ್ವದ ಬಗೆಗೆ ಆರೋಗ್ಯ. ಶಿಕ್ಷಣ ನೀಡುವುದರ ಮೂಲಕ ನೈರ್ಮಲ್ಯದ ಅಗತ್ಯತೆಯನ್ನು ಮನವರಿಕೆ ಮಾಡಿಕೊಡುವುದು ಹಾಗೂ ಎಲ್ಲ ಕುಟುಂಬಗಳಿಗೂ ವೈಯಕ್ತಿಕ ಶೌಚಾಲಯ ಶಾಲೆ. ಅಂಗನವಾಡಿ ಮತ್ತು ಸಮುದಾಯ ಶೌಚಾಲಯ ನಿರ್ಮಿಸುವಲ್ಲಿ ಜನರನ್ನು ಸಹ ಬಾಗಿತ್ವವನ್ನು ವಹಿಸುವಂತೆ ಪ್ರೇರೇಪಿಸುವುದು. ಶೌಚಾಲಯ ಮಹತ್ವ ಸಾರುವ



**ಅಂಗನವಾಡಿ/ಆಶಾ ಕಾರ್ಯಕರ್ತೆಯರು ಹಾಗೂ ವಿಕಲಚೇತನ ಸಬಲೀಕರಣದ ಸದಸ್ಯರು ಗ್ರಾ.ಪಂ.ಸದಸ್ಯರು ಸಿಬ್ಬಂದಿ ವರ್ಗ ಗ್ರಾಮಸ್ಥರು ಸಕ್ರಿಯವಾಗಿ ಪಾಲ್ಗೊಂಡು ಶೌಚಾಲಯ ನಿರ್ಮಾಣದ ಅವಶ್ಯಕತೆ ಹಾಗೂ ಮಹತ್ವದ ಬಗ್ಗೆ ತಿಳಿಹೇಳುವ ಘೋಷಣೆಯನ್ನು ಕೂಗುತ್ತಾ ಪ್ರತಿ ಓಣಿ ಓಣಿಯ ಮನೆ ಮನೆಗೂ ಸಂಚರಿಸಿ ಜನ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.**



ಫಲಕಗಳನ್ನು ಪ್ರತಿ ಗ್ರಾಮದಲ್ಲಿಯೂ ಅಂಟಿಸುವುದು. ಶಾಲಾ ಮಕ್ಕಳಿಂದ ಪ್ರಭಾತ ಪೇರಿ ಪಾಲಕರಿಗೆ ಪತ್ರ ಚಳುವಳಿಯ ಮೂಲಕ ಎಲ್ಲರನ್ನು ಶೌಚಾಲಯದ ಅಗತ್ಯತೆ ಮತ್ತು ಮಹತ್ವದ ಬಗ್ಗೆ ಜನ ಜಾಗೃತಿಗೊಳಿಸಲು ಸಲಹೆ ಮಾರ್ಗದರ್ಶನ ನೀಡುವುದರೊಂದಿಗೆ ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿತ್ತು.

ಗ್ರಾ.ಪಂ ಕಾರ್ಯಾಲಯದ ಮುಂದುಗಡೆಯಿಂದ ಆರಂಭಗೊಂಡ ಸ್ವಚ್ಛ ಭಾರತ ಅಭಿಯಾನದ ಶಾಲಾ ಮಕ್ಕಳ ಶಿಸ್ತಿನ ಪ್ರಭಾತ ಪೇರಿಯಲ್ಲಿ ಸ್ಥಳಿಯ ಶಾಲಾ ಶಿಕ್ಷಕಿ ವೃಂದ. ಅಂಗನವಾಡಿ/ಆಶಾ ಕಾರ್ಯಕರ್ತೆಯರು ಹಾಗೂ ವಿಕಲಚೇತನ ಸಬಲೀಕರಣದ ಸದಸ್ಯರು ಗ್ರಾ.ಪಂ.ಸದಸ್ಯರು ಸಿಬ್ಬಂದಿ ವರ್ಗ ಗ್ರಾಮಸ್ಥರು ಸಕ್ರಿಯವಾಗಿ ಪಾಲ್ಗೊಂಡು ಶೌಚಾಲಯ ನಿರ್ಮಾನದ ಅವಶ್ಯಕತೆ ಹಾಗೂ ಮಹತ್ವದ ಬಗ್ಗೆ ತಿಳಿಹೇಳುವ ಘೋಷಣೆಯನ್ನು ಕೂಗುತ್ತಾ ಪ್ರತಿ ಓಣಿ ಓಣಿಯ ಮನೆ ಮನೆಗೂ ಸಂಚರಿಸಿ ಜನ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ಕಿಲ್ಲಾ ತೋರಗಲ್ಲದ ಸ.ಹಿ.ಪ್ರಾ.ಕ.ಗಂ.ಶಾಲೆಯಲ್ಲಿ ಜರುಗಿದ ಜಾಥಾ ಸಮಾರೋಪ ಸಮಾರಂಭವು ಗ್ರಾ.ಪಂ. ಕೆ ಜುನಿಪೇಠ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಶ್ರೀ. ಪ್ರಭಾಕರ ಬಾ ಕಾಟಕರ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೆ ಜುನಿಪೇಠ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಶ್ರೀ. ಬಸವರಾಜ ಕೆ ರಾಯಪ್ಪನವರ ಅವರು ಜನತೆಯಲ್ಲಿ ಸ್ವಚ್ಛ ಪರಿಸರ ಶುಚಿತ್ವದ ಬಗ್ಗೆ ಅರಿವು ನೀಡಿ ಶೌಚಾಲಯ ನಿರ್ಮಿಸಿಕೊಳ್ಳುವವರಿಗೆ ಸರಕಾರದಿಂದ ದೊರಕುವಂತ ಸಹಾಯ ಧನದ ಬಗ್ಗೆ ತಿಳಿ ಹೇಳಿದರು ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಶ್ರೀ. ಮಹಾಂತೇಶ ಬ ಶಿದ್ದಿಬಾವಿರವರು ಮಾತನಾಡಿ, ಇದೊಂದು ಜನೋಪಯೋಗಿಯಾದ ಅದ್ಬುತವಾದ ಕಾರ್ಯಕ್ರಮ ಇದರ ಪರಿಪೂರ್ಣವಾಗಿ ಅನುಷ್ಠಾನಗೊಳ್ಳಬೇಕಾದರೆ ನಮ್ಮ ಮಕ್ಕಳಿಂದ ಮಾತ್ರ ಸಾಧ್ಯ. ಯಾಕೆಂದರೆ ಪಾಲಕರು ಮಕ್ಕಳ ಮಾತಿಗೆ ಹಠಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತಾರೆ ಆದ್ದರಿಂದ ಮಕ್ಕಳು ಸಿಹಿ ತಿಂಡಿ ಚಾಕ್ಲೇಟ್ಗಾಗಿ ಹಟ ಹಿಡಿಯದೇ ಶೌಚಾಲಯ ನಿರ್ಮಾನಕ್ಕಾಗಿ ಹಠ ಹಿಡಿಯು ವಂತಾಗಬೇಕೆಂದು ಕರೆ ನೀಡಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ಕೆ. ಜುನಿಪೇಠ ಗ್ರಾ.ಪಂ ಸದಸ್ಯ ಶ್ರೀ.ಮುನೀರ ಬ ನಧಾಪ, ದಲೀಪ ಕ ಬೋವಿ. ಗೌ ಶಿಕ್ಷಕ ಶ್ರೀ.ಎಂ.ಎಸ್.ಕೋತಂಬ್ರಿ ಹಾಗೂ ಶ್ರೀ. ಐ.ಎ.ಖಾಜಿರವರು ಆಗಮಿಸಿದ್ದರು. ಸ.ಹಿ.ಪ್ರಾ.ಕ ಗಂ.ಶಾಲೆ ಕಿಲ್ಲಾ ತೋರಗಲ್ಲದ ಪ್ರಧಾನ ಗುರುಗಳಾದ ಶ್ರೀಶೇಖರವರು ಮಕ್ಕಳಿಗೆ ಶೌಚಾಲಯ ನಿರ್ಮಾಣಕ್ಕಾಗಿ ಮನವಿ ಪತ್ರ ಪಾಲಕರಿಗಾಗಿ ನೀಡಿದರು ಹಾಗೂ ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತಿಸಿದರು. ಸ.ಹಿ.ಪ್ರಾ ಉರ್ದು ಶಾಲಾ ಸಹ ಶಿಕ್ಷಕಿಯಾದ ಶ್ರೀಮತಿ. ಮೀನಾಕ್ಷಿ ರಂಗೋಲಿರವರು ಕೊನೆಯಲ್ಲಿ ವಂದನಾರ್ಪಣೆಯನ್ನು ಸಲ್ಲಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಸಮಾರೋಪಗೊಂಡಿತು. ■

ವರದಿ




**ಮುರಳಿ.ಕೆ**

ಸಂಶೋಧನ ಅಧಿಕಾರಿ
ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ (ಅ.ನ.ಸಾ.ರಾ.ಗ್ರಾ ಮತ್ತು ಪಂ.ರಾ.ಸಂಸ್ಥೆ)
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಅವರಣ,
ಶ್ರೀರಾಂಪುರ ಕ್ರಾಸ್, ಜಕ್ಕೂರು
ಬೆಂಗಳೂರು–560064


# ಸುಸ್ಥಿರ ಅಭಿವೃದ್ಧಿ

ಭಾರತ ಹಳ್ಳಿಗಳಿಂದ ಕೂಡಿದ ದೇಶ, ಬಹುತೇಕ ಜನರು ಇಂದಿಗೂ ಕೃಷಿಯನ್ನೇ ಅವಲಂಭಿತರಾಗಿದ್ದಾರೆ. ಶೇಕಡ. 65 ರಷ್ಟು ಜನರು ಇಂದಿಗೂ ಗ್ರಾಮಗಳಲ್ಲಿ ಜೀವಿಸುತ್ತಿರುವುದನ್ನು ಕಾಣಬಹುದು. ಭಾರತಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳಲ್ಲಿ ಗ್ರಾಮಗಳು ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದಾಗಿದೆ. ಗ್ರಾಮಗಳಲ್ಲಿನ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಶುದ್ಧ ಕುಡಿಯುವ ನೀರು, ಜನರ ಆರ್ಥಿಕ ಪರಿಸ್ಥಿತಿ, ಜನರ ಜೀವನ ಗುಣಮಟ್ಟ, ನೈಸರ್ಗಿಕ ಸಂಪನ್ಮೂಲಗಳು, ಗೃಹ ನಿರ್ಮಾಣ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿರುವುದನ್ನು ಕಾಣಬಹುದು. ಅಭಿವೃದ್ಧಿಯ ಹೆಸರಿನಲ್ಲಿ ಗ್ರಾಮಗಳು ತಮ್ಮ ಮೂಲ ಸ್ವರೂಪವನ್ನು ಉಳಿಸಿಕೊಂಡು ಹೋಗಬೇಕಾಗಿದೆ.

ಈ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ, ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಮತ್ತು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಅಂಗ ಸಂಸ್ಥೆಯಾದ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರದ ಸಹಯೋಗದಲ್ಲಿ "ಸುಸ್ಥಿರ ಅಭಿವೃದ್ಧಿ ಗುರಿ ಮತ್ತು ಗ್ರಾಮ ಪಂಚಾಯತಿಗಳು" ಎಂಬ ವಿಷಯದ ಬಗ್ಗೆ 2 ದಿನಗಳ ರಾಷ್ಟ್ರ ಮಟ್ಟದ ತರಬೇತುದಾರರ ತರಬೇತಿ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಅಯೋಜಿಸಲಾಗಿತ್ತು. ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಪಂಚಾಯತ್ ರಾಜ್ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳಾದ ಶ್ರೀ. ಖುಷ್ವಂತ್ ಸಿಂಗ್ ಸೇಥಿ, ಸುಸ್ಥಿರ ಅಭಿವೃದ್ಧಿ ಎಂದರೆ ನಮ್ಮ ಗ್ರಾಮಗಳ ಮೂಲಕ್ಕೆ ದಕ್ಕೆ ಬರದ ರೀತಿಯಲ್ಲಿ ಅಭಿವೃದ್ಧಿ ಹೊಂದುವುದೇ ಸುಸ್ಥಿರ ಅಭಿವೃದ್ಧಿ ಎಂದು ತಿಳಿಸಿದರು.






ಅಭಿವೃದ್ಧಿಯ ಹೆಸರಿನಲ್ಲಿ ನಾವು ಗ್ರಾಮಗಳಲ್ಲಿನ ಅಮೂಲ್ಯ ಸಂಪನ್ಮೂಲಗಳಾದ ನೈಸರ್ಗಿಕ ಸಂಪನ್ಮೂಲ, ಮರ-ಗಿಡಗಳು, ಕೆರೆ-ಕುಂಟೆಗಳು, ಕೃಷಿ ಭೂಮಿ, ನೀರಿನ ಮೂಲಗಳನ್ನು ನಾಶ ಮಾಡಿ ಅಭಿವೃದ್ಧಿ ಹೊಂದುವುದಲ್ಲ. ಇರುವ ಸಂಪನ್ಮೂಲಗಳನ್ನು ಉಳಿಸಿಕೊಂಡು ನಮ್ಮ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದು ನಿಜವಾದ ಅಭಿವೃದ್ಧಿ ಎಂದು ತಿಳಿಸಿದರು.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕರಾದ ಶ್ರೀ. ಪ್ರಾಣೇಶ್‌ರಾವ್‌ರವರು ಮಾತನಾಡಿ



ಗ್ರಾಮಗಳಲ್ಲಿನ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮುಂದಿನ ಪೀಳಿಗೆಗೆ ಸಂಪನ್ಮೂಲಗಳನ್ನು ಉಳಿಸಿಹೋಗಬೇಕು ಎಂದರು. ಸಂಸ್ಥೆಯ ಮೂಲಕ "ತರಬೇತಿ ನಡೆ ಗ್ರಾಮದ ಕಡೆ" ಎಂಬ ಕಾರ್ಯಕ್ರಮದ ಮೂಲಕ ಹಳ್ಳಿಗಳಿಗೆ ಹೋಗಿ ತರಬೇತಿಯನ್ನು ನೀಡುತ್ತಿದ್ದು, ಇದರಿಂದ ಗ್ರಾಮಗಳ ಸಂಪನ್ಮೂಲಗಳ ಬಗ್ಗೆ ಗ್ರಾಮಸ್ಥರಿಗೆ ಅರಿವು ಮೂಡಿಸಲು ಸಾಧ್ಯವಾಗುತ್ತಿದೆ ಎಂದರು.

ಕಾರ್ಯಾಗಾರದಲ್ಲಿ ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ, ಒರಿಸ್ಸಾ, ಕರ್ನಾಟಕ ಸೇರಿದಂತೆ ಉತ್ತರ ಮತ್ತು ದಕ್ಷಿಣದ 15 ರಾಜ್ಯಗಳ ಅಧಿಕಾರಿಗಳು ಭಾಗವಹಿಸಿದ್ದರು. ಬಡತನ ನಿವಾರಣೆ, ಆರೋಗ್ಯ ಮತ್ತು ಶಿಕ್ಷಣ, ಮಹಿಳಾ ಸಬಲೀಕರಣ, ಲಿಂಗ ಸಮಾನತೆ, ನೀರು ಮತ್ತು ನೈರ್ಮಲ್ಯ, ಸ್ಥಳೀಯ ಆರ್ಥಿಕ ಅಭಿವೃದ್ಧಿ, ನಮ್ಮ ಗ್ರಾಮ ನಮ್ಮ ಯೋಜನೆ, ಹವಾಮಾನ ವೈಪರಿತ್ಯ ಬದಲಾವಣೆ ಮತ್ತು ಪರಿಸರ ಸ್ನೇಹಿ ವ್ಯವಸ್ಥೆ ಬಗ್ಗೆ ವಿಷಯಗಳನ್ನು ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.

ಭಾರತ ಒಂದು ಕೃಷಿ ರಾಷ್ಟ್ರ ಇಂದಿಗೂ ಭಾರತದಲ್ಲಿ ಹಸಿವು ಮತ್ತು ಬಡತನದಿಂದ ಮೇಲೆ ಬರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣಗಳೇನು, ಬಡತನ ಮತ್ತು ಹಸಿವು ಹೋಗಲಾಡಿಸಲು ಯಾವ-ಯಾವ ಕ್ರಮಗಳನ್ನು ಅನುಸರಿಸಬೇಕು ಆರೋಗ್ಯ ಹಾಗೂ ಶಿಕ್ಷಣ ಗುಣಮಟ್ಟವನ್ನು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು, ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯವನ್ನು ಕಾಪಾಡಲು ಯಾವ ಕ್ರಮಗಳನ್ನು ಅನುಸರಿಸಬೇಕು ಇದರಲ್ಲಿ ಗ್ರಾಮದ ಜನರ ಸಹಭಾಗಿತ್ವದಲ್ಲಿ ಯಾವ ರೀತಿ ಅಭಿವೃದ್ಧಿ ಪಡಿಸಬಹುದು ಎಂಬುದರ ಬಗ್ಗೆ ವಿವಿಧ ರಾಜ್ಯಗಳಿಂದ ಬಂದಿದ್ದ ತಜ್ಞರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ತಜ್ಞ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಕೇರಳ ಸ್ಥಳೀಯ ಆಡಳಿತ ಸಂಸ್ಥೆಯ ನಿರ್ದೇಶಕರಾದ ಶ್ರೀ. ಜಾಯ್ ಎಲ್ಮನ್ ಮತ್ತು ಭಾರತೀಯ ಸಾಮಾಜಿಕ ಅಭಿವೃದ್ಧಿ ಸಹಕಾರ ಸಂಸ್ಥೆಯ ಶ್ರೀಮತಿ. ನಿರ್ಮಲಸನು ಜಾರ್ಜ್‌ರವರು ಕೇರಳದ ಗ್ರಾಮಗಳಲ್ಲಿ ಸುಸ್ಥಿರ ಅಭಿವೃದ್ಧಿ ಚಟುವಟಿಕೆಗಳಿಂದ ಅಲ್ಲಿನ ನೈಸರ್ಗಿಕ ಸಂಪತ್ತು, ಅರಣ್ಯ ಸಂಪತ್ತು, ಜಲ ಸಂಪನ್ಮೂಲ, ಗ್ರಾಮಗಳ ಮೂಲಕ್ಕೆ ಧಕ್ಕೆಯಾಗದಂತೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸಿಕೊಟ್ಟರು. ■



ವರದಿ




**ರಾಜೇಂದ್ರ ದೇಸಾಯಿ**

ಪರಿಣಿತ ಬೋಧಕರು,
ಅಬ್ದುಲ್ ನಜೀರ್ ಸಾಬ್
ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಂಸ್ಥೆ ಮೈಸೂರು
ಪ್ರಾದೇಶಿಕ ಕೇಂದ್ರ ಧಾರವಾಡ.


**ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಲ್ಲಿ ಸಮುದಾಯವೇ ಸ್ವ ಪ್ರೇರಿತವಾಗಿ ನೀರಿನ ಕರ ಹಾಗೂ ಗ್ರಾಮ ಪಂಚಾಯತಿ ವಿಧಿಸುವ ಎಲ್ಲ ಕರಗಳನ್ನು ಖುದ್ದಾಗಿ ತಾವೇ ಗ್ರಾಮ ಪಂಚಾಯತಿಗೆ ಬಂದು ಭರಣಾ ಮಾಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿಯೇ ಅತೀ ಹೆಚ್ಚು ಕರವಸೂಲಿ ಮಾಡಿ ರಾಜ್ಯಕ್ಕೆ ಮಾದರಿಯಾಗಿದೆ.**

# ಗುಮ್ಮಗೋಳ ಗ್ರಾಮ ಪಂಚಾಯಿತಿ ಭೇಟಿ

ಸ್ಥಳೀಯ ಸರ್ಕಾರಗಳು ಗ್ರಾಮೀಣ ಮಟ್ಟದಲ್ಲಿ ಮೂಲಭೂತ ಅವಶ್ಯಕತೆಗಳಾದ ಶುದ್ಧ ಕುಡಿಯುವ ನೀರು, ನೈರ್ಮಲ್ಯ , ಬೀದಿ ದೀಪ, ರಸ್ತೆ ಸಂಪರ್ಕ, ಚರಂಡಿ, ವಸತಿ ಮುಂತಾದ ಅವಶ್ಯಕತೆಗಳನ್ನು ಒದಗಿಸುವದು ಪ್ರಾಥಮಿಕವಾದ ಕರ್ತವ್ಯ. ಈ ಎಲ್ಲ ಸೇವೆಗಳನ್ನು ಸಾಮನ್ಯವಾಗಿ ಎಲ್ಲಾ ಗ್ರಾಮ ಪಂಚಾಯಿತಿಗಳು ಪೂರೈಸುತ್ತಾ ಬರುತ್ತಿವೆ ಮತ್ತು ಅವುಗಳನ್ನು ನಿರಂತರವಾಗಿ ನಿರ್ವಹಿಸಿಕೊಂಡು ಹೋಗುವುದು ಅತ್ಯಂತ ಅವಶ್ಯವಾಗಿದೆ.

ಅದರ ಜೊತೆಗೆ ಸ್ವಂತ ಸಂಪನ್ಮೂಲಗಳ ಕ್ರೋಢೀಕರಣದ ಮಹತ್ವ ಅರಿತುಕೊಂಡು ಮತ್ತು ಸರಕಾರದ ಯೋಜನೆಗಳನ್ನು ಜನರಿಗೆ ನೇರವಾಗಿ ತಲುಪಿಸುವಲ್ಲಿ ಕೆಲವೇ ಗ್ರಾಮ ಪಂಚಾಯಿತಿಗಳು ಯಶಸ್ವಿಯಾಗುತ್ತಿವೆ. ಇಂತಹ ಪಂಚಾಯಿಗಳ ಸಾಲಿನಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಗುಮ್ಮಗೋಳ ಗ್ರಾಮ ಪಂಚಾಯಿತಿ ಕೂಡ ಒಂದು. ಆಂಧ್ರ ಪ್ರದೇಶದ ವಿಜಯನಗರಂ ಜಿಲ್ಲೆಯ ಡೆಂಕಡ ಮಂಡಳ ಪರಿಷತ್ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡ ಒಟ್ಟು 30 ಸದಸ್ಯರ ತಂಡವು ಗುಮ್ಮಗೋಳ ಗ್ರಾಮಕ್ಕೆ ಕ್ಷೇತ್ರ ಅಧ್ಯಯನಕ್ಕಾಗಿ ಭೇಟಿ ನೀಡಿತು.

ದಿನಾಂಕ 27-6-2017 ರಂದು ಧಾರವಾಡಕ್ಕೆ ಆಗಮಿಸಿದ ಈ ತಂಡವು ಜಿಲ್ಲಾ ಪಂಚಾಯಿತಿ ಕೇಂದ್ರ ಕಚೇರಿಗೆ ಭೇಟಿ ಕೊಟ್ಟಿತು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ. ಸ್ನೇಹಲ್ ಆರ್.ರವರು ತಂಡವನ್ನು ಆತ್ಮೀಯವಾಗಿ ಬರಮಾಡಿಕೊಂಡರು ಮತ್ತು ಕ್ಷೇತ್ರ ಭೇಟಿಗೆ ಆಗಮಿಸಿದ ತಂಡದ ಜೊತೆಗೆ ಇವರು ಎರಡೂ ರಾಜ್ಯಗಳ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಪ್ರಾದೇಶಿಕ ಕೇಂದ್ರ, ಧಾರವಾಡದ ಉಪ ನಿರ್ದೇಶಕರಾದ ಶ್ರೀ.ರುದ್ರಸ್ವಾಮಿಯವರು ಉಪಸ್ಥಿತರಿದ್ದರು.

ಎರಡನೇ ದಿನದಂದು ಆಂಧ್ರ ಪ್ರದೇಶದ ವಿಜಯನಗರಂ ಜಿಲ್ಲೆಯ ಡೆಂಕಡ ಮಂಡಳ ಪರಿಷತ್ ಅಧ್ಯಕ್ಷರು ಮತ್ತು ಸದಸ್ಯರುಗಳು ಧಾರವಾಡ ಜಿಲ್ಲಾ ಕೇಂದ್ರದಿಂದ 28 ಕಿ.ಮೀ. ಅಂತರದಲ್ಲಿ ಇರುವ ಗುಮ್ಮಗೋಳ ಗ್ರಾಮಕ್ಕೆ ಆಗಮಿಸಿದ ಕ್ಷೇತ್ರ ಭೇಟಿ ಅಧ್ಯಯನ ತಂಡಕ್ಕೆ ಭವ್ಯ ಸ್ವಾಗತ ಕೋರಿದರು.






ಗ್ರಾಮ ಪಂಚಾಯಿತಿಯಲ್ಲಿ ನಡೆದ ಸಭೆಯಲ್ಲಿ ಗ್ರಾಮ ಪಂಚಾಯಿತಿಯ ಬಗ್ಗೆ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಯಿತು. ಗ್ರಾಮ ಪಂಚಾಯಿತಿಯ ಕಂದಾಯ ಗ್ರಾಮಗಳಾದ ಗುಮ್ಮಗೋಳ ಮತ್ತು ಬ್ಯಾಲ್ಯಾಳ ಗ್ರಾಮಗಳು ಹೊಂದಿರುವ ಒಟ್ಟು ಕುಟುಂಬಗಳ ಜನಸಂಖ್ಯೆ, ಸಾಕ್ಷರತೆ ಬಗ್ಗೆ ಮತ್ತು ಗ್ರಾಮ ಪಂಚಾಯಿತಿಯ ಒಟ್ಟು ಚುನಾಯಿತ ಸದಸ್ಯರ ಮತ್ತು ಮಹಿಳಾ ಸದಸ್ಯರ ಮಾಹಿತಿ ಭೌಗೋಳಿಕ ಸಾಮಾಜಿಕ ಆರ್ಥಿಕ ಮತ್ತು ಉಪ ಕಸಬುಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲಾಯಿತು.

ಗುಮ್ಮಗೋಳ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಹಣಕಾಸಿನ ವಾಸ್ತವ ಸ್ಥಿತಿಯನ್ನು ವಿವರಿಸಲಾಯಿತು. ಇಲ್ಲಿ ಪಂಚಾಯತಿಗೆ ಬಂದ ತೆರಿಗೆ ಮತ್ತು ತೆರಿಗೇತರದಿಂದ ಬಂದ ಸ್ವಂತ ಆದಾಯ, ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಬಂದ ಅನಿರ್ಬಂಧಿತ ಮತ್ತು ನಿರ್ಬಂಧಿತ ಯೋಜನೆಗಳಿಂದ ಬಂದ ಅನುದಾನ ಮುಂತಾದವುಗಳ ಕುರಿತು ಸಂಪೂರ್ಣವಾಗಿ ವಿವರಿಸಲಾಯಿತು.

ಇದರ ಜೊತೆಗೆ ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಗೆ ಸಂಬಂದಿಸಿದ ವೆಬ್ ಸೈಟ್ ಕುರಿತು ಮಾಹಿತಿ, ಅದರಲ್ಲಿಯೂ ಮುಖ್ಯವಾಗಿ ಗುಮ್ಮಗೋಳ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಪಂಚತಂತ್ರ ತಂತ್ರಾಂಶ, ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ, ಗಾಂಧಿ ಸಾಕ್ಷಿ ಕಾಯಕ, ಇ–ಸ್ವತ್ತು 100 ಸೇವೆಗಳು ಮುಂತಾದ ವಿಷಯಗಳ ಬಗ್ಗೆ ಗ್ರಾಮ ಪಂಚಾಯಿತಿಗಳು ಹೇಗೆ ಕಾರ್ಯ ನಿರ್ವಹಣೆ ಮಾಡಿಕೊಂಡು ಬರುತ್ತಿವೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಲಾಯಿತು ಮತ್ತು ವಾರ್ಡ್ ಸಭೆ, ಗ್ರಾಮ ಸಭೆ ಮತ್ತು ಸಾಮಾನ್ಯ ಸಭೆಗಳ ಕುರಿತು ಮತ್ತು ಸಭೆಯ ನಡಾವಳಿಗಳ ಕುರಿತು ಮಾಹಿತಿಯನ್ನು ಗ್ರಾಮ ಪಂಚಾಯತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ಜಗದೀಶ್ ಹಡಪದರವರು ಸಂಪೂರ್ಣವಾದ ಮಾಹಿತಿಯನ್ನು ನೀಡಿದರು.

## ತೆರಿಗೆ ಸ್ವಂತ ಸಂಪನ್ಮೂಲ ಸಂಗ್ರಹ:

ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಲ್ಲಿ ಸಮುದಾಯವೇ ಸ್ವ ಪ್ರೇರಿತವಾಗಿ ನೀರಿನ ಕರ ಹಾಗೂ ಗ್ರಾಮ ಪಂಚಾಯತಿ ವಿಧಿಸುವ ಎಲ್ಲ ಕರಗಳನ್ನು ಖುದ್ದಾಗಿ ತಾವೇ ಗ್ರಾಮ ಪಂಚಾಯತಿಗೆ ಬಂದು ಭರಣಾ ಮಾಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿಯೇ ಅತಿ ಹೆಚ್ಚು ಕರವಸೂಲಿ ಮಾಡಿ ರಾಜ್ಯಕ್ಕೆ ಮಾದರಿಯಾಗಿದೆ ಎಂಬುದನ್ನು ಅಧ್ಯಯನಕ್ಕೆ ಬಂದ ತಂಡಕ್ಕೆ ಮಾಹಿತಿಯನ್ನು ನೀಡಲಾಯಿತು ಮತ್ತು ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನೀಡುವುದರ ಜೊತೆಗೆ, ಆಗಮಿಸಿದ ತಂಡದಿಂದ ಕರವಸೂಲಿ ಮಾಡುವಾಗ ಬರುವ ಸಮಸ್ಯೆಗಳ

## ಪ್ರಶಸ್ತಿಗಳ ವಿವರ

**ಗುಮ್ಮಗೋಳ ಗ್ರಾಮ ಪಂಚಾಯತಿ ಗ್ರಾಮೀಣ ಮಟ್ಟದಲ್ಲಿ ನೀಡುತ್ತಿರುವ ಸೇವೆಯನ್ನು ಗುರುತ್ತಿಸಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದನ್ನು ತಂಡಕ್ಕೆ ಈ ಕೆಳಗಿನಂತೆ ಮಾಹಿತಿಯನ್ನು ನೀಡಲಾಯಿತು.**

| ಕ್ರ. ಸಂ. | ಪ್ರಶಸ್ತಿಯ ಹೆಸರು | ಪಡೆದ ವರ್ಷ | ಪ್ರಶಸ್ತಿಯನ್ನು ನೀಡಿದವರು |
|---|---|---|---|
| 1 | ನಿರ್ಮಲ ಗ್ರಾಮ ಪುರಸ್ಕಾರ | 2007–08 | ಕೇಂದ್ರ ಸರ್ಕಾರ ಪುರಸ್ಕೃತ |
| 2 | ರಾಜ್ಯ ನೈರ್ಮಲ್ಯ ಪ್ರಶಸ್ತಿ | 2010–11 | ರಾಜ್ಯ ಸರ್ಕಾರ ಪುರಸ್ಕೃತ |
| 3 | ರಜತ ನೈರ್ಮಲ್ಯ | 2010–11 | ರಾಜ್ಯ ಸರ್ಕಾರ ಪುರಸ್ಕೃತ |
| 4 | ಪಂಚಾಯತಿಯ ಉತ್ತರದಾಯಿತ್ವ ಹಾಗೂ ಸಬಲೀಕರಣ ಪ್ರಶಸ್ತಿ | 2011–12 | ಕೇಂದ್ರ ಸರ್ಕಾರ ಪುರಸ್ಕೃತ |
| 5 | ಗೌರವ ಗ್ರಾಮ ಸಭಾ ಪುರಸ್ಕಾರ | 2011–12 | ಕೇಂದ್ರ ಸರ್ಕಾರ ಪುರಸ್ಕೃತ |
| 6 | ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ | 2013–14 | ರಾಜ್ಯ ಸರ್ಕಾರ ಪುರಸ್ಕೃತ |

ಕುರಿತು ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

### ಕಾಮಗಾರಿಗಳ ಪರಿಶೀಲನೆ:

ಕ್ಷೇತ್ರ ಭೇಟಿಗೆ ಆಗಮಿಸಿದ ಡೆಂಕಡ ಮಂಡಳ ಪರಿಷತ್ ತಂಡಕ್ಕೆ ತಾಲ್ಲೂಕಿನ ವಿಧಾನ ಸಭೆಯ ಸದಸ್ಯರಾದ ಸನ್ಮಾನ್ಯ ಶ್ರೀ.ಎಸ್.ಎಚ್. ಕೋನರೆಡ್ಡಿರವರು ತಂಡದ ಸದಸ್ಯರಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮತ್ತು ಮೂಲ ಸೌಕರ್ಯಗಳ ಸೇವೆಗಳ ಕುರಿತು ವಿವರಿಸಿದರು.

### ಕುಡಿಯುವ ನೀರು ವ್ಯವಸ್ಥೆ :

ತಂಡವು ಮೊದಲಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿಯ ಕಚೇರಿಗೆ ಭೇಟಿ ನೀಡಿತು. ನೀರು ನಿರ್ವಹಣೆಯ ಈ ಸಮಿತಿಯಿಂದ ಕುಡಿಯುವ ನೀರು ವ್ಯವಸ್ಥೆಯ ಉಸ್ತುವಾರಿ ಹಾಗೂ ನಿರ್ವಹಣೆಯನ್ನು ಆಯಾ ವಾರ್ಡಿನ ನೀರು ಮತ್ತು ನೈರ್ಮಲ್ಯ ಸಮಿತಿಯ ಉಸ್ತುವಾರಿಯಲ್ಲಿ ಸಮಿತಿಯಿಂದ ನೇಮಿಸಲಾದ ಸಿಬ್ಬಂದಿ ಮುಖಾಂತರ ಜರುಗಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಪಡೆಯಿತು ಮತ್ತು ಬಳಕೆದಾರರ ಶುಲ್ಕದಿಂದಲೇ ಕುಡಿಯುವ ನೀರಿನ ಯೋಜನೆಯ ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ಮನೆಗೆ ನೀರಿನ ಮೀಟರ್ ಅಳವಡಿಕೆ ಮತ್ತು ನೀರಿನ ಕರವನ್ನು ಬಳಕೆ ಪ್ರಮಾಣಕ್ಕೆ ಅನುಗುಣವಾಗಿ ವಸೂಲಿ ಮಾಡುವುದನ್ನು ತಂಡವು ಸೂಕ್ಷ್ಮವಾಗಿ ಗಮನಿಸಿತು. ಮತ್ತು ಬಳಕೆದಾರರೊಂದಿಗೆ ಚರ್ಚಿಸಿತು. ಸಮಿತಿಯ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೂಡ (ಆರ್.ಓ. ಪ್ಲಾಂಟ್) ಪರಿಶೀಲಿಸಿದ್ದು, ನೀರು ಪೂರೈಕೆಗೆ ಸೋಲಾರ ವ್ಯವಸ್ಥೆ ಅಳವಡಿಕೆಯನ್ನು ಕೂಡ ಗಮನಿಸಿತು.

ತದನಂತರ ತಂಡವು, ಅದರಲ್ಲೂ ಮಹಿಳಾ ಸದಸ್ಯರು ಅಂಗನವಾಡಿಗೆ ಭೇಟಿ ನೀಡಿ, ಅಂಗನವಾಡಿಯ ಕಾರ್ಯ ನಿರ್ವಹಣೆ, ಆಹಾರ ಹಂಚಿಕೆ ಪದ್ಧತಿ, ಮಕ್ಕಳ ಮತ್ತು ತಾಯಂದಿರ ಆರೋಗ್ಯ ಸ್ಥಿತಿಗತಿಗಳ ಕುರಿತು ಚರ್ಚಿಸಿದರು. ನೇರವಾಗಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಾಲೆಯ ಅಭಿವೃದ್ಧಿ ಸಮಿತಿಯ ಬಗ್ಗೆ, ಶಾಲೆಯ ಮಧ್ಯಾಹ್ನದ ಬಿಸಿ ಊಟದ ಬಗ್ಗೆ ಮತ್ತು ಕೇಟರಿಂಗ್ ಪದ್ಧತಿಯ ಬಗ್ಗೆ ಸಂಪೂರ್ಣವಾಗಿ ಚರ್ಚಿಸಿದರು. ಆಂಧ್ರ ಪ್ರದೇಶದ ಮತ್ತು ಕರ್ನಾಟಕದಲ್ಲಿನ ವ್ಯವಸ್ಥೆಯ ಕುರಿತು ಚರ್ಚೆ ನಡೆಸಿದರು.

### ಗ್ರಾಮ ನೈರ್ಮಲ್ಯ ವ್ಯವಸ್ಥೆ; ತ್ಯಾಜ್ಯ ವಸ್ತುಗಳ ವಿಲೇವಾರಿ ಘಟಕದ ಭೇಟಿ:

ಗ್ರಾಮೀಣ ಪ್ರದೇಶಗಳಲ್ಲಿ ಈಗಷ್ಟೆ ಘನತ್ಯಾಜ್ಯ ನಿರ್ವಹಣೆಯ ಕುರಿತು ಎಚ್ಚರಿಕೆಯನ್ನು ವಹಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಸಿಗುವ ಬಹುತೇಕ ಘನತ್ಯಾಜ್ಯವು ಮರುಬಳಕೆಗೆ ಉಪಯುಕ್ತವಾಗಿರುತ್ತದೆ. ಕಸವನ್ನು ವಿಂಗಡಿಸಿ ಬಳಸಲು ಸಾದ್ಯವಿರುವಂತೆ ಗ್ರಾಮ ಪಂಚಾಯತಿಗಳು ಯೋಜನೆಯನ್ನು ರೂಪಿಸಿದ್ದನ್ನು, ಗ್ರಾಮಗಳಲ್ಲಿ ಕಸಗಳನ್ನು ಬೀದಿಗಳಲ್ಲಿ ಹಾಕದೇ ತ್ಯಾಜ್ಯ ವಸ್ತುಗಳನ್ನು ಕಸದ ತೊಟ್ಟಿಗೆ ಹಾಕುವುದನ್ನು, ವಿಲೇವಾರಿ ಘಟಕಗಳ ನಿರ್ಮಾಣವನ್ನು ತಂಡವು ಪರಿಶೀಲಿಸಿತು.

### ಕಸ ವಿಲೇವಾರಿ ವಾಹನಗಳು:

ಗ್ರಾಮ ಪಂಚಾಯತಿಯ ಸ್ವಂತ ಕಸ ವಿಲೇವಾರಿ




ವಾಹನಗಳಾದ ಒಂದು ಟ್ರ್ಯಾಕ್ಟರ್ ಹಾಗೂ ಒಂದು ಟಾಟಾ ಆಫೆ ವಾಹನ ಖರೀದಿಸಿದ್ದು, ಪ್ರತಿ ನಿತ್ಯ ನಿಯಮಿತವಾಗಿ ವಾರ್ಡ್‌ಗಳಲ್ಲಿ ಮನೆಗಳಿಂದ ಕಸಗಳನ್ನು ಸಂಗ್ರಹಿಸಿ, ಗ್ರಾಮದ ಹೊರ ವಲಯದಲ್ಲಿ ಘನತ್ಯಾಜ್ಯ ವಿಲೇವಾರಿ ಪ್ರದೇಶಕ್ಕೆ ಸಾಗಿಸುವುದನ್ನು ಗಮನಿಸಿತು.

### ಶೌಚಾಲಯಗಳು:



ಗುಮ್ಮಗೋಳ ಗ್ರಾಮದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಶೌಚಾಲಯಗಳನ್ನು ಸೂಕ್ಷ್ಮವಾಗಿ ಗಮನಿಸಿತು. ಶೌಚಾಲಯಗಳನ್ನು ನಿರ್ಮಿಸುವುದು ಮುಖ್ಯವಾಗದೇ ಅದರ ಬಳಕೆ ಮುಖ್ಯ ಎಂದು ತಂಡವು ಅದರ ಲಾಭವನ್ನು ಕೂಡ ತಂಡದ ಕೆಲ ಸದಸ್ಯರ ಜೊತೆಗೆ ಚರ್ಚಿಸಿತು. ಕೆಲವು ಮಹಿಳಾ ಸದಸ್ಯರು ಗ್ರಾಮದ ಮನೆಗಳಿಗೆ ಭೇಟಿ ನೀಡಿ ಅಡುಗೆ ಮನೆ, ಅಡುಗೆ ಇಂಧನ ಸಾಧನಗಳನ್ನು, ಆಹಾರ ಪದ್ಧತಿ, ತಯಾರಿಸುವ ವಿಧಾನ ಕೂಡ ಚರ್ಚಿಸಿತು.

### ರಸ್ತೆ ಮತ್ತು ಚರಂಡಿಗಳ ನಿರ್ವಹಣೆ ವ್ಯವಸ್ಥೆ:

ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಚರಂಡಿ ವ್ಯವಸ್ಥೆ ಮತ್ತು ರಸ್ತೆಗಳು ಅತ್ಯಂತ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಿದ್ದನ್ನು ತಂಡವು ಸೂಕ್ಷ್ಮವಾಗಿ ಪರಿಶೀಲಿಸಿತು. ಅಲ್ಲದೇ ಸ್ವಚ್ಛತಾ ದೂತದಾರರನ್ನು ಆಯ್ಕೆಮಾಡಿದ್ದು, ಅವರಿಂದ ಗ್ರಾಮದ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರುತ್ತಿದೆ. ಪ್ರತಿ ತಿಂಗಳು ಪ್ರತಿ ಸಿಬ್ಬಂದಿಗೆ ರೂ.100-00 ರಂತೆ ದೂರವಾಣಿ ಖರ್ಚಿಗಾಗಿ ಸಂದಾಯ ಮಾಡುತ್ತಾರೆ ಎಂಬ ಮಾಹಿತಿಯನ್ನು ತಂಡವು ಪಡೆದುಕೊಂಡಿತು.

ಇದಲ್ಲದೇ ಗ್ರಾಮದ ಪ್ರತಿಯೊಂದು ಬೀದಿಗೂ ಸಾಹಿತಿಗಳ ಮತ್ತು ಗಣ್ಯರ ಹೆಸರುಗಳೊಂದಿಗೆ ನಾಮಫಲಕ ಅಳವಡಿಕೆ ಗ್ರಾಮದ ಹಿರಿಮೆಯನ್ನು ಎತ್ತಿ ಹಿಡಿಯುತ್ತಿದೆ. ಇದಲ್ಲದೇ ಸೋಲಾರ ಘಟಕ, ಸಮುದಾಯ ಭವನ, ಆಶಾ ಮತ್ತು ಆರೋಗ್ಯ ಕಾರ್ಯಕರ್ತೆಯರ ಕಾರ್ಯಚಟುವಟಿಕೆಗಳನ್ನು ಕೂಡ ತಂಡವು ಚರ್ಚಿಸಿ ಅವರಿಂದ ಮಾಹಿತಿಯನ್ನು ಪಡೆದುಕೊಂಡಿತು.

### ನಮ್ಮ ಹೊಲ ನಮ್ಮ ರಸ್ತೆ ಯೋಜನೆ:

ನೇರವಾಗಿ ತಾಲ್ಲೂಕು ಪಂಚಾಯತ ನವಲಗುಂದಕ್ಕೆ ತೆರಳುವ ಮಾರ್ಗದಲ್ಲಿ "ನಮ್ಮ ಹೊಲ ನಮ್ಮ ರಸ್ತೆ ಯೋಜನೆ" ಅಡಿಯಲ್ಲಿ ನಿರ್ಮಾಣವಾಗುತ್ತಿರುವ ನವಲಗುಂದ ತಾಲ್ಲೂಕು ಪಂಚಾಯತಿಯ ವ್ಯಾಪ್ತಿಯಲ್ಲಿ ಈವರೆಗೆ 630 ಕಿ.ಮೀ. ನಮ್ಮ ಹೊಲ ನಮ್ಮ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, 500 ಕಿ.ಮೀ. ರಸ್ತೆಗಳು ಸಂಪೂರ್ಣಗೊಂಡಿದೆ ಇದರಲ್ಲಿ 152 ರಸ್ತೆಗಳು ಪೂರ್ಣಗೊಂಡಿದೆ.

### ನವಲಗುಂದ ತಾಲ್ಲೂಕು ಪಂಚಾಯತಿಗೆ ಭೇಟಿ:

ಆಂಧ್ರ ಪ್ರದೇಶದ ಮಂಡಲ ಪರಿಷತ್ ಅಧ್ಯಕ್ಷರಾದ ಶ್ರೀ.ಕೆ.ಚಂದ್ರಶೇಖರರಾವ್ ಮಾತನಾಡಿ, ಆಂಧ್ರದಲ್ಲಿ ತಾಲ್ಲೂಕು ಪಂಚಾಯತಿಗೆ ಅಧಿಕಾರ ಜವಾಬ್ದಾರಿ ಹೆಚ್ಚಿಗೆ ಇದೆ. ಆದರೆ ಗ್ರಾಮ ಪಂಚಾಯತಿ ಅಭಿವೃದ್ಧಿ ದೃಷ್ಟಿಯಿಂದ ನೋಡುವುದಾದರೆ, ಫಲಾನುಭವಿಗಳ ಆಯ್ಕೆ, ಕಾಮಗಾರಿಗಳ ಅನುಷ್ಠಾನ, ಅನುದಾನ ಬಿಡುಗಡೆ ಕುರಿತು ವಿಕೇಂದ್ರೀಕರಣ ದೃಷ್ಟಿಯಿಂದ ನೋಡುವುದಾದರೆ ಕರ್ನಾಟಕ ಒಂದು ಹೆಜ್ಜೆ ಮುಂದೆ ಇದೆ ಎಂದರು.

ತದನಂತರ ಕ್ಷೇತ್ರ ಭೇಟಿಯ ತಂಡವು ನೇರವಾಗಿ ಸವದತ್ತಿ ಯಲ್ಲಮ್ಮ ಗುಡ್ಡಕ್ಕೆ ತೆರಳಿ ದೇವಿಯ ದರ್ಶನ ಪಡೆದು ಧಾರವಾಡಕ್ಕೆ ಮರಳಿತು. ಮರುದಿನ ಕ್ಷೇತ್ರ ಭೇಟಿಗೆ ಆಗಮಿಸಿದ ಈ ತಂಡವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಉಪ ನಿರ್ದೇಶಕರು ಮತ್ತು ಬೋಧಕ ಮತ್ತು ಸಿಬ್ಬಂದಿ ವರ್ಗವು ಆತ್ಮೀಯವಾಗಿ ಬಿಳ್ಕೊಟ್ಟಿತು. ■

ಯಶೋಗಾಥೆ



**ಗುರುರಾಜ.ಬ.ಕನ್ನೂರ**
ಎಂಎ(ಪತ್ರಿಕೋದ್ಯಮ)

ಹವ್ಯಾಸಿ ಲೇಖಕರು, ಓಂ ನಗರ,
ಬಸವನಬಾಗೇವಾಡಿ–586 203,
ವಿಜಯಪುರ ಜಿಲ್ಲೆ,

# ಶೌಚಾಲಯ ಕಟ್ಟಿಸಿಕೊಳ್ಳಲು ಪುಟ್ಟ ಬಾಲೆಯೇ ಪ್ರೇರಣೆ

ಪುಟ್ಟ ಮಗುವಿಗೆ ಯಾವ ರೀತಿ ಕೆಲವೊಂದು ಪರಿಣಾಮಗಳು ಅದ್ಭುತ ಬದಲಾವಣೆ/ಪರಿವರ್ತನೆ ತರುತ್ತವೆ ಎಂಬುದಕ್ಕೆ ಪುಟ್ಟ ಬಾಲೆ ಪೃಥ್ವಿ ಚನ್ನಯ್ಯಸ್ವಾಮಿ ಹಿರೇಮಠ ಸಾಕ್ಷಿಯಾಗುತ್ತಾಳೆ.

ಪುಟ್ಟ ಬಾಲಕಿಯಾದ ಪೃಥ್ವಿ ಚನ್ನಯ್ಯಸ್ವಾಮಿ ಹಿರೇಮಠಗೆ ಒಂದು ದಿನ ರಾತ್ರಿಯ ಸಮಯದಲ್ಲಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಹಳ್ಳಿಗೆ ಧಾರ್ಮಿಕ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ವಾಹನದಲ್ಲಿ ತೆರಳುತ್ತಿದ್ದ ವೇಳೆಯಲ್ಲಿ ಗ್ರಾಮದ ಹೊರವಲಯದಲ್ಲಿ ಹೆಣ್ಣು ಮಕ್ಕಳು ಹಾಗೂ ಪುರುಷರು ರಸ್ತೆ ಬದಿಯಲ್ಲಿ ಶೌಚಕ್ಕೆ ಕುಳಿತಾಗ ವಾಹನದ ಬೆಳಕು ಅವರತ್ತ ಬಿದ್ದಾಗ ಕೂಡಲೇ ಮುಖ ಕೆಳಗೆ ಮಾಡಿ ನಾಚಿಕೆಯಿಂದ ನಿಂತ ದೃಶ್ಯ, ಮಾಧ್ಯಮ ಹಾಗೂ ಪತ್ರಿಕೆಗಳಲ್ಲಿ ಶೌಚಕ್ಕೆ ತೆರಳಿದಾಗ ಹಾವು ಕಚ್ಚಿ ಸತ್ತಿರುವ ಉದಾಹರಣೆಗಳನ್ನು ಕಂಡು ಬಯಲು ಬಹಿರ್ದೆಸೆ ಹೋದಂತಹ ಸಂದರ್ಭದಲ್ಲಿ ಮಹಿಳೆಯರ/ಬಾಲಕಿಯರ ಅತ್ಯಾಚಾರಕ್ಕೆ ಯತ್ನಿಸಿದ್ದ ಅನೇಕ ಉದಾಹರಣೆಗಳು ಇವಳ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದವು.

ಕೂಡಲೇ ಅವಳು ಮನೆಯಲ್ಲಿ ತಾಯಿಯ ಹತ್ತಿರ ಬರೀ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಶೌಚಗಳು ಇದ್ದರೆ ಸಾಕೇ? ಅಮ್ಮಾ ಎಂದು ಪ್ರಶ್ನೆ ಮೇಲೆ ಪ್ರಶ್ನೆ ಹಾಕುತ್ತಾ, ಈ ಕುರಿತು ಕೂಡಲೇ ನಮ್ಮ ತಾಲ್ಲೂಕಿನ ಸಾಕಷ್ಟು ಹಳ್ಳಿಗಳಲ್ಲಿ ಶೌಚಾಲಯಗಳಿಲ್ಲ, ಅವರಲ್ಲಿಗೆ ತೆರಳಿ ಈ ಕುರಿತು ಜಾಗೃತಿ ಮೂಡಿಸುತ್ತೇನೆ ಎಂದು ಹಟ ಹಿಡಿದಾಗ ಈ ಶೌಚಾಲಯ ಅಭಿಯಾನ ಪ್ರಾರಂಭಕ್ಕೆ ಕಾರಣವಾಯಿತು.



ಈ ಹಿನ್ನಲೆಯಲ್ಲಿ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಒಂಬತ್ತು ವರ್ಷದ ಪುಟ್ಟ ಬಾಲಕಿ ಪೃಥ್ವಿ ಚನ್ನಯ್ಯಸ್ವಾಮಿ ಹಿರೇಮಠ ಜು. 18.2017 ರಂದು ತಾಲ್ಲೂಕಿನ ಇಂಗಳೇಶ್ವರ ಎಂಬ ಗ್ರಾಮ ಪಂಚಾಯತ್ ಕೇಂದ್ರ ಸ್ಥಳದಲ್ಲಿ ಅಖಿಲ ಕರ್ನಾಟಕ ಬಸವ ಸಾಹಿತ್ಯ ಪರಿಷತ್, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ರೇಣುಕಾಚಾರ್ಯ ಪ್ರೌಢಶಾಲಾ ಆವರಣದಲ್ಲಿ ಬಯಲು ಶೌಚ ಮುಕ್ತ ಅಭಿಯಾನದಲ್ಲಿ ಬಯಲು ಶೌಚದ ಕುರಿತಾಗಿ ಮೈ ಜುಮ್ಮೆನ್ನುವ ಹಾಗೆಯೇ ಉಪನ್ಯಾಸ ಮಂಡಿಸಿದ ಹಿನ್ನಲೆಯಲ್ಲಿ ಪ್ರಸ್ತುತ ಆ ಗ್ರಾಪಂ ವ್ಯಾಪ್ತಿಯಲ್ಲಿ 255 ವೈಯಕ್ತಿಕ ಶೌಚಾಲಯಗಳನ್ನು ಸಾರ್ವಜನಿಕರು ತಾವಾಗಿಯೇ ಮುಂದಾಗಿ ನಿರ್ಮಿಸಿಕೊಳ್ಳುವುದಾಗಿ ಪಿಡಿಓ ಹತ್ತಿರ ಅರ್ಜಿ ಸಲ್ಲಿಸಿದ್ದಾರೆ. ಈಗಾಗಲೇ 22 ಶೌಚಾಲಯಗಳು ಸಂಪೂರ್ಣವಾಗಿ ಮುಗಿಸಿ ಬಳಸುತ್ತಿದ್ದಾರೆ ಎಂದು ಪಿಡಿಓ ಎಸ್.ಟಿ ಪಾಟೀಲ ಹೇಳಿದ್ದಾರೆ.

ಅಭಿಯಾನವನ್ನು ಆಯೋಜಿಸುವ ಹಿನ್ನಲೆಯಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಪೂರ್ವಭಾವಿಯಾಗಿ ಗ್ರಾ.ಪಂ. ಮಟ್ಟದಲ್ಲಿ ಸಭೆ ಕರೆದು ಅಭಿಯಾನವನ್ನು ವ್ಯವಸ್ಥೆ ರೀತಿಯಲ್ಲಿ ಆಯೋಜಿಸುವಂತೆ ಬಿ.ಎಸ್.ರಾಠೋಡ ಸೂಚಿಸಿದ್ದರು.



ಅಭಿಯಾನದಲ್ಲಿ ಪ್ರಮುಖವಾಗಿ ಭಾಷಣಗಾರ್ತಿಯಾಗಿದ್ದ ಒಂಬತ್ತರ ಬಾಲೆ ಪೃಥ್ವಿ ಹಿರೇಮಠ ಮಾತನಾಡಿ, ಸ್ವಚ್ಛತೆಯಲ್ಲಿ ದೇವರಿದ್ದಾನೆ. ಮೋದಿ ಅವರ ಆಶಯದಂತೆ ಪ್ರತಿಯೊಬ್ಬರು ವೈಯಕ್ತಿಕ ಶೌಚವನ್ನು ನಿರ್ಮಿಸಕೊಳ್ಳಬೇಕಾಗಿದೆ. ಗ್ರಾಮ ಉದ್ಧಾರವಾದಲ್ಲಿ ದೇಶ ಉದ್ಧಾರ ಸಾಧ್ಯ. ವೈಯಕ್ತಿಕ ಶೌಚಾಲಯ ನಿರ್ಮಾಣದಿಂದ ಮಹಿಳೆಯರ ಘನತೆ, ಸುರಕ್ಷೆ, ಆರೋಗ್ಯ, ಸಮುದಾಯ ಉಳಿಯಲು ಸಾಧ್ಯ. ಬಯಲು ಶೌಚದಿಂದ ರಾಜ್ಯದಲ್ಲಿ ಸಾಕಷ್ಟು ದುರ್ಘಟನೆಗಳು ಪ್ರಸ್ತುತ ಮಾಧ್ಯಮದಲ್ಲಿ ಕಾಣಬಹುದಾಗಿದೆ. ಇಂದು ಮಹಿಳೆಯರು ಸಾವಿರಗಟ್ಟಲೇ ಸೀರೆ, ಬಂಗಾರ ಸೇರಿದಂತೆ ವೈಭವಯುತ ಜೀವನಕ್ಕೆ ತಮ್ಮ ಗಂಡಂದಿರನ್ನು ಕಾಡಿ ಬೇಡಿ ತೆಗೆದುಕೊಳ್ಳುತ್ತೀರಿ. ಮಕ್ಕಳು ಸಹ ಅನಗತ್ಯವಾಗಿ ಖರ್ಚು ಮಾಡುತ್ತೀರಿ. ಆದರೆ ಮನೆಯಲ್ಲಿ ಶೌಚ ಕಟ್ಟಿಸಿಕೊಳ್ಳಲು ಹಿಂದೇಟು ಹಾಕುತ್ತೀರುವುದು ನಿಜಕ್ಕೂ ಶೋಚನೀಯ ಸಂಗತಿ. ಹೀಗಾಗಿ ಪ್ರತಿ ಶಾಲೆಗೆ ಹೋಗುವ ಮಕ್ಕಳು ಮನೆಯಲ್ಲಿ ಶೌಚವನ್ನು ನಿರ್ಮಿಸುವಂತೆ ಹಟ ಮಾಡಿ ಶೌಚವನ್ನು ಕಟ್ಟಿಸಿಕೊಡಿರಿ ಎಂದು ಪಾಲಕರನ್ನು ಹಟವಿಡಿರಿ, ಹೀಗೆ ಮಾಡಿದಲ್ಲಿ ಪ್ರತಿ ಮನೆಯಲ್ಲಿ ಶೌಚ ಗೃಹ ಕಾಣಬಹುದು ಎಂದಳು.

ವೇದಿಕೆಯ ಮೇಲಿದ್ದ ಜಿಪಂ ಅಧ್ಯಕ್ಷೆ, ಶಾಸಕರು ಸೇರಿದಂತೆ ಜಿಪಂ, ತಾಪಂ ಸೇರಿದಂತೆ ಅನೇಕರ ಜನಪ್ರತಿನಿಧಿಗಳನ್ನು ಸೇರಿಸಿ ಪೃಥ್ವಿ ಹಿರೇಮಠ ಅಭಿಯಾನದಲ್ಲಿ ಸೇರಿದ್ದ ಸಾವಿರಾರು ಸಾರ್ವಜನಿಕರನ್ನು, ಮಕ್ಕಳನ್ನು, ಮಹಿಳೆಯರನ್ನು ಎದ್ದು ನಿಲ್ಲಿಸಿ ಇಂದೇ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡು ಅದರಲ್ಲಿಯೇ ನಾನು ಶೌಚಕ್ಕೆ ಕುಳಿತು ಬಯಲು ಶೌಚಕ್ಕೆ ನಾಂದಿ ಹಾಡುವೇ ಎಂದು ಪ್ರಮಾಣ ಮಾಡಿಸಿಕೊಂಡಿದ್ದು ವಿಶೇಷವಾಗಿತ್ತು.

ಜಿಪಂ ಅಧ್ಯಕ್ಷರಾದ ನೀಲಮ್ಮ ಮೇಟಿ ಮಾತನಾಡಿ, ಪುಟ್ಟ ಬಾಲಕಿಯ ಬಯಲು ಮುಕ್ತ ಶೌಚದ ಅಭಿಯಾನ ನಿಜಕ್ಕೂ ಮೆಚ್ಚತಕ್ಕದ್ದು, ಮನಸ್ಸು ಮಾಡಿದರೆ ಇದೇ ಅ.2 ರೊಳಗಾಗಿ ಬಯಲು ಮುಕ್ತ ಶೌಚ ಜಿಲ್ಲೆಯನ್ನಾಗಿ ಮಾಡಲು ಈ ಬಾಲಕಿಯ ಅಭಿಯಾನ ಬಹು ಮುಖ್ಯವಾಗಿ ಪರಿಣಾಮ ಬೀರುವುದರಲ್ಲಿ ಎರಡು ಮಾತಿಲ್ಲ ಎಂದರು.

ಶಾಸಕರು ಹಾಗೂ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾದ ಶ್ರೀ.ಶಿವಾನಂದ ಪಾಟೀಲ ಮಾತನಾಡಿ, ಸಾರ್ವಜನಿಕರ ಸಹಕಾರದಿಂದ ಈ ಗ್ರಾಮದಲ್ಲಿ 1988 ಕುಟುಂಬಗಳಲ್ಲಿ ಕೇವಲ 300 ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳಿದ್ದು. ಸರ್ಕಾರದ ಅನುದಾನವನ್ನು ಅವಲಂಬಿಸದೇ ಕೂಡಲೇ ಶೌಚಾಲಯಗಳ ನಿರ್ಮಾಣಕ್ಕೆ ಮುಂದಾಗಬೇಕು, ಇದಕ್ಕೆ ಬೇಕಾದ ನೀರಿನ ಸರಬರಾಜು ವ್ಯವಸ್ಥೆ ಮಾಡುವೆ ಎಂಬ ಭರವಸೆ ನೀಡಿದರು.

ತಹಸೀಲ್ದಾರರಾದ ಶ್ರೀ.ಎಂ.ಎನ್.ಚೋರಗಸ್ತಿ, ಚನ್ನಬಸವ ಮಹಾಸ್ವಾಮೀಜಿ, ವಕೀಲರಾದ ಶ್ರೀ.ಮಲ್ಲಿಕಾರ್ಜುನ ಭೃಂಗಿಮಠ, ಬಯಲು ಶೌಚದ ಕುರಿತಾಗಿ ಮಾತನಾಡಿದರು. ತಾಪಂ ಇಓ ಬಿ.ಎಸ್.ರಾಠೋಡ, ತಾಪಂ ಸದಸ್ಯೆ ರುದ್ರಮ್ಮ ಡಿಗ್ಗಾವಿ, ಗ್ರಾಪಂ ಅಧ್ಯಕ್ಷ ಮುತ್ತಪ್ಪ ಸಾಸನೂರ ಸೇರಿದಂತೆ ಅನೇಕರು ವೇದಿಕೆಯ ಮೇಲಿದ್ದರು.



ಮುಂದಿನ ದಿನಗಳಲ್ಲಿ ಪ್ರತಿ 15 ದಿನಗಳಿಗೊಮ್ಮೆ ತಾಲ್ಲೂಕಿನ ಪ್ರತಿ ಗ್ರಾಪಂ ಸ್ಥಳದಲ್ಲಿ ಈ ರೀತಿಯಲ್ಲಿ ಬಯಲು ಶೌಚ ಮುಕ್ತ ಅಭಿಯಾನ ಹಮ್ಮಿಕೊಂಡು ತಾಲ್ಲೂಕು, ಜಿಲ್ಲೆ ರಾಜ್ಯ ಸೇರಿದಂತೆ ಇಡೀ ದೇಶವನ್ನೇ ಬಯಲು ಮುಕ್ತ ಭಾರತ ನಿರ್ಮಾಣ ಮಾಡಲು ಹೊರಟಿದ್ದಾಳೆ ಈ ಪುಟ್ಟ ಬಾಲೆ. ಈಗಾಗಲೇ ಕಳೆದ 4 ವರ್ಷಗಳಿಂದ ರಾಜ್ಯದ ಅನೇಕ ಸಭೆ ಸಮಾರಂಭಗಳಲ್ಲಿ ಧಾರ್ಮಿಕ ಹಾಗೂ ಮಹಾತ್ಮರ ತತ್ವಾದರ್ಶಗಳ ಕುರಿತಾಗಿ 600 ಕ್ಕೂ ಅಧಿಕ ಕಡೆ ಭಾಷಣ ಮಾಡಿ ಗಮನಸೆಳೆದ ಈಕೆಯ ಯಶೋಗಾಥೆಯನ್ನು ಗಮನಿಸಿ ಸಂಘ ಸಂಸ್ಥೆಗಳು, ಸರ್ಕಾರ ಸೇರಿದಂತೆ ನೂರಕ್ಕೂ ಅಧಿಕ ಸನ್ಮಾನ ಹಾಗೂ ಪ್ರಶಸ್ತಿಗಳು ಲಭಿಸಿವೆ. ಈ ಬಾಲೆಯ ಅಭಿಯಾನವನ್ನು ಗಮನಿಸಿದ ವಿಜಯಪುರ ಜಿಲ್ಲಾಡಳಿತ ಆ.15ರಂದು ಜಿಪಂ ಅಧ್ಯಕ್ಷರಾದ ನೀಲಮ್ಮ ಮೇಟಿ, ಸಚಿವರಾದ ಶ್ರೀ ರಮೇಶ್ ಜಿಗಜಿಣಗಿ, ಶ್ರೀ.ಎಂ.ಬಿ. ಪಾಟೀಲ ಅವರು ಸನ್ಮಾನಿಸಿದರು. ■

ಯಶೋಗಾಥೆ



ಮಂಜುಳ ಎನ್ ಪಿ

ಜಿಲ್ಲಾ ಐ.ಇ.ಸಿ ಸಂಯೋಜಕರು
ಬೆಂಗಳೂರು ಗ್ರಾಮಾಂತರ
ಜಿಲ್ಲಾ ಪಂಚಾಯತಿ.

**ಎಲ್ಲರೂ ಆಧಾರ್ ಚೀಟಿಯನ್ನು ಹೊಂದಿರಬೇಕು ಎಂಬ ಅರಿವು ಮೂಡಿಸಲು ಮತ್ತು ಆಧಾರ್ ನಂಬರನ್ನು ಕೂಲಿ ಕಾರ್ಮಿಕರ ವೈಯಕ್ತಿಕ ಖಾತೆಗಳಿಗೆ ಜೋಡಣೆ ಮಾಡಲು ಜಾಗೃತಿ ಕಾರ್ಯಕ್ರಮವಾದ ಆದಾರ್ ಶಿಬಿರವನ್ನು ಮಾಡಲಾಯಿತು. ವೈಯಕ್ತಿಕ ಖಾತೆ ತೆರೆಯಲು ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು ಕೂಲಿ ಕಾರ್ಮಿಕರ ಮನೆ ಮನೆಗೆ ಭೇಟಿ ನೀಡಿ, ಸ್ಥಳದಲ್ಲಿಯೇ ಖಾತೆಗೆ ಬೇಕಾದ ಎಲ್ಲಾ ಮಾಹಿತಿಯನ್ನು ಇಂಧೀಕರಿಸಿಕೊಳ್ಳಲಾಯಿತು.**

# ಗ್ರಾಮ ಪಂಚಾಯಿತಿಗಳಿಂದ ಆಧಾರ್ ಜೋಡಣೆ



ಆಧಾರ್ ಎಂಬುದು ಒಂದು ವಿಶಿಷ್ಟ ಗುರುತಿನ ಸಂಖ್ಯೆಯಾಗಿದ್ದು, ಭಾರತ ಸರ್ಕಾರವು ಇತ್ತೀಚೆಗಷ್ಟೆ ಅಂತಿಮಗೊಳಿಸಲ್ಪಟ್ಟ ಉಪಕ್ರಮವಾಗಿದೆ. ಭಾರತದ ಎಲ್ಲಾ ವಯಸ್ಕ ನಾಗರಿಕರು ಮತ್ತು ನಿವಾಸಿಗಳಿಗೆ ಸಂಬಂಧಿಸಿದಂತಿರುವ ಕೇಂದ್ರಿಕೃತ ಗುರುತಿಸುವಿಕೆಯ ವ್ಯವಸ್ಥೆಯನ್ನು ಸೃಷ್ಟಿಸುವ ಮತ್ತು ನಿರ್ವಹಿಸುವುದು ಇದರ ಉದ್ದೇಶವಾಗಿದೆ. ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (UIDAI) ಭಾರತೀಯ ನಿವಾಸಿಗಳಿಗೆಲ್ಲಾ 12 ಅಂಕಗಳ ಸಂಖ್ಯೆಯುಳ್ಳ ಗುರುತಿನ ಪತ್ರ ನೀಡುವ ಮಹಾದಾಂಕ್ಷೆಯ ಯೋಜನೆ "ಆಧಾರ್" ಏಪ್ರಿಲ್ 26, 2010 ರಂದು ಪುನರ್ ನಿರ್ಮಾಣವಾಗಿದೆ. ಆಧಾರ್ ಪಡೆಯುವ ವೇಳೆಯಲ್ಲಿ ಎಲ್ಲಾ ಹತ್ತು ಬೆರಳುಗಳ ಬೆರಳಚ್ಚುಗಳನ್ನು ಪಡೆಯಲಾಗಿರುತ್ತದೆ ಹಾಗೂ ಕಣ್ಣಿನ ಸ್ಕ್ಯಾನಿಂಗ್ ಮಾಡಲಾಗಿರುತ್ತದೆ.

ಕೇಂದ್ರ ಸರ್ಕಾರವು 14 ಯೋಜನೆಗಳಿಗೆ ಆಧಾರ್ ಜೋಡಿಸುವ ಆದೇಶವನ್ನು ಹೊರಡಿಸಿದ್ದು, ಸರ್ಕಾರದ ಯೋಜನೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದಾಗಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ಆಧಾರ್ ಜೋಡನೆಯ ಅನುಷ್ಠಾನ ಪ್ರಕ್ರಿಯೆಯು ಸರ್ಕಾರದ ಉದ್ದೇಶವಾಗಿದ್ದು, ಗ್ರಾಮ ಪಂಚಾಯಿತಿವಾರು ಉದ್ಯೋಗ ಚೀಟಿ ಹೊಂದಿರುವ ಎಲ್ಲಾ ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡನೆ ಮಾಡುವುದನ್ನು ಕಡ್ಡಾಯವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ 4 ತಾಲ್ಲುಕುಗಳ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಟ್ಟು 75279 ಕೂಲಿ ಕಾರ್ಮಿಕರಲ್ಲಿ 74815 ಕಾರ್ಮಿಕರಿಗೆ ಉದ್ಯೋಗ ಚೀಟಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಅದರಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರ ಖಾತೆಗಳಿಗೆ ನೇರ ಲಾಭ ವರ್ಗಾವಣೆಗಾಗಿ(DBT) ಆಧಾರ್ ಶಿಬಿರಗಳನ್ನು ಆಯೋಜಿಸಲಾಗಿದ್ದು, ನಮ್ಮ ಜಿಲ್ಲೆಯಲ್ಲಿ 75279 ಕೂಲಿಕಾರ್ಮಿಕರಿಗೆ 18789 ಕೂಲಿ ಕಾರ್ಮಿಕರು ಜಂಟಿ ಖಾತೆಯನ್ನು ಹೊಂದಿದ್ದು ಅದರಲ್ಲಿ 22853 ಫಲಾನುಭವಿಗಳು ವೈಯಕ್ತಿಕ ಖಾತೆಯನ್ನು



ತೆರೆಯುವುದರಲ್ಲಿ ಸಫಲರಾಗಿದ್ದಾರೆ.

ಎಲ್ಲರೂ ಆಧಾರ್ ಚೀಟಿಯನ್ನು ಹೊಂದಿರಬೇಕು ಎಂಬ ಅರಿವು ಮೂಡಿಸಲು ಮತ್ತು ಆಧಾರ್ ನಂಬರನ್ನು ಕೂಲಿ ಕಾರ್ಮಿಕರ ವೈಯಕ್ತಿಕ ಖಾತೆಗಳಿಗೆ ಜೋಡಣೆ ಮಾಡಲು ಜಾಗೃತಿ ಕಾರ್ಯಕ್ರಮವಾದ ಆದಾರ್ ಶಿಬಿರವನ್ನು ಮಾಡಲಾಯಿತು, ಹಾಗೂ ಮನೆ ಮನೆ ಭೇಟಿಯ ಮೂಲಕ, ವೈಯಕ್ತಿಕ ಖಾತೆ ತೆರೆಯಲು ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು ಕೂಲಿ ಕಾರ್ಮಿಕರ ಮನೆ ಮನೆಗೆ ಭೇಟಿ ನೀಡಿ, ಅವರ ಸ್ಥಳದಲ್ಲಿಯೆ ಲ್ಯಾಪ್ ಟಾಪ್ ಮತ್ತು ಮುದ್ರಣದ ಜೊತೆಗೆ ವೈಯಕ್ತಿಕ ಖಾತೆಗೆ ಬೇಕಾದ ಎಲ್ಲಾ ಮಾಹಿತಿಯನ್ನು ಇಂಧೀಕರಿಸಿಕೊಳ್ಳಲಾಯಿತು.

ಮತ್ತು ಆಧಾರ್ ಶಿಬಿರದಲ್ಲಿ ಆಧಾರ್ ಜೋಡಣೆಯ ಮಹತ್ವ ಮತ್ತು ಅದರಿಂದ ಕೂಲಿ ಕಾರ್ಮಿಕರಿಗೆ ಆಗುವ ಅನುಕೂವನ್ನು ತಿಳಿಸಿ" ಆಧಾರ್ ಇಲ್ಲದೆ ನಿಮ್ಮ ಆಧಾರವೇ ಇಲ್ಲ ಎಂಬ ಮಾಹಿತಿಯ ಮೂಲಕ ಜಂಟಿ ಖಾತೆಯಿಂದ ವೈಯಕ್ತಿಕ ಖಾತೆ ತೆರೆದು ನೇರವಾಗಿ ಫಲಾನುಭವಿಗಳು ಅವರ ಕೂಲಿ ಮೊತ್ತವನ್ನು ಪಡೆಯಬಹುದಾಗಿ ಮನದಟ್ಟು ಮಾಡಲಾಯಿತು.

### ಆಧಾರ್ ಶಿಬಿರದಲ್ಲಿ ಈ ಕೆಳಕಂಡ ವಿಧಾನಗಳನ್ನು ಪಾಲಿಸಲಾಗಿದೆ.

1. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಧಾರ್ ಶಿಬಿರಗಳನ್ನು ಆಯಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಗಳಲ್ಲಿ ಆಯೋಜಿಸಿ, ಹಾಗೂ ಅದರ ವೇಳಾ ಪಟ್ಟಿಯನ್ನು ಅನುಮೋದಿಸಿ ನರೇಗಾ ಸಾಫ್ಟ್‌ನಲ್ಲಿ ಇಂಧೀಕರಿಸಲಾಯಿತು.
2. ಸದರಿ ವೇಳಾಪಟ್ಟಿಯ ಪ್ರತಿಯನ್ನು ಜಿಲ್ಲಾ ಮಟ್ಟದ ಐಆಒ ಗಳಿಗೆ ಕಳುಹಿಸಲಾಯಿತು, ಮತ್ತು ಶಿಬಿರದಲ್ಲಿ ಬ್ಯಾಂಕ್ ಶಾಖಾಧಿಕಾರಿಗಳು ಶೀಬಿರದಲ್ಲಿ ಭಾಗವಹಿಸಿದ್ದರು.
3. ಆಧಾರ್ ಜೋಡಣೆಯಾಗದ ಸಕ್ರಿಯ ಕೂಲಿ ಕಾರ್ಮಿಕರಿಂದ ಆಧಾರ್ ಜೋಡಣೆ ಮಾಡಲಾಯಿತು ಮತ್ತು ಆಧಾರ್ ಹೊಂದಿಲ್ಲದ ಫಲಾನುಭವಿಗಳಿಗೆ ಜಾಗೃತಿ ಮೂಡಿಸುವುದರ ಮೂಲಕ ಅವರ ಮನ ಓಲೈಸಿ ಆಧಾರ್ ಶಿಬಿರದ ಬಗ್ಗೆ ತಿಳಿಸಲಾಯಿತು.
4. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತ್ಯಂತ 18789 ಜಂಟಿ ಖಾತೆಗಳಿದ್ದು, ಇವುಗಳನ್ನು ಪ್ರತ್ಯೇಕ ಖಾತೆಗಳನ್ನಾಗಿ ಪರಿವರ್ತಿಸಲು ಉದ್ಯೋಗ ಚೀಟಿದಾರರಿಗೆ ಪ್ರತ್ಯೇಕ ಖಾತೆಯನ್ನು ತೆರೆಯಲು ಈ ಕ್ಯಾಂಪ್ನಲ್ಲಿ ತಿಳಿಸಲಾಯಿತು ಹಾಗೂ ಸದರಿ ಫಲಾನುಭವಿಗಳಿಂದ ಆಧಾರ್ ಒಪ್ಪಿಗೆ ಪತ್ರವನ್ನು ಕೂಡ ಅದೇ ಶಿಬಿರದಲ್ಲಿ ಪಡೆದು ಹಾಗೂ ಆಧಾರ್ ಜೋಡಣೆ ಮಾಡಲಾಯಿತು. ಸದರಿ ಮಾಹಿತಿಯನ್ನು ನರೇಗಾ ತಂತ್ರಾಂಶದಲ್ಲಿ ಇಂಧಿಕರಿಸಲಾಗಿದೆ..
5. ಫಲಾನುಭವಿಗಳಿಂದ ಆಧಾರ್ ಒಪ್ಪಿಗೆ ಪತ್ರವನ್ನು ಅವರ ಸಹಿ/ಹೆಬ್ಬೆಟ್ಟಿನ ಗುರುತಿನೊಂದಿಗೆ ದ್ವಿಪ್ರತಿಗಳಲ್ಲಿ ಪಡೆಯಲಾಗಿದ್ದು, ಒಂದು ಪ್ರತಿಯನ್ನು ಶಿಬಿರದಲ್ಲೇ ಬ್ಯಾಂಕ್‌ನ ಅಧಿಕಾರಿಗಳಿಗೆ ಒಪ್ಪಿಸಲಾಯಿತು ಹಾಗೂ ಅದನ್ನು ನರೇಗಾ ತಂತ್ರಾಂಶದಲ್ಲಿ ಇಂಧಿಕರಿಸಾಗಿದೆ. ಆಧಾರ್ ಒಪ್ಪಿಗೆ ಪತ್ರ ಪಡೆಯುವ ಸಮಯದಲ್ಲಿ ಸದರಿ ಫಲಾನುಭವಿಯ ಆಧಾರ್ ಪ್ರತಿಯನ್ನು ಸಹ ಪಡೆಯಲಾಗಿದೆ.
6. ಇಲಾಖೆಯು ಫಲಾನುಭವಿಯಿಂದ ಪಡೆದ ಆಧಾರ್ ಒಪ್ಪಿಗೆಯ ಪ್ರತಿಗಳನ್ನು ಬ್ಯಾಂಕ್‌ವಾರು ಮತ್ತು ಶಾಖಾವಾರು ವಿಂಗಡಿಸಿ ಅದರ ವರದಿಯನ್ನು ಸದರಿ ಐಆಒಗೆ ಒದಗಿಸಿ ಅವರಿಂದ ಸ್ವೀಕೃತಿಯನ್ನು ಪಡೆಯಲಾಯಿತು. ■




## ಫಲಾನುಭವಿಗಳ ಖಾತೆಗೆ ಆಧಾರ್ ಜೋಡಣೆಯ ಪ್ರಕ್ರಿಯೆ

ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಬಿಲ್ ಕಲೆಕ್ಟರ್, ವಾಟರ್ ಮ್ಯಾನ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು ಗ್ರಾಮವಾರು ಆಧಾರ್ ಸಂಖ್ಯೆ ಇಲ್ಲದ ಕೂಲಿ ಕಾರ್ಮಿಕರ ಪಟ್ಟಿಯನ್ನು ನರೇಗಾ ಸಾಫ್ಟ್ ನಿಂದ ತೆಗೆದುಕೊಂಡು ಪಟ್ಟಿಯಲ್ಲಿರುವ ಕೂಲಿ ಕಾರ್ಮಿಕರ ಮನೆ ಮನೆಗಳಿಗೆ ತೆರಳಿ ಅವರಿಂದ ಆಧಾರ್ ಕಾರ್ಡ್‌ನ ಪ್ರತಿ ಮತ್ತು ಆಧಾರ್ ಕನ್ಸೆಂಟ್ ಫಾರಂಗೆ ಸಹಿ ಹಾಕಿಲಾಯಿತು. ಮತ್ತು ಆಧಾರ್ ಕಾರ್ಡ್ ಇಲ್ಲದ ಕೂಲಿ ಕಾರ್ಮಿಕರಿಗೆ ಆಧಾರ್ ಕಾರ್ಡ್ ನೊಂದಣಿ ಮಾಡಿಸಲು ಮನವೊಲಿಸಿ ಆಧಾರ್ ಕಾರ್ಡನ್ನು ಮಾಡಿಸಲಾಯಿತು.



ಕೂಲಿ ಕಾರ್ಮಿಕರಿಂದ ಗ್ರಾಮ ಪಂಚಾಯಿತಿವಾರು ಆಧಾರ್ ಕನ್ಸೆಂಟ್ ಫಾರಂಗಳಿಗೆ ಸಹಿ ಹಾಕಿದ ಆಧಾರ್ ಪ್ರತಿಯನ್ನು ತೆಗೆದುಕೊಂಡು ಅದನ್ನು ಬ್ಯಾಂಕ್‌ಗಳಿಗೆ ಸಲ್ಲಿಸಲಾಯಿತು, ಈವರೆಗೆ ತೆಗೆದುಕೊಂಡ ಕನ್ಸೆಂಟ್ ಫಾರಂಗಳಲ್ಲಿ ವಿವಿಧ ಬ್ಯಾಂಕ್‌ಗಳಿಗೆ ತಲುಪಿಸಲಾಗಿದೆಯಾದರು ಅದರಲ್ಲಿ 22853 ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆಯಾಗಿರುತ್ತದೆ.



# ಸರ್ವಾಂಗೀಣಾಭಿವೃದ್ಧಿಯತ್ತ ರಾಜಾನುಕುಂಟೆ ಗ್ರಾಮ ಪಂಚಾಯಿತಿ

ಯಶೋಗಾಥೆ



**ಹೆಚ್ ಆರ್ ರಾಜೇಶ್**

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು
ರಾಜಾನುಕುಂಟೆ ಗ್ರಾಮ ಪಂಚಾಯ್ತಿ.
ಬೆಂಗಳೂರು ಉತ್ತರ ತಾಲ್ಲೂಕು

**ಪಂಚಾಯ್ತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕುರಿತು ಜಾಗೃತಿ, ಕಾಲೇಜು ಎನ್.ಎಸ್.ಎಸ್ ವಿದ್ಯಾರ್ಥಿಗಳೊಂದಿಗೆ ಸ್ವಚ್ಛತಾ ಸಪ್ತಾಹ, ಎಸ್.ಬಿ.ಎಂ ನಡಿ ಶೌಚಾಲಯ ನಿರ್ಮಾಣದ ಸಪ್ತಾಹ, ತೆರಿಗೆ ಮತ್ತು ಲೈಸೆನ್ಸ್ ವಸೂಲಾತಿ ಸಪ್ತಾಹ, ವನಮಹೋತ್ಸವ, ಅಂತರ್‌ರಾಷ್ಟ್ರೀಯಯೋಗಾ ದಿನಾಚರಣೆ, ಸಾಮೂಹಿಕ ವಿವಾಹ, ಬೇಸಿಗೆ ಶಿಬಿರ, ಸ್ವಚ್ಛತೆಯ ಬಗ್ಗೆ ಕೈ ತೊಳೆಯುವ ದಿನ ಆಚರಣೆ, ರಕ್ತದಾನ ಶಿಬಿರ, ಕಣ್ಣಿನ ಪರಿಕ್ಷಾ ಶಿಬಿರಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದೆ.**

ರಾಜಾನುಕುಂಟೆ ಗ್ರಾಮ ಪಂಚಾಯ್ತಿ ಸರ್ಕಾರದ ಕಾಯಕ್ರಮಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವಲ್ಲಿ ದಿನಂಪ್ರತಿ ಶ್ರಮಿಸುತ್ತಿದ್ದು ಅಲ್ಲಿನ ಅಧಿಕಾರಿ ಸಿಬ್ಬಂದಿಗಳು ಜನಪ್ರತಿನಿಧಿಗಳ ಶ್ರಮ ಸಾರ್ಥಕ ವಾಗಿದೆ.

ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು 2630 ಕುಟುಂಬಗಳಿದ್ದು, ಇದರಲ್ಲಿ 2580 ಕುಟುಂಬಗಳು ಶೌಚಾಲಯಗಳನ್ನು ಹೊಂದಿರುತ್ತದೆ. ಉಳಿದ 50 ಕುಟುಂಬಗಳು ಶೌಚಾಲಯ ನಿರ್ಮಾಣವಾಗಬೇಕಾಗಿರುತ್ತದೆ. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಂದಾಯ ತೆರಿಗೆ ಪರಿಷ್ಕರಣೆಯಾಗಿದ್ದು, ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಎಲ್ಲಾ ಗ್ರಾಮಗಳಿಂದ ಸಂದಾಯವಾಗುವ ಕಂದಾಯದ ಮೊತ್ತ 1,31,70,756 ರೂ. ಹಾಗೂ ನೀರಿನ ತೆರಿಗೆ 2,36,859 ರೂ.ಗಳು ಒಟ್ಟು ವರಮಾನ 1,34,07,615 ರೂ.ಗಳಾಗಿರುತ್ತದೆ. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಧ್ಯಕ್ಷರಾದ ಶ್ರೀಮತಿ. ಸರಿತ ವೀರಣ್ಣನವರು ಮತ್ತು ಉಪಾಧ್ಯಕ್ಷರಾದ ಶ್ರೀ. ಗೋವಿಂದರಾಜುರವರ ಸಹಿತ ಒಟ್ಟು 27 ಜನ ಚುನಾಯಿತ ಪ್ರತಿನಿಧಿಗಳಿದ್ದಾರೆ.

## ಉತ್ತಮ ತೆರಿಗೆ ಸಂಗ್ರಹಣೆ ಮತ್ತು ಕಂಪ್ಯೂಟರೀಕರಣ:

ಗ್ರಾಮ ಪಂಚಾಯ್ತಿಯು 2016–17 ನೇ ಸಾಲಿನಲ್ಲಿ ಒಂದು ಸ್ಪಷ್ಟ ಮುನ್ನೋಟದೊಂದಿಗೆ ಕೆಲಸ ನಿರ್ವಹಿಸಿ ದೃಡ ಸಂಕಲ್ಪದೊಂದಿಗೆ ಅಭಿವೃದ್ಧಿಯೆಡೆಗೆ ಸಾಗುತ್ತಿದೆ. 2015–16 ನೇ ಸಾಲಿನಲ್ಲಿ 1.45 ಕೋಟಿ ಇದ್ದ ಆದಾಯವನ್ನು 2016–17 ನೇ ಸಾಲಿಗೆ 2.52 ಕೋಟಿ ಗುರಿಯೊಂದಿಗೆ ಹೆಚ್ಚಿಸಲಾಯಿತು. ಗ್ರಾಮ ಪಂಚಾಯ್ತಿಯ ಆಸ್ತಿಗಳಲ್ಲಿ ಹೆಚ್ಚಿನ ಆಸ್ತಿಗಳು ನಿವೇಶನದಾರರಾಗಿರುವುದರಿಂದ ನಿವೇಶನ ಮಾಲೀಕರಿಂದ ತೆರಿಗೆಯನ್ನು ವಸೂಲಿ ಮಾಡಲು ಫೋನ್ ನಂಬರ್ ಸಂಗ್ರಹಣೆ, ಬಡಾವಣೆಗಳಲ್ಲಿ ತೆರಿಗೆ ಬಾಕಿದಾರರಿಗೆ ನೋಟಿಸ್, ಕರಪತ್ರ ನೀಡುವುದು, ಫ್ಲೆಕ್ಸ್‌ಗಳ ಮೂಲಕ ಪ್ರಚಾರದೊಂದಿಗೆ ತೆರಿಗೆ ವಸೂಲಾತಿ ಆಂದೋಲನಾ ನಡೆಸಿ ಜನರಲ್ಲಿ ತೆರಿಗೆ ಕಟ್ಟುವ ಜವಾಬ್ದಾರಿ ಮತ್ತು ತೆರಿಗೆ ಕಟ್ಟಿಡ ನಂತರ ಜನರಿಗೆ ನೀಡುವ ಸೇವೆಗಳನ್ನೊಳಗೊಂಡ ಮಾಹಿತಿ ನೀಡಲಾಗಿದೆ. ಉದ್ಯಮ ಪರವಾನಗಿಯನ್ನು ಕಾಲ ಕಾಲಕ್ಕೆ ನೀಡಿ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ಸಮಗ್ರ ತೆರಿಗೆ ವಸೂಲಿಗೆ ಆಸ್ತಿಗಳ ಸಮೀಕ್ಷೆಯೊಂದಿಗೆ ಸಂಪೂರ್ಣ ಮಾಹಿತಿಯನ್ನು ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ.

## ಉತ್ತಮ ತ್ಯಾಜ್ಯ ನಿರ್ವಹಣೆ:

ರಸ್ತೆ ಬದಿಯಲ್ಲಿ ಬೆಳೆದಿರುವ ಅನುಪಯುಕ್ತ ಸಸ್ಯಗಳಿಗೆ ಕಳೆ ನಾಶಕ ಸಿಂಪಡಣೆ ಮತ್ತು ಕಳೆ ಯಂತ್ರದ ಮೂಲಕ ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿಡಲು ಪ್ರಯತ್ನಪಡಲಾಗಿದೆ. ಮನೆ ಮನೆ ತ್ಯಾಜ್ಯ ಸಂಗ್ರಹಿಸುತ್ತಿರುವ 2 ಗ್ರಾಮಗಳಲ್ಲಿ ಮಾಸಿಕ 30–00 ರೂ. ಮತ್ತು ಅಂಗಡಿಗಳಿಗೆ ಸಂಗ್ರಹಿಸುವ ತ್ಯಾಜ್ಯಾನುಸಾರ ಶುಲ್ಕವನ್ನು ವಿಧಿಸಲಾಗುತ್ತಿದ್ದು, ಸದರಿ ಶುಲ್ಕದಿಂದ ಮಾಸಿಕ ಸರಾಸರಿ 50,000–00ರೂ. ಗಳು ಆದಾಯ ಬರುತ್ತಿದ್ದು ಸದರಿ ಆದಾಯವನ್ನು ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನಕ್ಕೆ ಸರಿಸಮವಾಗಿರುತ್ತದೆ. ಹೀಗಾಗಿ ಗ್ರಾಮ ಪಂಚಾಯ್ತಿಗೆ ಯಾವುದೇ ಹೊರೆಯಾಗದೆ ತ್ಯಾಜ್ಯ ವಿಲೇವಾರಿಯನ್ನು ಮಾಡಲಾಗುತ್ತಿದೆ. ಇದರಿಂದ ಆದಾಯವನ್ನು

# ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯ್ತಿಯಾಗಿ ಘೋಷಣೆ

**2016-17 ನೇ ಸಾಲಿನ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು 313 ಶೌಚಾಲಯ ರಹಿತ ಕುಟುಂಬಗಳಿದ್ದು, ಎಲ್ಲರಿಗೂ ಶೌಚಾಲಯ ನಿರ್ಮಿಸಲು ಶೌಚಾಲಯದ ಅಗತ್ಯತೆ, ಅದರಿಂದಾಗುವ ದುಷ್ಪರಿಣಾಮದ ಕುರಿತು ಜನಪ್ರತಿನಿಧಿಗಳೊಂದಿಗೆ ಸಾರ್ವಜನಿಕರೊಂದಿಗೆ ಸ್ವಚ್ಛತಾ ಅಭಿಯಾನ ನಡೆಸಿ ಸಮರೋಪಾದಿಯಲ್ಲಿ 2016-17 ನೇ ಸಾಲಿನ ಸೆಪ್ಟೆಂಬರ್ ಅಂತ್ಯಕ್ಕೆ ಶೌಚಾಲಯಗಳನ್ನು ಪೂರ್ಣಗೊಳಿಸಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯ್ತಿಯಾಗಿ ಘೋಷಿಸಲಾಗಿದೆ. ನೈರ್ಮಲ್ಯ ಮುಕ್ತ ಗ್ರಾಮ ಪಂಚಾಯ್ತಿಯನ್ನಾಗಿಸಲು ಗ್ರಾಮ ಪಂಚಾಯ್ತಿಯಿಂದ ಟಾಟಾ ಏಸ್ ಮಾಕ್ಸ್ ಟ್ರಾಕ್ಟರ್‌ರನ್ನು ಮಾನ್ಯ ವಿಧಾನ ಸಭಾ ಸದಸ್ಯರ ದೇಣಿಗೆಯಿಂದ ಮತ್ತು ಗ್ರಾಮ ಪಂಚಾಯ್ತಿ ಅನುದಾನದಿಂದ ಖರೀದಿಸಿ ಅಭಿವೃದ್ಧಿ ಹೊಂದಿದ ರಾಜಾನುಕುಂಟೆ, ಅದ್ದಿಗಾನಹಳ್ಳಿ ಗ್ರಾಮದಿಂದ ಪ್ರತಿದಿನ ಮನೆ ಮನೆಯಿಂದ ಮತ್ತು ಉಳಿದ ಹಳ್ಳಿಗಳಿಂದ ವಾರಕ್ಕೊಂದು ಬಾರಿ ತ್ಯಾಜ್ಯದ ತೊಟ್ಟಿಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇ ಮಾಡಿ ಬ್ಲಿಚಿಂಗ್ ಪೌಡರ್ ಸಿಂಪಡಣೆ ಮಾಡಲಾಗುತ್ತಿದೆ.**

ಹೆಚ್ಚಿಸುವ ಗುರಿ ಹೊಂದಲಾಗಿದೆ.

ಬೀದಿ ದೀಪಗಳಿಗೆ ಗ್ರಾಮವಾರು ಕ್ರಮ ಸಂಖ್ಯೆಯನ್ನು ನೀಡಿ ದಾಖಲಿಸಲಾಗಿರುತ್ತದೆ. ಬೀದಿ ದೀಪ ದುರಸ್ಥಿಯಾದಾಗ ಕಂಬದ ಸಂಖ್ಯೆಯನ್ನು ದೂರವಾಣಿ ಮುಖಾಂತರ ಅಥವಾ ಮೌಖಿಕವಾಗಿ ತಿಳಿಸಿದ್ದಲ್ಲಿ ಸರಿಪಡಿಸುವ ಕೆಲಸವನ್ನು ಮಾಡಲಾಗುತ್ತದೆ. ಬೀದಿ ದೀಪವನ್ನು ಪೋಲು ಮಾಡದೇ ಇರಲು ಗ್ರಾಮವಾರು ಪ್ರತ್ಯೇಕ ಬೀದಿ ದೀಪದ ಲೈನ್‌ಗಳನ್ನು ಅಳವಡಿಸಲಾಗುತ್ತಿದ್ದು ಆಟೋ ಸ್ವಿಚ್ ಆನ್ ಅಂಡ್ ಆಫ್ ಯಂತ್ರಗಳನ್ನು ಅಳವಡಿಸಲಾಗಿದೆ ಹಂತ ಹಂತವಾಗಿ ಎಲ್.ಇ.ಡಿ ದೀಪಗಳನ್ನು ಅಳವಡಿಸಲಾಗುತ್ತಿದ್ದು, ಚಾಲನೆಯಲ್ಲಿರುವ ಸೋಲಾರ್ ದೀಪಗಳಿಂದ ವಿದ್ಯುತ್ ಮಿತವ್ಯಯವಾಗಿ ಬಳಸಲು ಕ್ರಮ ಕೈಗೊಂಡಿದೆ. ಗ್ರಾಮಸಭೆ, ವಾರ್ಡ್‌ಸಭೆ, ಜನವಸತಿ ಸಭೆ, ಸಾಮಾನ್ಯ ಸಭೆ, ಸ್ಥಾಯಿ ಸಮಿತಿ ಸಭೆ, ಜಮಾಬಂಧಿ, ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆ, ಅಂಗನವಾಡಿ ಶಾಲೆಗಳ ಆಸ್ಪತ್ರೆಗಳ ಮುಖ್ಯಸ್ಥರೊಂದಿಗೆ ಕಡ್ಡಾಯವಾಗಿ ಸಭೆಗಳನ್ನು ನಡೆಸಲಾಗುತ್ತದೆ ಮತ್ತು ಜನರ ಸಮಸ್ಯೆಗಳಿಗೆ ದೂರು ಪೆಟ್ಟಿಗೆಯನ್ನು ಇಟ್ಟು ಸ್ಪಂದಿಸಲಾಗುತ್ತದೆ.

ಗ್ರಾಮ ಪಂಚಾಯ್ತಿಯನ್ನು ಮಾದರಿ ಗ್ರಾಮ ಪಂಚಾಯ್ತಿಯನ್ನಾಗಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದ್ದು, ಕಛೇರಿಯಲ್ಲಿ ಸಿಸಿಟಿವಿ ಅಳವಡಿಸಲಾಗಿದೆ. ಪ್ರೊಜೆಕ್ಟರ್ ಸಹಾಯದಿಂದ ಆಯವ್ಯಯ, ಕ್ರಿಯಾ ಯೋಜನೆ, ಗ್ರಾಮಗಳಲ್ಲಿ ಸಮಸ್ಯೆಗಳನ್ನು ಸಾಧಿಸಬಹುದಾದಂತಹ ಕೆಲಸಗಳನ್ನು ಎಲ್ಲರೊಂದಿಗೆ ಕುಳಿತು ಚರ್ಚಿಸಿ ಕ್ರಮಕೈಗೊಳ್ಳಲಾಗುತ್ತದೆ. ಕಡತಗಳ ನಿರ್ವಹಣೆಯನ್ನು ಅಚ್ಚುಕಟ್ಟಾಗಿಡಲಾಗಿದೆ.

## ಸಕಾಲದಲ್ಲಿ ಸಕಲ ಸೇವೆ :

ಸಕಾಲದಡಿಯಲ್ಲಿ ನಿಗದಿತ ಸಮಯದಲ್ಲಿ ಸೇವೆಗಳನ್ನು ನೀಡಲಾಗುತ್ತಿದೆ. ಗ್ರಾಮ ಪಂಚಾಯ್ತಿಯ ವಾಟ್ಸಪ್ ಗ್ರೂಪ್‌ನ್ನು ರಚಿಸಲಾಗಿದ್ದು, ಇದರ ಮೂಲಕ ಸರ್ಕಾರದ ಆದೇಶಗಳು, ಸಭೆಗಳ ಮಾಹಿತಿ, ಗ್ರಾಮಗಳ ಕುಂದುಕೊರತೆಗಳು, ಅಭಿವೃದ್ಧಿ ಕಾಮಗಾರಿಗಳು, ಕುಡಿಯುವ ನೀರಿನ ಸಮಸ್ಯೆ, ಬೀದಿ ದೀಪದ ರಿಪೇರಿಗಳ ಫೋಟೋ ಇತ್ಯಾದಿ ಮಾಹಿತಿಗಳನ್ನು ಅಳವಡಿಸಿ ಕೂಡಲೇ ಸಂಬಂಧಿಸಿದ ವಿಷಯಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯ್ತಿಯ ನೂತನ ಮಾದರಿ ಕಟ್ಟಡವು ಪ್ರಗತಿಯಲ್ಲಿದ್ದು, ಸದರಿ ಕಟ್ಟಡದಲ್ಲಿ ಕಛೇರಿ ಸಭಾಂಗಣದೊಂದಿಗೆ ಸ್ಪರ್ಧಾತ್ಮಕ ಅಧ್ಯಯನ ಕೇಂದ್ರಸ್ಥಾಪನೆ ಕಟ್ಟಡಕ್ಕೆ ಸೋಲಾರ್ ಅಳವಡಿಕೆಯ ಗುರಿ ಹೊಂದಲಾಗಿದೆ. ಸಂಪನ್ಮೂಲ ಕ್ರೂಢೀಕರಣಕ್ಕೆ ವಾಣಿಜ್ಯ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಮಾದರಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆ ಮಹತ್ವದ ಉದ್ದೇಶ ಹೊಂದಲಾಗಿದ್ದು, ಕಂದಾಯ ಇಲಾಖೆಯಿಂದ ಸ್ಥಳ ಮಂಜೂರಾದ ತಕ್ಷಣ ಘಟಕ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತದೆ.

ಮಕ್ಕಳಿಗೆ ಪೂರಕವಾಗಲು ಅಂಗನವಾಡಿಗಳನ್ನು ಸಜ್ಜುಗೊಳಿಸಲಾಗಿದೆ. ಅಂಗನವಾಡಿಗಳಿಗೆ ಗೋಡೆ ಬರಹಗಳನ್ನು ಮಾಡಲಾಗಿದೆ. ಖಾಸಗಿ ಶಾಲೆಗಳಂತೆ ಮಕ್ಕಳಿಗೆ ಟಾಕಿಂಗ್ ಟಾಮ್ ಎಂಬ ಸ್ವಯಂ ಪಠ್ಯ ಉಪದೇಶಿಸುವ ಕಲಿಕಾ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿದೆ. ಅಂಗನವಾಡಿಗಳಿಗೆ ಕುಡಿಯುವ ನೀರು ಸರಬರಾಜು, ವಿದ್ಯುತ್ ಬಿಲ್ಲು ಪಾವತಿಯಂತಹ ಸವಲತ್ತುಗಳನ್ನು ನೀಡಲಾಗುತ್ತಿದೆ. ಇದರಿಂದಾಗಿ ಮಕ್ಕಳ ಸಂಖ್ಯೆಯನ್ನು ಏರಿಕೆ ಕಂಡಿರುತ್ತದೆ. ಶಾಲೆಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳನ್ನು ನೀಡಲಾಗುತ್ತಿದ್ದು, ರಾಜಾನುಕುಂಟೆ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಿಗೆ ಹೆಚ್ಚುವರಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ.

## ಮೂಲಭೂತ ಸೌಕರ್ಯಗಳಿಗೆ ಆದ್ಯತೆ :

ಗ್ರಾಮ ಪಂಚಾಯ್ತಿಯ ವರ್ಗ-1 ಮತ್ತು 14 ನೇ ಹಣಕಾಸಿನಡಿ ಗ್ರಾಮಗಳ ಮೂಲಭೂತ ಸೌಕರ್ಯಗಳಿಗೆ

ಆದ್ಯತೆ ನೀಡಿದ್ದು ಸುಮಾರು 200 ಮೀಟರ್ ರಸ್ತೆ ಸುಮಾರು 200 ಚರಂಡಿ ನಿರ್ಮಿಸಲಾಗಿದೆ. ಕುಡಿಯುವ ನೀರಿಗಾಗಿ ನಲ್ಲಿ ಸಂಪರ್ಕ, ಕೆ.ಎಂ.ಎಫ್ ಸಹಯೋಗ ಮತ್ತು ಗ್ರಾಮ ಪಂಚಾಯ್ತಿ ನಿಧಿಯಲ್ಲಿ ಅದ್ದೆವಿಶ್ವನಾಥಪುರ, ಶ್ರೀರಾಮನಹಳ್ಳಿ ಮತ್ತು ಅದ್ದೆ ಗ್ರಾಮದಲ್ಲಿ ದಾನಿಗಳಿಂದ 1 ಒಟ್ಟು 3 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಗಿದೆ ತುರ್ತು ಕುಡಿಯುವ ನೀರಿಗಾಗಿ ಸ್ವಂತ ಅನುದಾನದಲ್ಲಿ ಕುಡಿಯುವ ನೀರಿನ ಟ್ಯಾಂಕರ್‌ರನ್ನು ಖರೀದಿಸಲಾಗಿದೆ. ಎಲ್ಲಾ ಗ್ರಾಮಗಳಲ್ಲಿಯೂ ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿಗಳನ್ನು ನಿರ್ಮಾಣ ಮಾಡಲಾಗಿದೆ. ಗ್ರಾಮ ಪಂಚಾಯ್ತಿಯ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ದನದ ದೊಡ್ಡಿ, ಇಂಗು ಗುಂಡಿ, ವಸತಿ ಯೋಜನೆಯ ಮನೆ, ಚರಂಡಿ ಕಾಮಗಾರಿ, 5 ಸಾವಿರ ಗಿಡಗಳನ್ನು ನೆಡುವ ಮೂಲಕ ಅರಣ್ಯಕರಣಕ್ಕೆ ಒತ್ತು ನೀಡಲಾಗಿದೆ.

ಸಾರ್ವಜನಿಕರು ಗ್ರಾಮ ಪಂಚಾಯ್ತಿಯ ಚುನಾಯಿತ ಪ್ರತಿನಿಧಿಗಳೊಂದಿಗೆ ಸೇರಿ ಚೆಕ್ ಡ್ಯಾಂ ನಿರ್ಮಾಣ, ಆಟದ ಮೈದಾನ ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ, ಅರಣ್ಯಕರಣ, ಸಾರ್ವಜನಿಕ ಶೌಚಾಲಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸರ್ಕಾರಿ ಆಸ್ತಿಗಳ ರಕ್ಷಣೆಯನ್ನು ಸಹ ಮಾಡಿ ಗ್ರಾಮ ಪಂಚಾಯ್ತಿ ವಶಕ್ಕೆ ತೆಗೆದುಕೊಂಡು ಆಟದ ಮೈದಾನ, ಉದ್ಯಾನವನ ನಿರ್ಮಾಣ, ಕುಡಿಯುವ ನೀರಿನ ಘಟಕ ನಿರ್ಮಾಣ, ಸಾರ್ವಜನಿಕ ಕಟ್ಟಡಗಳ ನಿರ್ಮಿಸಲಾಗುತ್ತಿದೆ. ಗ್ರಾಮ ಪಂಚಾಯ್ತಿಯ ಸರ್ಕಾರಿ ಆಸ್ತಿಗಳನ್ನು ಗುರುತಿಸಲಾಗುತ್ತಿದ್ದು ಒತ್ತುವರಿಯಾದ ಸ್ಥಳಗಳನ್ನು ಗ್ರಾಮ ಪಂಚಾಯ್ತಿ ವಶಕ್ಕೆ ಪಡೆಯಲಾಗಿದ್ದು, ಆಟದ ಮೈದಾನ, ಉದ್ಯಾನವನಗಳನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ. ಮತ್ತು ಕ್ರಮೇಣ ಸರ್ಕಾರಿ ಆಸ್ತಿಗಳ ರಕ್ಷಣೆಗೆ ಕ್ರಮಕೈಗೊಳ್ಳಲಾಗುತ್ತಿದೆ. ಲಭ್ಯವಿರುವ ಗ್ರಾಮ ಪಂಚಾಯ್ತಿ ಸಭಾಭವನಗಳನ್ನು ಗ್ರಾಮಸ್ಥರ ಅನುಕೂಲಕ್ಕಾಗಿ ಯೋಗ, ಸ್ವ-ಸಹಾಯ ಗುಂಪುಗಳ ಸಭೆ, ತರಬೇತಿ ಚಟುವಟಿಕೆಗಳು, ಸಂಘ ಸಂಸ್ಥೆಗಳ ಸಭೆಗಳನ್ನು ನಡೆಸಲು ಉಪಯೋಗಿಸಲಾಗುತ್ತಿದೆ. ಪೊಲೀಸ್ ಇಲಾಖೆಯ ಮೂಲಕ ಬರುವ ಅನಾಥ ಶವಗಳನ್ನು ಗ್ರಾಮ ಪಂಚಾಯ್ತಿ ವತಿಯಿಂದ ಶವ ಸಂಸ್ಕಾರಗಳನ್ನು ಮಾಡಲಾಗುತ್ತಿದೆ.

ಎಂ.ಜಿ.ಎನ್ ಆರ್.ಇ ಜಿ.ಎ ವತಿಯಿಂದ ಅರಣ್ಯೀಕರಣ ಮಾಡಿ ಉದ್ಯಾನವನ ನಿರ್ಮಿಸಲಾಗಿದೆ, ಕೆರೆಗಳಲ್ಲಿ ರಸ್ತೆ ಬದಿ ಖಾಲಿ ಸ್ಥಳಗಳಲ್ಲಿ 5 ಸಾವಿರ ಗಿಡಗಳನ್ನು ನೆಡಲಾಗಿದೆ. ಅಲ್ಲದೆ ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು, ಗ್ರಾಮ ಪಂಚಾಯ್ತಿ ಚುನಾಯಿತ ಪ್ರತಿನಿಧಿಗಳೊಂದಿಗೆ ಸೇರಿ ವನಮಹೋತ್ಸವ ಆಚರಣೆ ಮಾಡಿ 6 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ. ಸ್ಮಶಾನಗಳನ್ನು ರಕ್ಷಣೆ ಮಾಡಿ ಅಲ್ಲಿಯೂ ಗಿಡಗಳನ್ನು ನೆಡಲಾಗಿದೆ. ಗ್ರಾಮ ಪಂಚಾಯ್ತಿಯ ಶ್ರೀರಾಮನಹಳ್ಳಿ ಗ್ರಾಮದಲ್ಲಿ ಪೀಪಲ್ ಟ್ರಸ್ಟ್ ಎಂಬ ಜನಸ್ನೇಹಿ ಸಂಸ್ಥೆ ಇದ್ದು, ಇದು ಸುತ್ತಮುತ್ತಲಿನ ಗ್ರಾಮಗಳಿಗೆ ಹೆಸರುವಾಸಿಯಾದ ಸಂಸ್ಥೆಯಾಗಿದೆ.

ಗ್ರಾಮ ಸಭೆಯ ಮಹತ್ವದ ಕುರಿತು ನಾಟಕವನ್ನು ಮಕ್ಕಳಿಂದಲೇ ನಡೆಸಿ ನಿರ್ವಹಿಸಿ, ಒಟ್ಟಾರೆ ಎಲ್ಲಾ ಚಟುವಟಿಕೆಯನ್ನು ಮಕ್ಕಳಿಂದಲೇ ಕಾರ್ಯಕ್ರಮವನ್ನು ರೂಪಿಸಿ ಜಾಗೃತಿ ಮೂಡಿಸಲಾಯಿತು. ಅಂಗವಿಕಲ ಮಕ್ಕಳ ಕಲ್ಯಾಣಾಭಿವೃದ್ಧಿ ಸಂಸ್ಥೆಯಿಂದ ಸಮರ್ಥನ ಸಂಸ್ಥೆಯೊಂದಿಗೆ ರಾಜ್ಯ ಮಟ್ಟದ ಆಯ್ದ ಮಕ್ಕಳಿಗೆ 1 ವಾರದ ತರಬೇತಿ ಕಾರ್ಯಕ್ರಮವನ್ನು ಪೀಪಲ್ ಟ್ರಸ್ಟ್ ಮತ್ತು ಗ್ರಾಮ ಪಂಚಾಯ್ತಿಯ ಸಹಯೋಗದೊಂದಿಗೆ ನಡೆಸಲಾಗಿರುತ್ತದೆ.

ಸಂಸದರ ಆದರ್ಶ ಗ್ರಾಮ ಯೋಜನೆ ಪ್ರಗತಿಗಾಗಿ ರಾಜಾನುಕುಂಟೆ ಆದರ್ಶ ಗ್ರಾಮ ಎಂಬ ವಾಟ್ಸಪ್ ಗ್ರೂಪನ್ನು ರಚಿಸಲಾಗಿದೆ. ಸರ್ಕಾರದ ಎಲ್ಲಾ ಇಲಾಖೆಗಳ ಈ ಯೋಜನೆಯಡಿ ಸೇರಿ ಎಲ್ಲರೂ ಒಟ್ಟಾಗಿ ಕರ್ತವ್ಯ ನಿರ್ವಹಿಸಬೇಕಾಗಿರುವುದರಿಂದ ವಿವಿಧ ಇಲಾಖೆಗಳ ಹೆಚ್ಚಿನ ಸಹಾಯವನ್ನು ಗ್ರಾಮ ಪಂಚಾಯ್ತಿ ನಿರೀಕ್ಷಿಸಲಾಗುತ್ತಿದೆ. ಗ್ರಾಮ ಪಂಚಾಯ್ತಿ ಸೌಕರ್ಯ ವಲಯಕ್ಕೆ ಒತ್ತುಕೊಟ್ಟ ಹಾಗೆ ಸಾಮಾಜಿಕ ವಲಯಕ್ಕೂ ಒತ್ತು ನೀಡಿ ಶೇ.25 ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣ ಕಾರ್ಯಕ್ರಮಗಳು, ಶೇ.3 ಸಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು, ಶೇ.2 ಯುವಜನ ಸೇವಾ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗಿದೆ.

ಗ್ರಾಮ ಪಂಚಾಯ್ತಿಯ 2016-17 ನೇ ಸಾಲಿನಲ್ಲಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಯೋಜನೆ ತಯಾರಿಸಲಾಗಿದೆ. ಸೌಕರ್ಯ ವಲಯಕ್ಕೆ ಒತ್ತುಕೊಡದೆ ಸಾಮಾಜಿಕ, ಉತ್ಪಾದನಾ ವಲಯಕ್ಕೂ ಆದ್ಯತೆ ನೀಡಲಾಗಿದೆ. ಗ್ರಾಮ ಪಂಚಾಯ್ತಿ ಅಭಿವೃದ್ಧಿಯಲ್ಲಿ ಉತ್ತಮ ಸಹಕಾರ ನೀಡಲಾದ ಜನಪ್ರತಿನಿಧಿಗಳು, ಸಾರ್ವಜನಿಕರು, ಸಿಬ್ಬಂದಿಗಳನ್ನು ಆಯ್ಕೆ ಮಾಡಿ ಸನ್ಮಾನಿಸಲು ಕ್ರಮಕೈಗೊಳ್ಳಲಾಗಿದೆ. ಗ್ರಾಮ ಪಂಚಾಯ್ತಿ ಅಭಿವೃದ್ಧಿಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರದ ಹಲವಾರು ತಂಡಗಳು ಬಂದು ಪರಿಶೀಲನೆ ನಡೆಸಿರುತ್ತಾರೆ. 2015-16ನೇ ಸಾಲಿನ ಪ್ರಗತಿ, ಮುನ್ನೋಟದ ಬಗ್ಗೆ 2016-17ರ ನಮ್ಮ ಗ್ರಾಮ ಪಂಚಾಯ್ತಿ ರಾಜಾನುಕುಂಟೆ ಕೈಪಿಡಿ ಬಿಡುಗಡೆ ಮಾಡಲಾಯಿತು. 2016-17 ನೇ ಸಾಲಿನ ಪ್ರಗತಿ, ಮುನ್ನೋಟದ ಕುರಿತು ಈ ಕಿರುಚಿತ್ರ ಬಿಡುಗಡೆ ಮಾಡಲಾಗಿದೆ. ಸದರಿ ಕಿರುಚಿತ್ರವನ್ನು Youtube ನಲ್ಲಿ http://youtu.be/6QkETpPJ_1Y ಈ ಲಿಂಕ್‌ನ ಮೂಲಕ ವೀಕ್ಷಿಸಬಹುದಾಗಿದೆ. ಜನ ಸೇವೆಯೇ ಜನಾರ್ಧನ ಸೇವೆ ಒದಗಿ ಬಂದಿರುವ ಜನ ಸೇವೆಯ ಅವಕಾಶವನ್ನು ಪಡೆದು ಸೇವೆ ಮಾಡೋಣ.

ಯಶೋಗಾಥೆ



ಎನ್. ಕೋಡಿಪಾಳ್ಯ ಕೃಷ್ಣಪ್ಪ

ನಿರ್ದೇಶಕರು (ಗ್ರಾಮೂಸೌ_2)
ಹಾಗೂ ಪ.ನಿ. ಸರ್ಕಾರದ ಜಂಟಿ
ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆ

# ಪಶ್ಚಿಮ ಘಟ್ಟ ಅಭಿವೃದ್ಧಿ

## ಹೆಗ್ಗುಂಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ದೇವಣ್ಣಮಕ್ಕಿ ಎಂಬಲ್ಲಿ ನಿರ್ಮಾಣಗೊಂಡ ಕಿಂಡಿ ಅಣೆಕಟ್ಟು:

ಉಡುಪಿ ತಾಲ್ಲೂಕಿನ ಹೆಗ್ಗುಂಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ದೇವಣ್ಣಮಕ್ಕಿ ಎಂಬಲ್ಲಿ ಹಲವಾರು ವರ್ಷಗಳಿಂದ ತೋಡಿಗೆ ಅಡ್ಡಲಾಗಿ ಮಣ್ಣಿನ ಕಟ್ಟೆಯನ್ನು ಕಟ್ಟಿ 2ನೇ ಬೆಳೆಯಾದ ಭತ್ತದ ಬೆಳೆಗೆ ನೀರನ್ನು ಬಳಸುತ್ತಿದ್ದರು. ಹಾಗೂ ತೋಡನ್ನು ದಾಟಲು ಮರದ ಕಂಬಗಳನ್ನು ತೋಡಿಗೆ ಅಡ್ಡಲಾಗಿ ಹಾಕಿ ಕಾಲು ಸಂಕವಾಗಿ ಮಾಡುತ್ತಿದ್ದರು. ನವೆಂಬರ್– ಡಿಸೆಂಬರ್ ತಿಂಗಳಲ್ಲಿ ಅಕಾಲಿಕ ಮಳೆ ಹಾಗೂ ಏಡಿಗಳು ರಂಧ್ರ ಕೊರೆದು ಮಣ್ಣಿನ ಕಟ್ಟೆ ಒಡೆದು ನೀರು ಪೋಲಾಗಿ ಬೆಳೆ ಕೊನೆಯ ಹಂತದಲ್ಲಿ ನೀರಿನ ಕೊರತೆಯಿಂದ ಭತ್ತದ ಇಳುವರಿ ಕಡಿಮೆಯಾಗಿ ರೈತರು ತುಂಬಾ ತೊಂದರೆ ಒಳಗಾಗುತ್ತಿದ್ದ ಪ್ರಸಂಗಗಳು ಕಂಡು ಬಂದಿರುತ್ತದೆ. ಈ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಕುಸಿತವಿತ್ತು ಹಾಗೂ ಬಾವಿಯ ನೀರಿನ ಮಟ್ಟ ಬಾರಿ ಕೆಳ ಮಟ್ಟಕ್ಕೆ ಹೋಗುತ್ತಿತ್ತು.

ಈ ಹಿನ್ನಲೆಯಲ್ಲಿ ರೈತರ ಬೇಡಿಕೆಯಂತೆ ಜಲಾನಯನ ಅಭಿವೃದ್ಧಿ ಉಪಸಮಿತಿ ಹೆಗ್ಗುಂಜೆ ಗ್ರಾಮ ಪಂಚಾಯತ್ ವತಿಯಿಂದ 2016–17ನೇ ಸಾಲಿನಲ್ಲಿ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ 1 ನೇ ಹಂತದಡಿಯಲ್ಲಿ 2.35 ಲಕ್ಷ ವೆಚ್ಚದಲ್ಲಿ ದೇವಣ್ಣಮಕ್ಕಿ ಬಳಿ ಇರುವ ತೋಡಿಗೆ ಕಿಂಡಿ ಅಣಿಕಟ್ಟು ನಿರ್ಮಿಸಲಾಯಿತು. ಈ ಕಿಂಡಿ ಅಣಿಕಟ್ಟು ಕಟ್ಟಿದ್ದರಿಂದ ಸುಮಾರು 15.45 ಹೆಕ್ಟೇರ್ ಭತ್ತದ ಗದ್ದೆಗಳಿಗೆ ನೀರು ಸಾಗಿಸಲು ಅನುಕೂಲವಾಗಿರುತ್ತದೆ. ಮುಖ್ಯವಾಗಿ ಅಂತರ್ಜಲ ವೃದ್ಧಿಯಾಗಿ ಆಸುಪಾಸಿನ ಬಾವಿಗಳಲ್ಲಿ ಹೆಚ್ಚಿನ ಅವಧಿಗೆ ನೀರು ಲಭ್ಯವಾಗುತ್ತಿರುವುದು ಕಂಡುಬರುತ್ತದೆ.



ಉಡುಪಿ ತಾಲ್ಲೂಕಿನ ಹೆಗ್ಗುಂಜೆ ಗ್ರಾಮ ಪಂಚಾಯತ್, ಹೆಗ್ಗುಂಜೆ ಗ್ರಾಮದಲ್ಲಿರುವ ಗದ್ದೆಯಲ್ಲಿ ಕಿಂಡಿ ಅಣೆಕಟ್ಟು ಮಾಡಿದ ನಂತರ ಹೆಚ್ಚಿನ ರೈತರು ಸುಗ್ಗಿ ಬೆಳೆಯನ್ನು ಮಾಡುತ್ತಿದ್ದಾರೆ. ಪರಿಸರವೆಲ್ಲಾ ಹಚ್ಚ ಹಸುರಾಗಿ ಕಂಗೊಳಿಸುತ್ತಿದೆ. ರೈತರ ಆರ್ಥಿಕ ಮಟ್ಟ ಸ್ವಲ್ಪ ಸುಧಾರಿಸಿದೆ. ಪರಿಸರದ ಬಾವಿ ಅಂತರ್ ಜಲಮಟ್ಟದಲ್ಲಿ ಸ್ವಲ್ಪ

**ಉಡುಪಿ ತಾಲೂಕಿನ ಹೆಗ್ಗುಂಜೆ ಗ್ರಾಮ ಪಂಚಾಯತ್, ಹೆಗ್ಗುಂಜೆ ಗ್ರಾಮದಲ್ಲಿರುವ ಗದ್ದೆಯಲ್ಲಿ ಕಿಂಡಿ ಅಣೆಕಟ್ಟು ಮಾಡಿದ ನಂತರ ಹೆಚ್ಚಿನ ರೈತರು ಸುಗ್ಗಿ ಬೆಳೆಯನ್ನು ಮಾಡುತ್ತಿದ್ದಾರೆ. ಪರಿಸರವೆಲ್ಲಾ ಹಚ್ಚ ಹಸುರಾಗಿ ಕಂಗೊಳಿಸುತ್ತಿದೆ. ರೈತರ ಆರ್ಥಿಕ ಮಟ್ಟ ಸ್ವಲ್ಪ ಸುಧಾರಿಸಿದೆ. ಪರಿಸರದ ಬಾವಿ ಅಂತರ್ ಜಲಮಟ್ಟದಲ್ಲಿ ಸ್ವಲ್ಪ ಚೇತರಿಕೆಯನ್ನು ಕಂಡಿದೆ.**



ಚೇತರಿಕೆಯನ್ನು ಕಂಡಿದೆ. ಮುಂದಿನ ದಿನಗಳಲ್ಲಿ ನೀರಿನ ಅಂತರ್ಜಲ ಮಟ್ಟ ಅಭಿವೃದ್ಧಿ ಆಗುವುದರಲ್ಲಿ ಸಂದೇಹವಿಲ್ಲ ಎನ್ನಬಹುದು. ದೇವಣ್ಣಮಕ್ಕಿ ವ್ಯಾಪ್ತಿ ಪ್ರದೇಶದ ಫಲಾನುಭವಿಗಳು ಕೃಷಿ ಇಲಾಖಾವತಿಯಿಂದ ರಚಿಸಿದ ಕಿಂಡಿ ಅಣೆಕಟ್ಟು ಕಾಮಗಾರಿಯ ಬಗ್ಗೆ ಸಂತಸವನ್ನು ವ್ಯಕ್ತಪಡಿಸಿದ್ದಾರೆ.

## ಆಜ್ರಿ ಜಲಾನಯನ ಉಪಸಮಿತಿಯ ಮಾಜೂರು ಎಂಬಲ್ಲಿ ನಿರ್ಮಾಣಗೊಂಡ ಕಿಂಡಿ ಅಣೆಕಟ್ಟು

ಕುಂದಾಪುರ ತಾಲೂಕಿನ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಬ್ಯಾಚ್–2ರ ಆಜ್ರಿ ಜಲಾನಯನ ಉಪಸಮಿತಿಯ ಮಾಜೂರು ಎಂಬ ಸ್ಥಳದಲ್ಲಿ 2016–17ನೇ ಸಾಲಿನಲ್ಲಿ ಕಿಂಡಿ ಅಣೆಕಟ್ಟು ರಚನೆ ಮಾಡಿದ್ದು, ಇದರಿಂದ ಅಲ್ಲಿಯ 10–12 ರೈತ ಕುಟುಂಬಗಳ 13 ರಿಂದ 15 ಎಕ್ರೆ ಹಿಂಗಾರು ಭತ್ತದ ಬೆಳೆಗೆ ನೀರಾವರಿ ಒದಗಿಸಿದಂತಾಗಿದೆ. ಅಲ್ಲದೇ, ದ್ವಿದಳ ಧಾನ್ಯ ಬೆಳೆಯನ್ನು ಬೆಳೆಸುತ್ತಿದ್ದು, 3 ರಿಂದ 5 ಎಕ್ರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆಗೆ ನೀರಾವರಿ ಒದಗಿಸಿದಂತಾಗಿದೆ. ಸದರಿ ಕಾಮಗಾರಿಗೆ ಸುಮಾರು 300000/– ರೂಪಾಯಿ ವೆಚ್ಚವಾಗಿರುತ್ತದೆ. ಅಲ್ಲದೇ, 1320 ಘ.ಮೀ ನೀರು ಸಂಗ್ರಹಣೆ ಆಗಿ ಕಿಂಡಿ ಅಣೆಕಟ್ಟಿನ ಕೆಳ ಭಾಗದ ಬಾವಿಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿರುವುದು ಕಂಡುಬಂದ ಬಗ್ಗೆ ರೈತರು ಅಭಿಪ್ರಾಯ ತಿಳಿಸಿರುತ್ತಾರೆ. ಶಾಲಾ ಮಕ್ಕಳಿಗೆ ಮಳೆಗಾಲದಲ್ಲಿ ತೋಡು ದಾಟಲು ಅನುಕೂಲವಾಗುತ್ತದೆ ಅಲ್ಲದೇ ಉಳುಮೆ ಯಂತ್ರವನ್ನು ಸಾಗಿಸಲು ಅನೂಕೂಲವಾಗಿರುತ್ತದೆ ಎಂದೂ ರೈತರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

## ಆಜ್ರಿ ಜಲಾನಯನ ಉಪಸಮಿತಿಯ ಗುಡಿಮನೆ ಎಂಬಲ್ಲಿ ನಾಲಾ ಬದಿಕಟ್ಟುವುದು

ಕುಂದಾಪುರ ತಾಲೂಕಿನ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಬ್ಯಾಚ್–2ರ ಆಜ್ರಿ ಜಲಾನಯನ ಉಪಸಮಿತಿಯ ಗುಡಿಮನೆ ಜಮೀನಿನ ಬಳಿ 2016–17ನೇ ಸಾಲಿನಲ್ಲಿ ನಾಲಾ ಬದಿಕಟ್ಟಲಾಗಿದ್ದು, ಇದರಿಂದ ಮಳೆಗಾಲದ ನೆರೆಯಿಂದ ಕಂಡ ಒಡೆದು ನೀರು ಒಳನುಗ್ಗಿ ರೈತರ ಜಮೀನು ಕೊಚ್ಚಿ ಹೋಗಿ ಮರಳು ಸಂಗ್ರಹಣೆಯಾಗುತ್ತಿದ್ದು, ಈಗ ಈ ತಡೆಗೋಡೆ ರಚನೆಯಿಂದ ಮಳೆಗಾಲದ ಮಳೆನೀರು ನುಗ್ಗದಂತೆ ತಡೆದು ಮಣ್ಣು ಕೊಚ್ಚಣೆ ತಡೆದು ಸುಮಾರು 12–15 ರೈತರಿಗೆ ಮಳೆಗಾಲದ ಭತ್ತದ ಕೃಷಿ ಮಾಡಲು ಅನೂಕೂಲವಾಗುತ್ತದೆ ಎಂದು ರೈತರು ತಮ್ಮ ಅಭಿಪ್ರಾಯ ತಿಳಿಸಿರುತ್ತಾರೆ. ಇದಕ್ಕೆ ಸುಮಾರು 90000/– ರೂಪಾಯಿ ವೆಚ್ಚವಾಗಿರುತ್ತದೆ. ■



ಯಶೋಗಾಥೆ




ಸೂರ್ಯನಾರಾಯಣ್
ಆರ್. ಭಟ್

ಜಿಲ್ಲಾ HRD ಸಮಾಲೋಚಕರು
ಜಿಲ್ಲಾ ನರವು ಘಟಕ.
ಜಿಲ್ಲಾ ಪಂಚಾಯತ್
ಉತ್ತರ ಕನ್ನಡ


# ಬಯಲು ಬಹಿರ್ದೆಸೆ ಮುಕ್ತ ಉತ್ತರ ಕನ್ನಡ

ಸಾರ್ವತ್ರಿಕ ಸ್ವಚ್ಛತೆಯು ಒಂದು ಪ್ರದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅಳೆಯುವ ಮಾನದಂಡದಂತೆ. ಯಾಕೆಂದರೆ ಆಹಾರ, ವಸತಿ, ಶಿಕ್ಷಣಗಳಂತೆ ಆರೋಗ್ಯವೂ ಇಂದು ನಮ್ಮ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ಸ್ವಚ್ಛ, ಸ್ವಾಸ್ಥ್ಯ ಸಮಾಜವು ಸುಭದ್ರ ಸಮಾಜದ ಸಂಕೇತವಾಗಿದೆ. ಹಲವಾರು ದಶಕಗಳ ಹಿಂದೆಯೇ ಈ ಕಾರಣದಿಂದ ಮಹಾತ್ಮಾ ಗಾಂಧೀಜಿಯವರು ಶೌಚಾಲಯಗಳನ್ನು ದೇಗುಲಗಳೆಂದು ಭಾವಿಸಿದ್ದರು. ರಾಷ್ಟ್ರಪಿತನ ಈ ಕನಸನ್ನು ಗ್ರಾಮಮಟ್ಟದಲ್ಲಿ ವೈಯುಕ್ತಿಕ ಸ್ವಚ್ಛತೆಯ ಮೂಲಕ ಅಳವಡಿಸಲು ಉತ್ತರಕನ್ನಡ ಜಿಲ್ಲೆಯು ಕೈಗೊಂಡಿರುವ ಹಲವು ಮಹತ್ತರ ಕಾರ್ಯಕ್ರಮಗಳು ಇಂದು ಇಡೀ ರಾಜ್ಯವೇ ಇತ್ತ ತಿರುಗಿ ನೋಡುವಂತೆ ಮಾಡಿದೆ. ಅನೇಕ ಬುಡಕಟ್ಟು, ಆದಿವಾಸಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ, ಶೌಚಾಲಯ ನಿರ್ಮಾಣದ, ಬಳಕೆಯ ಬಗ್ಗೆ ತೀವ್ರ ನಿರಾಸಕ್ತಿ ಹಾಗೂ ಆರ್ಥಿಕ ಅನಾನುಕೂಲತೆ ಹೊಂದಿರುವ ಜನರಿದ್ದ ಈ ಜಿಲ್ಲೆಯಲ್ಲಿ ಕಳೆದ 4 ವರ್ಷಗಳಲ್ಲಿ 1,02,347/- ಶೌಚಾಲಯ ನಿರ್ಮಿಸಿ ಗುರಿ ಸಾಧನೆಯೆಡೆಗೆ ದಿಟ್ಟ ಹೆಜ್ಜೆ ಇಟ್ಟಿದೆ.

ಭಾಗಶಃ ಆರ್ಥಿಕವಾಗಿ ಹಿಂದುಳಿದ, ಬುಡಕಟ್ಟು, ಆದಿವಾಸಿಗಳಿಂದ ಕೂಡಿರುವ ಈ ಜಿಲ್ಲೆಯಲ್ಲಿ ಶೌಚಾಲಯಗಳ ನಿರ್ಮಾಣ, ಬಳಕೆಯ ಬಗ್ಗೆ ಪ್ರಜ್ಞೆ ಮೂಡಿಸುವ





**ಜಿಲ್ಲೆಯನ್ನು ಬಯಲು ಮಲವಿಸರ್ಜನಾ ಮುಕ್ತ ಜಿಲ್ಲೆಯನ್ನಾಗಿಸಲು ಈಗಾಗಲೇ ಅನೇಕ ಕಾರ್ಯಕ್ರಮ ಪ್ರಗತಿಯಲ್ಲಿದ್ದು, 2017-18 ನೇ ಸಾಲಿನಲ್ಲಿ ಜೂನ್ ತಿಂಗಳ ಅಂತ್ಯಕ್ಕೆ ಜೋಯಿಡಾ ತಾಲೂಕನ್ನು ಬಯಲು ಮಲವಿಜರ್ಸನಾ ಮುಕ್ತ ತಾಲೂಕನ್ನಾಗಿ ಘೋಷಿಸಲಾಗಿದೆ.**

ಕಾರ್ಯ ಅಂದುಕೊಂಡಷ್ಟು ಸುಲಭವಾಗಿರಲ್ಲಿಲ್ಲ. ಭೌಗೋಳಿಕವಾಗಿ ವಿಸ್ತಾರವಾದ, ದೂರದೂರದಲ್ಲಿ ಮನೆಯನ್ನು ಹೊಂದಿರುವ ಜಿಲ್ಲೆಯಲ್ಲಿ ಆರಂಭಿಕ ಹಂತದಲ್ಲಿ ಈ ನಿಟ್ಟಿನಲ್ಲಿ ಹಲವಾರು ನವೀನ ಕಾರ್ಯಕ್ರಮಗಳನ್ನು ರಚಿಸಲಾಯಿತು. ಜಿಲ್ಲೆಯಾದ್ಯಂತ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಅಭಿಯಾನವನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಲಾಯಿತು. ಶೌಚಾಲಯಗಳ ಮಹತ್ವ ಬಿಂಬಿಸುವ ಬೀದಿ ನಾಟಕಗಳ ಮುಖಾಂತರ ಅರಿವನ್ನು ಜಾಗೃತಿಗೊಳಿಸಲು ಮುನ್ನಡಿ ಇಡಲಾಯಿತು. ಕರಾವಳಿಯ ಗಂಡು ಕಲೆಯಾದ ಯಕ್ಷಗಾನವು ಈ ಕಾರ್ಯಕ್ಕೆ ಹಸ್ತ ಚಾಚಿತು. ಅಲ್ಲದೇ ಭಿತ್ತಿ ಪತ್ರ, ಗೋಡಬರಹ, ಕರಪತ್ರಗಳನ್ನು ಹಂಚುವುದು, ಪತ್ರಿಕಾ ಪ್ರಕಟಣೆ, ಬ್ಯಾನರ್, ಹೋರ್ಡಿಂಗ್ ಫಲಕಗಳ ಮುಖಾಂತರ ತಿಳುವಳಿಕೆ ಮೂಡಿಸಲಾಯಿತು.

ಬಾನುಲಿ ಹಾಗೂ ದೂರದರ್ಶನಗಳಲ್ಲಿ ಮಾಹಿತಿ ಪ್ರಸಾರ ಮಾಡಲಾಯಿತು. ಸಾರ್ವಜನಿಕರಿಗೆ ಅಲ್ಲಲ್ಲಿ ಕಾರ್ಯಾಗಾರಗಳು, ಗುಂಪು ಸಭೆಗಳನ್ನು ಆಯೋಜಿಸಲಾಯಿತು.

ಜಿಲ್ಲೆಯ ಉಸ್ತುವಾರಿ ಮಂತ್ರಿಗಳ ಮೇಲ್ವಿಚಾರಣೆಯಲ್ಲಿ ಕಳೆದ ಮೂರು ವರ್ಷಗಳಿಂದ ಪ್ರತಿವರ್ಷ ಅಕ್ಟೋಬರ್ 2ರಿಂದ ಆರಂಭಗೊಳ್ಳುವ 8ದಿನಗಳ ನಿರಂತರ ಸ್ವಚ್ಛತಾ ಸಪ್ತಾಹದ ಮೂಲಕ ರಾಷ್ಟ್ರಪಿತನ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಹಾಗೇಯೇ ಪ್ರತಿವರ್ಷ ನವೆಂಬರ್ 19ರಂದು ವಿಶ್ವಶೌಚಾಲಯ ದಿನಾಚರಣೆಯನ್ನು ಆಚರಿಸಿ, ಜನರಲ್ಲಿ ಶೌಚಾಲಯದ ಮಹತ್ವದ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ.

ಜಿಲ್ಲೆಯ ಜನತೆ ಶೌಚಾಲಯ ನಿರ್ಮಾಣಕ್ಕೆ ನಿರಾಸಕ್ತಿ ತೋರಿಸಲು ಮುಖ್ಯ ಕಾರಣ ಆರ್ಥಿಕ ತೊಂದರೆ. ಉತ್ತಮ ಗುಣಮಟ್ಟದ ಶೌಚಾಲಯಗಳ ನಿರ್ಮಾಣಕ್ಕೆ ಬೇಕಾಗುವಷ್ಟು ಹಣಕಾಸನ್ನು ಹೊಂದಿಸುವುದು ಇಲ್ಲಿನ ಬಡ ಜನಸಮುದಾಯಕ್ಕೆ ಕಷ್ಟಸಾಧ್ಯ. ಶೌಚಾಲಯಗಳನ್ನು ಕಟ್ಟಲು ಸರ್ಕಾರದ ನೆರವಿದ್ದರೂ, ಪ್ರೋತ್ಸಾಹಧನ ನೀಡಿಕೆ ನಿರ್ಮಾಣದ ನಂತರವಷ್ಟೆ. ಸಮಸ್ಯೆಯ ಮೂಲವನ್ನು ಅರಿತು ಅದರ ನಿವಾರಣೆಗೆ ಜಿಲ್ಲಾ ಪಂಚಾಯಿತಿಯು ದೇಶದಲ್ಲೇ ಪ್ರಥಮವಾದ ವಿಶಿಷ್ಟ ಯೋಜನೆಯನ್ನು ಕಾರ್ಯಗತಗೊಳಿಸಿತು. ಈ ಕಾರ್ಯದಲ್ಲಿ ಜಿಲ್ಲೆಯ ವಿವಿಧ ಹಣಕಾಸು ಸಂಸ್ಥೆಗಳ ನೆರವು ಕೋರಲಾಯಿತು. ಜಿಲ್ಲೆಯನ್ನು ಬಯಲು ಶೌಚಮುಕ್ತ ಜಿಲ್ಲೆಯನ್ನಾಗಿಸಲು ಹಲವಾರು ಬ್ಯಾಂಕುಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು ಜಿಲ್ಲಾಪಂಚಾಯಿತಿಯ ಜೊತೆಗೆ ಕೈಜೋಡಿಸಲು ಮುಂದೆ ಬಂದವು. 2014ರ ಜೂನ್-ಜುಲೈ ತಿಂಗಳುಗಳ ಅವಧಿಯಲ್ಲಿ ಜಿಲ್ಲೆಯಾದ್ಯಂತ ನೂರಾರು ಕಡೆಗಳಲ್ಲಿ ಮುಂಗಡ ಸಾಲಮೇಳಗಳನ್ನು ಹಮ್ಮಿಕೊಳ್ಳಲಾಯಿತು. ಈ ವಿಶಿಷ್ಟ ಮೇಳಗಳಲ್ಲಿ ಬ್ಯಾಂಕುಗಳು ಶೌಚಾಲಯ ನಿರ್ಮಾಣಕ್ಕೆ









ಮುಂದೆ ಬಂದ ಅರ್ಹ ಆಕಾಂಕ್ಷಿಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಮೂರು ತಿಂಗಳ ಅಲ್ಪಾವಧಿ ಸಾಲ ಒದಗಿಸಿದವು. ನಿರ್ಮಾಣದ ನಂತರ ಸರ್ಕಾರದಿಂದ ಸಿಗುವ ಅನುದಾನದಿಂದ ಫಲಾನುಭವಿಗಳು ಸಾಲ ತೀರಿಸಲು ಸೌಲಭ್ಯ ಒದಗಿಸಲಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಕಾರ್ಯಕ್ರಮದ ಮುಖಾಂತರ ಜಿಲ್ಲೆಯಲ್ಲಿ ಸುಮಾರು 3,000 ಕುಟುಂಬಗಳಿಗೆ ಮುಂಗಡ ಸಾಲ ನೀಡಲಾಯಿತು. ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕರ್ನಾಟಕ ವಿಕಾಸ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, SBI, ಕೆ.ಡಿ.ಸಿ.ಸಿ. ಬ್ಯಾಂಕ್ ಮುಂತಾದ ಬ್ಯಾಂಕ್‌ಗಳು ಸುಮಾರು 4200 ಕುಟುಂಬಗಳಿಗೆ ಮುಂಗಡಸಾಲ ನೀಡಲಾಗಿದೆ.

ಈ ಕಾರ್ಯಕ್ರಮವು ಜಿಲ್ಲೆಯಾದ್ಯಂತ ಸ್ವಚ್ಛತಾ ಕ್ರಾಂತಿಯ ಕಹಳೆ ಮೊಳಗಿಸಿತು. ಜಿಲ್ಲೆಯ ಅತ್ಯಂತ ಹಿಂದುಳಿದ ತಾಲೂಕಾದ ಹಳಿಯಾಳದಲ್ಲಿ ಗೌಳಿ, ಮರಾಠಿ ಸಮುದಾಯ ಹೆಚ್ಚಾಗಿ ವಾಸಿಸುತ್ತಿವೆ. ಅನಕ್ಷರತೆ, ಅಜ್ಞಾನದಿಂದ ಬಳಲುತ್ತಿದ್ದ ಈ ಜನರನ್ನು ಶೌಚಾಲಯ ನಿರ್ಮಾಣಕ್ಕೆ ಮನ ಒಲಿಸುವ ಗುರುತರ ಜವಾಬ್ದಾರಿಯನ್ನು ಸ್ವಚ್ಛತಾ ಸಮರವೆಂಬ ವಿಶಿಷ್ಟ ಆಂದೋಲನದ ಮೂಲಕ ಯಶಸ್ವಿಯಾಗಿ ಕೈಗೊಳ್ಳಲಾಯಿತು. ಸ್ವಚ್ಛತೆಯ ಕುರಿತು ಮಕ್ಕಳಲ್ಲಿ ಅರಿವು ಮೂಡಿಸಲು ಕಿರುಚಿತ್ರ ಪ್ರದರ್ಶನ, ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕೇವಲ 52% ಶೌಚಾಲಯ ಬಳಕೆದಾರರಿದ್ದ ಜಿಲ್ಲೆಯಲ್ಲಿ ಈ ಕಾರ್ಯಕ್ರಮದ ಅಳವಡಿಕೆಯಿಂದಾಗಿ ಇಲ್ಲಿಯವರೆಗೆ 94 % ಬಳಕೆದಾರರ ಮಟ್ಟವನ್ನು ತಲುಪಲಾಯಿತು. ಜಿಲ್ಲೆಯಲ್ಲಿ ಶೌಚಾಲಯ ನಿರ್ಮಿಸಲು ಪ್ರಮುಖ ತೊಂದರೆ ಎಂದರೆ ಸಕಾಲಕ್ಕೆ ಸಫ್ಟಿಕ್ ಟ್ಯಾಂಕ್, ಶೌಚಾಲಯ ಕಟ್ಟಡ ನಿರ್ಮಾಣಕ್ಕೆ ಇಲ್ಲಿಯ ಜನ ಬಳಸುವ ಕಲ್ಲುಗಳು, ಉಸುಕುಗಳ ತೀವ್ರ ತೊಂದರೆಯಿಂದಾಗಿ ಗುರಿ ಮುಟ್ಟುವುದು ಕಷ್ಟವಾಗಿತ್ತು. ಆಗ ಜಿಲ್ಲೆಯ ಶಿರಸಿ, ಮುಂಡಗೋಡ, ಸಿದ್ದಾಪುರ ಭಾಗದಲ್ಲಿ ರೂ. 12000 ವೆಚ್ಚದಲ್ಲಿ ಧೀರ್ಘ ಬಾಳಿಕೆ ಬರುವ ಮಾದರಿ ಶೌಚಾಲಯವನ್ನು ಪರಿಚಯಿಸಲಾಯಿತು. ಸುಮಾರು 3000 ಕ್ಕೂ ಅಧಿಕ ಫಲಾನುಭವಿಗಳು ಈ ಮಾದರಿ ಶೌಚಾಲಯ ನಿರ್ಮಿಸಿಕೊಂಡು ಬಳಸುತ್ತಿರುವುದು ಪ್ರಗತಿಗೆ ಪೂರಕವಾಗಿದೆ.

ಉತ್ತರಕನ್ನಡ ಜಿಲ್ಲೆಯು ಶೌಚಾಲಯ ನಿರ್ಮಾಣದಲ್ಲಿ ಸರ್ಕಾರದ ಉದ್ದೇಶಿತ ಗುರಿಯಲ್ಲಿ 2016-17 ನೇ ಸಾಲಿನಲ್ಲಿ ಸರ್ಕಾರವು ಜಿಲ್ಲೆಗೆ ವಯಕ್ತಿಕ ಶೌಚಾಲಯ ನಿರ್ಮಾಣಕ್ಕೆ 25,200 ಗುರಿ ನಿಗದಿ ಪಡಿಸಿದ್ದು ಅದರಲ್ಲಿ 35,800 ವಯಕ್ತಿಕ ಶೌಚಾಲಯ ನಿರ್ಮಿಸಿ ಗುರಿ ಸಾಧನೆಯಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ ಮೂರನೇಯ ಸ್ಥಾನವನ್ನು ಪಡೆದಿರುವುದು ಯೋಜನೆಯ ಯಶಸ್ಸಿಗೆ ಹಿಡಿದ ಮಾನದಂಡವಾಗಿದೆ

ಇಂದು ನಮ್ಮ ದೇಶದಲ್ಲಿ ಬಯಲು ಶೌಚ ನಿಷೇಧ ಕಾರ್ಯಕ್ರಮಗಳ ಅಡಿಯಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಅದಕ್ಕೋಸ್ಕರ ವಿವಿಧ ಶಿಸ್ತು ಕ್ರಮಗಳನ್ನು ನಿರ್ಧರಿಸಲಾಗಿದೆ. ಆದರೆ ಶಿಕ್ಷೆಯ ಬದಲು ಪ್ರೀತಿ ಜನರ ಹೃದಯವನ್ನು ಬಹುಬೇಗ ತಲುಪುತ್ತದೆ ಎಂಬುದನ್ನು ಮನಗಂಡ ಕಾರವಾರ ಜಿಲ್ಲಾ ಪಂಚಾಯಿತಿಯು ವಿನೂತನ ಪ್ರಯೋಗವನ್ನು ಕೈಗೊಂಡಿತು. ಶೌಚಾಲಯದ ನಿರ್ಮಾಣಕ್ಕೆ ಜನರ ಮನ ಪರಿವರ್ತಿಸಲು ಪ್ರತಿಯೊಬ್ಬ ನಾಗರಿಕನ ಮನೆಮನೆಗೆ ತೆರಳಿ ವಿನಮ್ರವಾಗಿ ವಿನಂತಿಸಿಕೊಳ್ಳುವುದು. ನಾಡಿನ ಸಂಸ್ಕೃತಿಯನ್ನು ನೆನಪಿಸುವಂತೆ, ಮದುವೆಯ ಮಂಗಳಕರ ಸಡಗರದ ಕರೆಯೋಲೆಯನ್ನು ಮೀರಿಸುವಂತಹ ಆಮಂತ್ರಣ ಅಭಿಯಾನದ ಕಲ್ಪನೆಯೇ ಸ್ವಾರಸ್ಯವಾದದು. ಶೌಚಾಲಯದ ಮಹತ್ವ ಸಾರುವ ಸಮಗ್ರ ವಿಷಯವುಳ್ಳ ಕರೆಯೋಲೆಯನ್ನು, ಆರತಕ್ಷತೆಯೊಂದಿಗೆ ಪ್ರತಿ ಮನೆಯ ಸದಸ್ಯರನ್ನು ಭೇಟಿಮಾಡುವ ಈ ನವೀನ ಕಾರ್ಯಕ್ರಮ ಇಂದು ಯಶಸ್ಸಿನ ಉತ್ತುಂಗದಲ್ಲಿದೆ. ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ಚುನಾಯಿತ ಜನಪ್ರತಿನಿಧಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ನೋಡಲ್ ಅಧಿಕಾರಿ ರವರ ಜೊತೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬಿಲ್ ಕಲೆಕ್ಟರ್‌ಗಳು, ಸ್ವಯಂ



ಸೇವಾ ಸಂಸ್ಥೆಯವರ ಒಡಗೂಡಿ ಉನ್ನತ ಅಧಿಕಾರಿಗಳು ಜಿಲ್ಲೆಯಾದ್ಯಂತ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.

ಕನಿಷ್ಠ ಮನೆಗೊಂದು ಶೌಚಾಲಯ ನಿರ್ಮಿಸುವ ಈ ಹೋರಾಟದ ಪ್ರಾರಂಭಿಕ ಮಜಲಿನಲ್ಲಿ ಶಾಲಾ ಮಕ್ಕಳನ್ನು ಅಳವಡಿಸಿಕೊಳ್ಳಲಾಯಿತು. ಶಾಲೆಗಳಲ್ಲಿ ಶಿಕ್ಷಕರ ಮೂಲಕ ಶೌಚಾಲಯ ರಹಿತ ಕುಟುಂಬಗಳ ಮಕ್ಕಳನ್ನು ಗುರುತಿಸಿ ಮಕ್ಕಳಿಗೆ ಅರಿವನ್ನು ಮೂಡಿಸಿ ಶೌಚಾಲಯದ ಮಹತ್ವವನ್ನು ತಿಳಿಸಿ ಈ ಕುಟುಂಬಗಳಿಂದ ಅರ್ಜಿಯನ್ನು ಪಡೆದು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ನೀಡಲಾಯಿತು. ಶೌಚಾಲಯ ರಹಿತ ಕುಟುಂಬದ ಮಕ್ಕಳ ಮೂಲಕ ತಮ್ಮ-ತಮ್ಮ ಮನೆಯಲ್ಲೂ ಶೌಚಾಲಯ ನಿರ್ಮಿಸುವಂತೆ ಪೋಷಕರನ್ನು ಒತ್ತಾಯಿಸಲಾಯಿತು. ಇದರ ಪರಿಣಾಮವಾಗಿ ಸುಮಾರು 6 ಸಾವಿರಕ್ಕಿಂತಲೂ ಹೆಚ್ಚಿನ ಅರ್ಜಿಗಳನ್ನುಸ್ವೀಕರಿಸಲಾಗಿದೆ.


ಜಿಲ್ಲೆಯನ್ನು ಬಯಲು ಮಲವಿಸರ್ಜನಾ ಮುಕ್ತ ಜಿಲ್ಲೆಯನ್ನಾಗಿಸಲು ಈಗಾಗಲೇ ಅನೇಕ ಕಾರ್ಯಕ್ರಮ ಪ್ರಗತಿಯಲ್ಲಿದ್ದು, 2017-18 ನೇ ಸಾಲಿನಲ್ಲಿ ಜೂನ್ ತಿಂಗಳ ಅಂತ್ಯಕ್ಕೆ ಜೋಯಿಡಾ ತಾಲೂಕನ್ನು ಬಯಲು ಮಲವಿಜರ್ಸನಾ ಮುಕ್ತ ತಾಲೂಕನ್ನಾಗಿ (ODF Block) ಘೋಷಿಸಲಾಗಿದೆ. ಹಾಗೂ ಈವರೆಗೆ ಜಿಲ್ಲೆಯಲ್ಲಿ 3 ತಾಲೂಕನ್ನು ODF ತಾಲೂಕನ್ನಾಗಿ ಹಾಗೂ 92 ಗ್ರಾಮ ಪಂಚಾಯತಗಳನ್ನು ಬಯಲು ಮಲವಿಸರ್ಜನಾ ಮುಕ್ತ ಗ್ರಾಮ ಪಂಚಾಯತನ್ನಾಗಿ ಘೋಷಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸಂಪೂರ್ಣ ಜಿಲ್ಲೆಯನ್ನು ODF ಮಾಡಲು ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ನೋಡಲ್ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಸಮಾಲೋಚಕರು, ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಮೂಲಕ ಶೌಚಾಲಯ ರಹಿತರನ್ನು ಮನವಲಿಸಿ ಶೌಚಾಲಯ ನಿರ್ಮಾಣಕ್ಕೆ ಕ್ರಮವಹಿಸಲಾಗುತ್ತಿದೆ. ■

ಲೇಖನ



ಹೆಚ್.ಪಿ.ಪ್ರಕಾಶ್, ಐಎಫ್‌ಎಸ್

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಕುಡಿಯುವ ನೀರು ಮತ್ತು ನೈರ್ಮಲ್ಯ
ಇಲಾಖೆ,
ಕಾವೇರಿ ಭವನ, ಬೆಂಗಳೂರು.



# ಸ್ವಚ್ಛ ಭಾರತ್ ಮಿಷನ್

## "ಶಿಕ್ಷಣ ಮತ್ತು ಸಂವಹನ"

ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯಡಿ ಕರ್ನಾಟಕವನ್ನು 2017–2018ನೇ ಸಾಲಿನಲ್ಲಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ರೂಪಿಸಲು "ಶೌಚಾಲಯಕ್ಕಾಗಿ ಸಮರ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ನಿಗಧಿತ ಗುರಿಯನ್ನು ತ್ವರಿತಗತಿಯಲ್ಲಿ ಪ್ರಗತಿ ಸಾಧಿಸಲು ಸರ್ಕಾರವು ಮುಂದಾಗಿದೆ. ಈಗಾಗಲೇ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೊಡಗು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳನ್ನು "ಬಯಲು ಬಹಿರ್ದೆಸೆ ಮುಕ್ತ" ಎಂದು ಘೋಷಣೆ ಮಾಡಲಾಗಿದೆ.

ಬಯಲು ಬಹಿರ್ದೆಸೆ ಪದ್ಧತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗ್ರಾಮ/ಗ್ರಾಮ ಪಂಚಾಯತಿ ಹಂತದಲ್ಲಿ ಹಲವಾರು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಸಹ ಗ್ರಾಮೀಣ ಸಮುದಾಯಲ್ಲಿ ರೂಢಿಯಲ್ಲಿರುವ ಬಯಲು ಶೌಚ ಅಭ್ಯಾಸವನ್ನು ಹೋಗಲಾಡಿಸಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಸಾರ್ವಜನಿಕರಲ್ಲಿ ಬಯಲು ಶೌಚದ ಬಗ್ಗೆ ಇರುವ ಧಾರ್ಮಿಕ ನಂಬಿಕೆ, ನಡವಳಿಕೆ ಹಾಗೂ ಆರ್ಥಿಕ ಪರಿಸ್ಥಿತಿಯು ಕಾರಣವಾಗಿರುತ್ತದೆ. ಈ ನಿಟ್ಟಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಯುನಿಸೆಫ್ ಸಂಸ್ಥೆಯ ಸಹಭಾಗಿತ್ವದೊಂದಿಗೆ ಗ್ರಾಮೀಣ ಸಮುದಾಯದಲ್ಲಿನ ನಡವಳಿಕೆ ಬದಲಾವಣೆ ಮಾಡಲು ಪೂರಕವಾದ ಸಂವಹನ ಕಾರ್ಯತಂತ್ರ ಹಾಗೂ ಐ.ಇ.ಸಿ ಪರಿಕರಗಳನ್ನು ರೂಪಿಸಿದೆ.

ರಾಜ್ಯವನ್ನು "ಬಯಲು ಬಹಿರ್ದೆಸೆ ಮುಕ್ತ" ಮಾಡಲು ವಿಶೇಷವಾಗಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಸ್ವಯಂ ಸೇವಾ ಸಂಘದ ಪ್ರತಿನಿಧಿಗಳು, ಸ್ವ–ಸಹಾಯ ಸಂಘದ ಸದಸ್ಯರು ಎಲ್ಲಾ ಧಾರ್ಮಿಕ ಮುಖಂಡರು, ವಿದ್ಯಾರ್ಥಿಗಳು, ಯುವಕ ಯುವತಿ ಮಂಡಳಿಗಳು ಹಾಗೂ ಗ್ರಾಮೀಣ ಸಮುದಾಯವು ನೈರ್ಮಲ್ಯ ಕಾರ್ಯಕ್ರಮದ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

ಬಯಲು ಶೌಚ ಪದ್ಧತಿಯನ್ನು ನಿರ್ಮೂಲನೆ ಮಾಡಲು ಹಾಗೂ ಈ ಬಗ್ಗೆ ಮಾನವನಲ್ಲಿರುವ ನಡವಳಿಕೆಯನ್ನು ಬದಲಾಯಿಸಲು ಯಾವ ರೀತಿಯಾದ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯತಂತ್ರಗಳನ್ನು ಅಳವಡಿಸಬೇಕು ಎಂಬುದರ ಬಗ್ಗೆ ರಾಯಚೂರು ಮತ್ತು ಚಾಮರಾಜನಗರ ಜಿಲ್ಲೆಗಳ ಆಯ್ದ ಪಂಚಾಯತಿಗಳಲ್ಲಿ ಪ್ರಾಯೋಗಿಕವಾಗಿ ಅಧ್ಯಯನ ನಡೆಸಿ ತ್ವರಿತಗತಿಯಲ್ಲಿ ಜಾಗೃತಿ ಮೂಡಿಸುವಂತಹ ಬಿತ್ತಿಪತ್ರ, ಬ್ಯಾನರ್, ಕರಪತ್ರಗಳು ಸೇರಿದಂತೆ ವಿವಿಧ ಮಾದರಿಯ 21 ಐ.ಇ.ಸಿ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿದೆ.

- ಶೌಚಾಲಯ ನಿರ್ಮಾಣ ಮತ್ತು ಬಳಕೆ.
- ಶೌಚಾಲಯವು ಕೇವಲ ಮಹಿಳೆಯರಿಗಲ್ಲ – ಇಡೀ ಕುಟುಂಬದ ರಕ್ಷಣೆಗಾಗಿ.
- ಶೌಚಾಲಯದ ಬಳಕೆ ಸಮುದಾಯದ ಆರೋಗ್ಯ ಸುಧಾರಣೆಗೆ ನಾಂದಿ.
- ಬಯಲು ಬಹಿರ್ದೆಸೆಯಿಂದ ಉಂಟಾಗುವ ರೋಗಗಳು ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳು.

- ಶೌಚಾಲಯ ನಿರ್ಮಾಣದ ಸುಲಭ ವಿಧಾನ / ತಾಂತ್ರಿಕ ವಿಧಾನಗಳು

ಕುರಿತು ಮಾಹಿತಿ, ಶಿಕ್ಷಣ ಮತ್ತು ಸಂವಹನ ಪರಿಕರಗಳನ್ನು ಸಿದ್ಧಪಡಿಸಲಾಗಿದ್ದು, ಸದರಿ ಪರಿಕರಗಳಲ್ಲಿ ನೈರ್ಮಲ್ಯ ಕುರಿತು ಸಂದೇಶ ಸಾರುವ ಅಂಶವಿರುತ್ತದೆ. ಮುಂದುವರೆದು, ಶೌಚಾಲಯವು ಸ್ವಚ್ಛತೆಗಾಗಿ, ಇದನ್ನು ನಿರ್ಮಿಸಿಕೊಂಡು ಬಳಸುವುದರಿಂದ ಮಾನವನ ಆರೋಗ್ಯ ಸುಧಾರಣೆಯಾಗುವುದಲ್ಲದೆ ಸಮುದಾಯದ ಸ್ವಾಸ್ಥ್ಯವನ್ನು ಕಾಪಾಡಲು ಪೂರಕವಾಗಿದೆ ಎಂಬ ಸಂದೇಶವನ್ನು ಸಮಾಜದ ಎಲ್ಲಾ ಧಾರ್ಮಿಕ ಮುಖಂಡರು ನೀಡುವ ಅಂಶವು ಸಹ ಒಳಗೊಂಡಿದೆ.


ಗ್ರಾಮ ಪಂಚಾಯತಿಯ ಪಾತ್ರ: ಶೌಚಾಲಯ ರಹಿತ ಕುಟುಂಬಗಳನ್ನು ಗುರುತಿಸಿ ಕಾರ್ಯಾದೇಶ ವಿತರಿಸಿ ಎಲ್ಲರೂ ಶೌಚಾಲಯ ನಿರ್ಮಿಸಿಕೊಳ್ಳುವಂತೆ ಪ್ರೇರೇಪಣೆ ಮಾಡಬೇಕು. ಪ್ರೇರೇಪಣಾ ಕಾರ್ಯಕ್ಕೆ ಆಶಾ-ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕ ವರ್ಗ, ಯುವಜನತೆಯನ್ನು ತೊಡಗಿಸಿಕೊಳ್ಳುವುದು, ಸಕಾಲಕ್ಕೆ ಶೌಚಾಲಯ ನಿರ್ಮಿಸಿಕೊಂಡ ಅರ್ಹ ಫಲಾನುಭವಿಗಳಿಗೆ ಪ್ರೋತ್ಸಾಹಧನವನ್ನು ಸಂದಾಯ ಮಾಡುವುದು. ಗ್ರಾಮ ಪಂಚಾಯಿತಿ ಜವಾಬ್ದಾರಿಯಾಗಿದ್ದು, ಸ್ವಚ್ಛ ಭಾರತ್ ಮಿಷನ್(ಗ್ರಾ) ಕಾರ್ಯಕ್ರಮದ ಅನುಷ್ಠಾನದಲ್ಲಿ ಸಕ್ರಿಯವಾಗಿ ತೊಡಗಬೇಕು.


ಧಾರ್ಮಿಕ ಮುಖಂಡರು ಸಾರ್ವಜನಿಕರಲ್ಲಿ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಶೌಚಾಲಯದ ನಿರ್ಮಾಣ ಮತ್ತು ಬಳಕೆ ಬಗ್ಗೆ ಇರುವ ಮೂಢನಂಬಿಕೆಯನ್ನು ಹೋಗಲಾಡಿಸಬೇಕಾಗಿದೆ. ವಿಶೇಷವಾಗಿ ಗ್ರಾಮದಲ್ಲಿನ ಹಿರಿಯರು ಹಾಗೂ ಸ್ವಾಭಾವಿಕ ನೇತಾರರು ಮುಂದಾಳತ್ವ ವಹಿಸಿ ಸಮುದಾಯವನ್ನು ಸಂಪೂರ್ಣ ನೈರ್ಮಲ್ಯದತ್ತ ಕೊಂಡೊಯ್ಯುವ ಜವಾಬ್ದಾರಿ ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಯುನಿಸೆಫ್ ಸಂಸ್ಥೆಯು ಸಿದ್ಧಪಡಿಸಿರುವ ಈ ಕೆಳಕಂಡ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಪರಿಕರಗಳು ಸಹಕಾರಿಯಾಗಲಿವೆ.

## ಪರಿಕರಗಳ ವಿವರ

1. **ಆರು ವಿವಿಧ ಮಾದರಿಯ ರೇಡಿಯೋ ಜಿಂಗಲ್ಸ್:**
2. **ನೈರ್ಮಲ್ಯ, ಶೌಚಾಲಯ ಬಳಕೆ ಮತ್ತು ನಿರ್ವಹಣೆ ಕುರಿತು ಮಾಹಿತಿ ನೀಡುವ 11 ವಿವಿಧ ಪೋಸ್ಟರ್‌ಗಳು.**
3. **ಶುಚಿತ್ವ ಕುರಿತು ಸಂದೇಶ ಸಾರುವ 4 ಕರಪತ್ರಗಳು.**
4. **ಯಶೋಗಾಥೆಯನ್ನಾಧರಿಸಿದ ಪುಸ್ತಕ (Flip chart).**

ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ), ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಲಭ್ಯವಿದ್ದು, ಅವುಗಳನ್ನು ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿಗಳು ಉಪಯೋಗಿಸಿಕೊಂಡು ಜನರಿಗೆ ಶೌಚಾಲಯ ನಿರ್ಮಾಣ, ನಿರ್ವಹಣೆ ಮತ್ತು ಬಳಕೆಯ ಬಗ್ಗೆ ಅರಿವು ಮೂಡಿಸಿ ನಿಗಧಿತ ಅವಧಿಯಲ್ಲಿ ಗ್ರಾಮ/ಗ್ರಾಮ ಪಂಚಾಯಿತಿಗಳನ್ನು ಬಯಲು ಬಹಿರ್ದೆಸೆ ಮುಕ್ತ ಮಾಡಲು ಎಲ್ಲಾ ಹಂತದ ಕಾರ್ಯಕ್ರಮ ಅನುಷ್ಠಾನದ ಅಧಿಕಾರಿಗಳು ಸಮಾರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಇದಕ್ಕೆ ಇಲಾಖೆಯು ಎಲ್ಲಾ ರೀತಿಯ ಬೆಂಬಲ ನೀಡಲಿದೆ. ■





# ಸ್ವಚ್ಛತೆಯೊಂದಿಗೆ ಆರೋಗ್ಯ

ದೇವನಹಳ್ಳಿ ಗ್ರಾಮದ ರವಿ.

ಆತನೊಬ್ಬ ಶ್ರಮಜೀವಿ ಯುವ ರೈತ. ಈತ, ಲತಾ ಎಂಬ ಗುಣಶೀಲ ಪತ್ನಿಯೊಂದಿಗೆ, ಆಶಾ ಎಂಬ 7 ವರ್ಷದ ಮುದ್ದು ಮಗಳು ಹಾಗೂ 1 ವರ್ಷದ ಪುಟ್ಟ ರಾಮುವಿನ ತಂದೆ.



ರವಿ, ಇಂದು ಒಬ್ಬನೇ ಶಾಲೆಗೆ ಹೋಗುತ್ತಿದ್ದಾನೆ. ಇಲ್ಲ! ವಿದ್ಯಾಭ್ಯಾಸಕ್ಕಾಗಿ ಅಲ್ಲ!

ಇಂದು ಆತನನ್ನು ಆಶಾಳ ಟೀಚರ್ ಮಾತನಾಡಲು ಕರೆ ಕಳುಹಿಸಿದ್ದಾರೆ.



ರವಿಯನ್ನು ನೋಡಿದ ತಕ್ಷಣ ಟೀಚರ್ ಹೇಳಿದರು. "ರವಿ, ನಿಮ್ಮ ಮಗಳು ಆಶಾ ಹತ್ತು ದಿನಗಳಿಂದ ಶಾಲೆಗೆ ಬರುತ್ತಿಲ್ಲ.. ಯಾಕೆ, ಏನಾಯ್ತು?

ರವಿ: "... ಅವಳಿಗೆ ಆರೋಗ್ಯ ಸರಿ ಇಲ್ಲ ಟೀಚರ್!"

ಟೀಚರ್: "ವರ್ಷದಲ್ಲಿ 6 ತಿಂಗಳು ಸಹ ಆಶಾ ಶಾಲೆಗೆ ಬರಲಾಗುತ್ತಿಲ್ಲ... ರವಿ, ನೀವು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳಿ ಹಾಗೂ ನಿಮ್ಮ ಪತ್ನಿಗೂ ಹೇಳಿ..."

ರವಿ: "ಲತಾಗೂ ಸಹ ಆರೋಗ್ಯ ಅಷ್ಟು ಚೆನ್ನಾಗಿರುವುದಿಲ್ಲ ಟೀಚರ್, ರಾಮುವಿನ ಆರೋಗ್ಯ ಕೂಡ... ನನಗೆ ಈ ಬಗ್ಗೆ ಚಿಂತೆಯಾಗಿದೆ...."

ಟೀಚರ್ ಗಂಭೀರವಾಗಿ "ರವಿ, ನಿಮ್ಮ ಮನೆಯಲ್ಲಿ ಶೌಚಾಲಯ ಇದೆ ಅಲ್ಲವೇ?" ಎಂದು ಕೇಳಿದರು.

ರವಿ: 'ಇಲ್ಲ' ಎಂದು ತಲೆ ಅಲ್ಲಾಡಿಸಿದ.

"ಹ್ಮ್! ಈಗ ಗೊತ್ತಾಯ್ತು! ಇದು ಯಾರೋ ಮಾಡುವುದು, ಎಲ್ಲರೂ ಅನುಭವಿಸುವುದು ಎಂಬ ಗಾದೆಯಂತೆ ಆಯ್ತು!

"ನನಗೆ ಏನೂ ಅರ್ಥವಾಗಲಿಲ್ಲ!" ರವಿ ಚಿಂತಿತನಾಗಿ ಕೇಳುತ್ತಾನೆ.

ಟೀಚರ್: "ಹೇಳುತ್ತೇನೆ, ಇರಿ" ಎಂದು ಹೇಳಿದ ಟೀಚರ್ ಒಂದು ಪುಸ್ತಕವನ್ನು ತೆಗೆದು ತೋರಿಸಿದರು.


## ಬಯಲಿನಲ್ಲಿ ಶೌಚವನ್ನು ಮಾಡುವುದರಿಂದ ಆಗುವ ಹಾನಿಗಳು:

- ಪರಿಸರವು ಗಲೀಜಾಗುತ್ತದೆ, ಮರಣಾಂತಿಕ ಕಾಯಿಲೆಗಳ ಅಪಾಯವಿರುತ್ತದೆ.
- ಮಹಿಳೆಯರಿಗೆ ಮತ್ತು ಹಿರಿಯರಿಗೆ ವಿಶೇಷ ತೊಂದರೆಗಳು ಉಂಟಾಗುತ್ತದೆ.
- ಹವಾಮಾನ ವೈಪರೀತ್ಯವಾದಾಗ ಅಪಾಯ ಇನ್ನಷ್ಟು ಹೆಚ್ಚಾಗುತ್ತದೆ.
- ಹಾವುಗಳ ಭಯವಿರುತ್ತದೆ, ನಾಚಿಕೆಯನ್ನು ಎದುರಿಸಬೇಕಾಗುತ್ತದೆ ಹಾಗೂ ಏಕಾಂತ ದೊರಕುವುದಿಲ್ಲ.

## ಶೌಚಾಲಯದ ನಿಯಮಿತ ಬಳಕೆಯಿಂದ ಲಾಭ:

- ಎಲ್ಲರ ಸುರಕ್ಷತೆ, ಸುತ್ತಮುತ್ತಲೂ ಸ್ವಚ್ಛತೆ, ಕಾಯಿಲೆಯ ಭೀತಿ ಕಡಿಮೆ ಆಗುತ್ತದೆ, ಕುಟುಂಬವು ಆರೋಗ್ಯದಿಂದಿರುತ್ತದೆ.
- ಮಹಿಳೆಯರು, ಮಕ್ಕಳು ಮತ್ತು ಹಿರಿಯರಿಗೂ ಸುಲಭವಾಗುತ್ತದೆ.
- ಹವಾಮಾನ ವೈಪರೀತ್ಯದಲ್ಲೂ ಕಷ್ಟವಾಗುವುದಿಲ್ಲ, ಹಾವು ಅಥವಾ ಇನ್ನ್ಯಾವುದೇ ಜೀವ-ಜಂತುಗಳ ಭಯವಿರುವುದಿಲ್ಲ.
- ಶೌಚಾಲಯ ಬಳಕೆಯಲ್ಲಿ ನಾಚಿಕೆ ಇರುವುದಿಲ್ಲ ಹಾಗೂ ನಮ್ಮದೇ ಆದ ಸಮಯ ಹಾಗೂ ಸ್ಥಳವಿರುತ್ತದೆ.
- ಚಿಕ್ಕ ಮಕ್ಕಳಿಗೆ ಪ್ರಾರಂಭದಿಂದಲೇ ಸರಿಯಾದ ಅಭ್ಯಾಸವಾಗುತ್ತದೆ.

ಗಮನವಿರಲಿ



ಶೌಚಾಲಯ ಕಟ್ಟಿಸುವುದು ಎಷ್ಟು ಅಗತ್ಯ ಎಂಬುದರ ಬಗ್ಗೆ ಟೀಚರ್ ರಂಗನ್‌ಗೆ ಇದನ್ನು ತೋರಿಸಿ ಹೇಳಿದರು.

←

ಅಷ್ಟರಲ್ಲಿ ತರಗತಿಯ ಘಂಟೆ ಹೊಡೆಯುತ್ತದೆ ಹಾಗೂ ಟೀಚರ್ ಹೋಗಬೇಕಾಗಿ ಬಂತು. ಹೋಗುತ್ತಾ ಅವರು "ರವಿರವರೆ! ನೀವು ಸ್ವತಃ ಬುದ್ಧಿವಂತರು. ನಿಮ್ಮ ಮನೆಯಲ್ಲಿ ಶೌಚಾಲಯ ಇಲ್ಲದಿರುವುದರಿಂದ ಎಷ್ಟು ಜನರು ತೊಂದರೆ ಅನುಭವಿಸಬೇಕಾಗಿ ಬಂದಿದೆ ಎಂದು ನಿಮಗೆ ಈಗ ತಿಳಿದಿರಬಹುದು ಅಲ್ಲವೇ?" ಎಂದು ಕೇಳಿದರು.

**ರವಿ:** ಟೀಚರ್ ಹೇಳಿದ ಮಾತುಗಳು ರವಿಗೆ ಅರ್ಥವಾಗುತ್ತವೆ. ಆತನು ಮನೆಯಲ್ಲಿ ಶೌಚಾಲಯವನ್ನು ನಿರ್ಮಿಸಲು ಮನಸ್ಸು ಮಾಡುತ್ತಾನೆ. ಎಲ್ಲಿಂದ ಮತ್ತು ಹೇಗೆ ಶುರು ಮಾಡಲಿ ಎಂದು ಆತ ಯೋಚಿಸುತ್ತಿರುತ್ತಾನೆ ಅಷ್ಟರಲ್ಲಿ ದಾರಿಯಲ್ಲಿ ಆತನ ಬಾಲ್ಯ ಸ್ನೇಹಿತ ರಾಜು ಅವನಿಗೆ ಸಿಗುತ್ತಾನೆ.


ರಾಜು, ರಾಮದ ಮುಖ್ಯಸ್ಥರ ಮಗ, ಆತ ಜವಾಬ್ಧಾರಿಯುಳ್ಳವನು ಹಾಗೂ ಬುದ್ದಿವಂತ. ಹಳ್ಳಿಯ ಉದ್ಧಾರಕ್ಕಾಗಿ ಹಾಗೂ ಹಳ್ಳಿಯವರ ಒಳಿತಿಗಾಗಿ ಏನಾದರೂ ಮಾಡಬೇಕೆಂಬ ಬಯಕೆಯಿಂದ ಆತ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡಿ ಹಳ್ಳಿಗೆ ಹಿಂತಿರುಗಿ ಬಂದಿದ್ದಾನೆ.

**ರಾಜು:** "ಯಾವ ಸಮಸ್ಯೆಯಲ್ಲಿ ಸಿಕ್ಕಿ ಹಾಕಿಕೊಂಡಿರುವೆ ಗೆಳೆಯಾ?" ಎಂದು ರಾಜು ಕೇಳುತ್ತಾನೆ.

"ಏನಿಲ್ಲಪ್ಪಾ... ಮನೆಯಲ್ಲಿ ಒಂದು ಶೌಚಾಲಯ ಕಟ್ಟಿಸುವ ಬಗ್ಗೆ ಯೋಚಿಸುತ್ತಿದ್ದೇನೆ...!" "ಇದಪ್ಪಾ ಮಾತು! ಬಾ ನನ್ನ ಜೊತೆ! ತಡವಾದರೂ, ಒಳ್ಳೆಯದೇ ಆಯಿತು!" ಎಂದು ಹೇಳಿ ರಾಜು ಆತನನ್ನು ತನ್ನೊಂದಿಗೆ 'ನೈರ್ಮಲ್ಯ/ಸ್ಯಾನಿಟರಿ ಅಂಗಡಿ'ಗೆ ಕರೆದೊಯ್ಯುತ್ತಾನೆ. ಅಲ್ಲಿ ಶೌಚಾಲಯಗಳ ವಿಧಗಳನ್ನು ನೋಡಿ ರವಿ ಕಂಗಾಲಾಗುತ್ತಾನೆ.



## ಶೌಚಾಲಯದ ಐದು ವಿಧಗಳು






**ರವಿ:** ವಿಧವಿಧದ ಶೌಚಾಲಯಗಳ ಪರ್ಯಾಯಗಳನ್ನು ನೋಡಿ ರವಿಗೆ ಖುಷಿಯೇನೋ ಆಯಿತು ಆದರೆ ಅವುಗಳ ದರಗಳನ್ನು ನೋಡಿ ನಿರಾಸೆಯೂ ಆಯಿತು. ರಾಜು ನಗುತ್ತಾ

**ರಾಜು:** "ಯಾಕಪ್ಪಾ? ಈ ನಿನ್ನ ಮುಖದ ಫ್ಯೂಸ್ ಯಾಕೆ ಹೋಯಿತು" ಎಂದು ಕೇಳುತ್ತಾನೆ.

**ರವಿ:** ರವಿ ಜೋಬಿನ ಮೇಲೆ ಕೈ ಇಡುತ್ತಾನೆ.

**ರಾಜು:** "ಅಷ್ಟೇನಾ?" ಎಂದ ರಾಜು, ಶೌಚಾಲಯ ಕಟ್ಟಿಸಲು ಸರಕಾರವು ಆರ್ಥಿಕ ಸಹಾಯ ನೀಡುತ್ತದೆ, ನೀನು ಅದರ ಪ್ರಯೋಜನವನ್ನು ಪಡೆಯಬಹುದು. ಎಂದು ಹೇಳುತ್ತಾನೆ.

ರಾಜುವಿನ ಸಲಹೆಯೊಂದಿಗೆ ರವಿ ಒಂದು ಸರಿಯಾದ ಶೌಚಾಲಯವನ್ನು ಆಯ್ಕೆ ಮಾಡುತ್ತಾನೆ. ಚಿಕ್ಕ ಚಿಕ್ಕ ಕಂತುಗಳಲ್ಲಿ ಅವುಗಳ ಪಾವತಿ ಮಾಡುವ ಮಾತುಕತೆಯೂ ನಡೆಯಿತು.


ಮನೆಗೆ ಹಿಂದಿರುಗುವ ಸಮಯದಲ್ಲಿ ರಾಜು "ಈಗ ಶೌಚಾಲಯ ಕಟ್ಟಿಸಿ ಆಯ್ತಲ್ಲಾ, ಇನ್ನೇನಾಗಬೇಕಿದೆ ಎಂದುಕೊಳ್ಳಬೇಡಿ" ಎಂದು ಹೇಳುತ್ತಾನೆ. "ಅಂದರೆ?" ಎಂದು ರವಿ ಕೇಳುತ್ತಾನೆ.

ರಾಜು: "ಅಂದರೆ, ಕಟ್ಟಿಸಿದ ನಂತರ ಅದರ ನಿಯಮಿತ ಸ್ವಚ್ಛತೆ ಮತ್ತು ಮೇಲ್ವಿಚಾರಣೆ ಕೂಡ ಮಾಡಬೇಕಾಗುತ್ತದೆ, ಇಲ್ಲದಿದ್ದರೆ....."

ರವಿ: "ಇಲ್ಲದಿದ್ದರೆ ಏನು"


ರಾಜು: "ಅರೇ ಮಿತ್ರಾ! ನೀನು ಶೌಚಾಲಯವನ್ನು ಕೊಳಕಾಗಿ ಇಟ್ಟುಕೊಂಡರೆ ಕೊಳಕಿನೊಂದಿಗೆ ರೋಗಗಳನ್ನೂ ಆಹ್ವಾನಿಸುತ್ತೀಯ!"

ರವಿ: "ಹ್ಮ್... ಅರ್ಥವಾಯಿತು! ಎಂದು ರವಿ ಹೇಳಿದ.





**ಗಮನವಿರಲಿ:**

- ಕೊಳಕಾಗಿರುವ ಶೌಚಾಲಯಗಳಿಂದ ಕಾಯಿಲೆಯ ಅಪಾಯವಿರುತ್ತದೆ
- ಶೌಚದ ಮೊದಲು ಶೌಚಾಲಯಕ್ಕೆ ಸ್ವಲ್ಪ ನೀರನ್ನು ಹಾಕಬೇಕು
- ಶೌಚದ ನಂತರ ಶೌಚಾಲಯಕ್ಕೆ ನೀರನ್ನು ಅಗತ್ಯವಾಗಿ ಹಾಕಬೇಕು
- ಕೊನೆಪಕ್ಷ ವಾರದಲ್ಲಿ ಒಮ್ಮೆಯದರೂ ಶೌಚಾಲಯದ ಸ್ವಚ್ಛತೆಯನ್ನು ಅಗತ್ಯವಾಗಿ ಕೈಗೊಳ್ಳಬೇಕು
- ಸುತ್ತಮುತ್ತಲೂ ಸ್ವಚ್ಛವಾಗಿ ಇಟ್ಟಿರಬೇಕು.



ರವಿ ಮನೆಗೆ ತಲುಪಿದಾಗ ಆತನ ಪತ್ನಿ ಲತಾ ಬಹಳ ಚಿಂತಿತಳಾಗಿರುವುದು ಕಾಣುತ್ತದೆ. ಪುಟ್ಟ ರಾಮುವಿಗೆ ಅತಿಸಾರ ಉಂಟಾಗಿದೆ. ನಿಲ್ಲುತ್ತಲೇ ಇಲ್ಲ... ಏನು ಮಾಡುವುದು? ಇನ್ನು ತಡ ಮಾಡುವುದು ಒಳ್ಳೆಯದಲ್ಲ ಎಂದು ತಿಳಿದ ಅವರು, ತಕ್ಷಣವೇ ಅವನನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋದರು. ವೈದ್ಯರು ಪರೀಕ್ಷಿಸಿದರು. ಔಷಧಿಗಳೊಂದಿಗೆ ಓಆರ್‌ಎಸ್ ಮತ್ತು ಜಿಂಕ್ ಕೂಡಾ ಕೊಟ್ಟು "ಸಮಯಕ್ಕೆ ಸರಿಯಾಗಿ ನೀವು ಇಲ್ಲಿಗೆ ಕರೆದುಕೊಂಡು ಬಂದುದು ಒಳ್ಳೆಯದಾಯಿತು, ಇಲ್ಲವಾದಲ್ಲಿ ನಗರದ ದೊಡ್ಡ ಆಸ್ಪತ್ರೆಗೆ ಕರೆದೊಯ್ಯಬೇಕಾಗಿತ್ತು!" ಎಂದು ಹೇಳಿದರು. ಆಸ್ಪತ್ರೆಯ ಭಯದಿಂದ ಲತಾಳ ಬಾಯಿ ಬಿಟ್ಟಂತೇ ಕುಸಿಯಿತು. "ಮೇಡಂ, ಯಾಕೆ ಈ ರೀತಿ ಆಗಾಗ್ಗೆ ಕಾಯಿಲೆ ಬೀಳುತ್ತಾನೆ ಇವನು" ಎಂದು ರವಿ ವೈದ್ಯರ ಹತ್ತಿರ ಕೇಳುತ್ತಾನೆ.

# ಕೀಟಾಣು ಚಕ್ರ





"ಬಯಲಿನಲ್ಲಿ ಶೌಚ ಮಾಡುವುದರಿಂದ ಕೀಟಾಣುಗಳು ಗಾಳಿ ಮತ್ತು ನೀರಿನಲ್ಲಿ ಹರಡಿಕೊಳ್ಳುತ್ತವೆ. ನೊಣಗಳಿಂದ, ಕಲುಷಿತವಾದ ನೀರಿನಿಂದ ಹಾಗೂ ಕೊಳಕು ಕೈಗಳ ಮೂಲಕ ಆಹಾರದಲ್ಲಿ ಸೇರಿಕೊಳ್ಳುತ್ತವೆ. ನಂತರ ನಮ್ಮ ಶರೀರದೊಳಗೆ ನುಸುಳುತ್ತವೆ. ಹಾಗೂ ಎಲ್ಲರನ್ನೂ ಕಾಯಿಲೆ ಬೀಳಿಸುತ್ತವೆ" ಎಂದು 'ಕೀಟಾಣು ಚಕ್ರ'ದ ಮುಖಾಂತರ ವೈದ್ಯರು ಅವರಿಗೆ ಅರ್ಥ ಮಾಡಿಸುತ್ತಾರೆ.

"ಹೀಗೆ ಕಾಯಿಲೆ ಬಿದ್ದ ವ್ಯಕ್ತಿಯು ಬಯಲಿನಲ್ಲಿ ಶೌಚ ಮಾಡುವುದರಿಂದ ಈ ಚಕ್ರವು ನಿರಂತರವಾಗಿ ತಿರುಗುತ್ತಲೇ ಇರುತ್ತದೆ" ಎನ್ನುತ್ತಾನೆ ರವಿ ಗಂಭೀರವಾಗಿ. "ಹಾಂ! ಸರಿಯಾಗಿ ಹೇಳಿದಿರಿ!" ಎಂದು ವೈದ್ಯರು ಉತ್ತರಿಸುತ್ತಾರೆ.

"ಓಹ್! ಈ ಚಕ್ರವು ಯಾವತ್ತಿಗೂ ನಿಲ್ಲಲು ಸಾಧ್ಯವಿಲ್ಲವೇ?" ಎಂದು ಚಿಂತೆಯ ಸ್ವರದಲ್ಲಿ ಲತಾ ಕೇಳುತ್ತಾಳೆ.

"ಯಾಕಾಗುವುದರಿಲ್ಲ? ನೋಡಿ! ಗ್ರಾಮದಲ್ಲಿ ಎಲ್ಲರೂ ಶೌಚಾಲಯಗಳನ್ನು ಕಟ್ಟಿಸಿ ಅವುಗಳ ನಿಯಮಿತ ಬಳಕೆ ಮಾಡಿದರೆ ನಾವು ಈ ದುಷ್ಟ ಚಕ್ರವನ್ನು ನಿಲ್ಲಿಸಬಹುದು!"

ಲತಾ ಆಕ್ಷೇಪಣಾ ದೃಷ್ಟಿಯಿಂದ ರವಿಯನ್ನು ನೋಡುತ್ತಾ ನಾನು ಹೇಳುತ್ತಿರಲಿಲ್ಲವೇ ಶೌಚಾಲಯ ಕಟ್ಟಿಸಿ ಎಂದು! ಈಗ ನೋಡಿ! ಎನ್ನುತ್ತಾಳೆ. ಆದರೆ ರವಿ ಮುಖದಲ್ಲಿ ಒಂದು ಆತ್ಮವಿಶ್ವಾಸದ ಬೆಳಕು ಇತ್ತು. ಆತ ಇಂದು ಶೌಚಾಲಯ ಕಟ್ಟಿಸುವ ನಿರ್ಣಯ ಮಾಡಿದ್ದನಲ್ಲವೇ!



ರವಿ ಮತ್ತು ಲತಾ ಮನೆಯಲ್ಲಿ ಶೌಚಾಲಯ ಕಟ್ಟಿಸಿದ್ದಾರೆ. ಮರುದಿನ ಅಭ್ಯಾಸ ಬಲದಿಂದ ರವಿ ತಂಬಿಗೆಯನ್ನು ಹಿಡಿದುಕೊಂಡು ಹೊರಗಡೆ ಹೋಗ ತೊಡಗುತ್ತಾನೆ. ಲತಾ ನಗುತ್ತಾಳೆ, ನಂತರ ಶೌಚಾಲಯದತ್ತ ಬೆರಳು ತೋರಿಸುತ್ತಾಳೆ. ರವಿ ತಕ್ಷಣ ಶೌಚಾಲಯಕ್ಕೆ ಹೋಗುತ್ತಾನೆ.

ಆ ದಿನದ ನಂತರ ರವಿ ಶೌಚಾಲಯದ ನಿಯಮಿತ ಬಳಕೆಯನ್ನು ಮಾಡಲು ಪ್ರಾರಂಭಿಸುತ್ತಾನೆ.



ಒಂದು ದಿನ ರವಿ ಮನೆಗೆ ಬಂದಾಗ ಲತಾಳು ರಾಮುವಿನ ಮಲವನ್ನು ಚರಂಡಿಗೆ ಎಸೆಯಲು ಹೋಗುತ್ತಿರುವುದನ್ನು ನೋಡುತ್ತಾನೆ. ತಕ್ಷಣ ಅವಳನ್ನು ತಡೆದು "ಮಕ್ಕಳ ಮಲವು ಸಹ ದೊಡ್ಡವರದರಷ್ಟೇ ಹಾನಿಕಾರಕವಾಗಿರುತ್ತದೆ. ವೈದ್ಯರು ಹೇಳಿದ್ದಾರೆ. ಇದನ್ನು ಬಿಸಾಕಲು ಕೂಡಾ ಶೌಚಾಲಯವನ್ನೇ ಬಳಸಬೇಕು" ಎಂದು ಹೇಳುತ್ತಾನೆ.


"ಸರಿ ಸರಿ, ಇನ್ನು ಹೀಗೆ ಮಾಡುವುದಿಲ್ಲ!" ಎಂದು ಲತಾ ಹೇಳುತ್ತಾಳೆ.

ಒಂದು ದಿನ ಮಧ್ಯಾಹ್ನ ಊಟದ ಸಮಯದಲ್ಲಿ ರವಿ ಮನೆಗೆ ಬರುತ್ತಾನೆ. ಲತಾ ಆತನಿಗೆ ಊಟಕ್ಕೆ ಇಡುತ್ತಿದ್ದಾಳೆ ಅದೇ ಸಮಯಕ್ಕೆ ಆಶಾ ಕೂಡಾ ಶಾಲೆಯಿಂದ ಬರುತ್ತಾಳೆ. ಅಪ್ಪ ಕೇವಲ ನೀರಿನಿಂದ ಕೈತೊಳೆದು ಊಟಕ್ಕೆ ಹೋಗುತ್ತಿರುವುದನ್ನು ಆಕೆ ನೋಡುತ್ತಾಳೆ. ಓಡಿ ಹೋಗಿ ಸಾಬೂನು ತಂದ ಆಶಾ "ಓಹೋ ಅಪ್ಪಾ! ಆಹಾರಕ್ಕೆ ಮೊದಲು ಕೈಯನ್ನು ಬರೀ ನೀರಿನಿಂದಲ್ಲ, ಸಾಬೂನಿನಿಂದ ತೊಳೆಯಬೇಕು!" ಎನ್ನುತ್ತಾಳೆ.

ಆಶಾ ಕೈಯಿಂದ ಸಾಬೂನನ್ನು ತೆಗೆದುಕೊಂಡ ರವಿ ಸ್ವಚ್ಛವಾಗಿ ಕೈತೊಳೆಯುತ್ತಾ ಕೇಳುತ್ತಾನೆ "ಶಾಲೆಯನ್ನು ಇನ್ನೂ ಏನೇನು ಕಲಿತುಕೊಂಡು ಬಂದಿದ್ದೀಯಾ ನನ್ನ ಬುದ್ಧಿವಂತ ರಾಜಕುಮಾರಿ?"

ಹೇಗೆ ರೋಗಕಾರಕ ಕೀಟಾಣುಗಳು ಕೈಯ ಒಳಗೆ, ಬೆರಳಿನ ಸಂದಿಯಲ್ಲಿ ಅಡಗಿರುತ್ತವೆ ಎಂದು ಆಶಾ, ರವಿ ಮತ್ತ ಲತಾಗೆ ಹೇಳುತ್ತಾಳೆ. ಕೇವಲ ನೀರಿನಿಂದ ಅವುಗಳು ಎಂದಿಗೂ ಸ್ವಚ್ಛವಾಗುವುದಿಲ್ಲ, ಸಾಬೂನಿನಿಂದ ಮಾತ್ರ ಅವುಗಳನ್ನು ತೊಳೆಯಬಹುದು... ಹಾಗಾಗಿ ಆಹಾರಕ್ಕೆ ಮೊದಲು/ಪಾಯಿಖಾನೆಯ ನಂತರ... ಲತಾ ತನ್ನ ಮಾತುಗಳನ್ನು ಪೂರ್ತಿಗೊಳಿಸುವ ಮೊದಲೇ, ರವಿ ಮತ್ತು ಲತಾ ಒಟ್ಟಿಗೇ "ಯಾವಾಗಲೂ ಕೈಗಳನ್ನು ಸ್ವಚ್ಛವಾಗಿ ಸಾಬೂನಿನಿಂದ ತೊಳೆಯಬೇಕು!" ಎನ್ನುತ್ತಾರೆ. ಎಲ್ಲರೂ ನಗುವುದರಿಂದ ಪುಟ್ಟ ರಾಮು ಕೂಡ ಸಂತೋಷಗೊಳ್ಳುತ್ತಾನೆ.


ಆಹಾರವನ್ನು, ಮುಖ್ಯವಾಗಿ ರಾಮುವಿನ ಆಹಾರವನ್ನು, ಯಾವಾಗಲೂ ಮುಚ್ಚಿಯೇ ಇಡಬೇಕು ಇಲ್ಲವಾದರೆ ನೊಣಗಳು, ರೋಗಕಾರಕ ಕೀಟಾಣುಗಳು ಆಹಾರದಲ್ಲಿ ಸೇರಿಕೊಳ್ಳಬಹುದು ಎಂದು ಆಶಾ ಅಮ್ಮನಿಗೆ ಅರ್ಥವಾಗುವಂತೆ ಹೇಳುತ್ತಾಳೆ.



ಕೆಲವು ದಿನಗಳ ನಂತರ ರಾಜುವನ್ನು ಭೇಟಿ ಮಾಡಲು ರವಿ ಆತನ ಮನೆಗೆ ಹೋಗುತ್ತಾನೆ.

ರಾಜು ಅಡುಗೆ ಮನೆಯಲ್ಲಿ ತನ್ನ ಪತ್ನಿಗೆ ಸಹಾಯ ಮಾಡುತ್ತಿರುತ್ತಾನೆ. ಅಲ್ಲಿಂದಲೇ ಆತ, “ಇಲ್ಲಿಗೇ ಬಾ ಗೆಳೆಯಾ!” ಎಂದು ಕರೆಯುತ್ತಾನೆ. ರಾಜು ಒಂದು ಬಹಳ ಸ್ವಚ್ಛವಾಗಿ ಹೊಳೆಯುತ್ತಿರುವ ಗ್ಲಾಸ್‌ನಲ್ಲಿ ರವಿಗೆ ಕುಡಿಯಲು ನೀರನ್ನು ನೀಡುತ್ತಾನೆ. ರಾಜುವಿನ ಮನೆಯ ಸ್ವಚ್ಛತೆಯನ್ನು ರವಿ ಈ ಮೊದಲೂ ನೋಡಿರುತ್ತಾನೆ ಆದರೆ ಈಗ ಅಡುಗೆ ಮನೆಯಲ್ಲಿ ಇರುವ ಸ್ವಚ್ಛತೆ ಮತ್ತು ಕುಡಿಯುವ ನೀರನ್ನ ಸರಿಯಾಗಿ ಇಟ್ಟಿರುವ ಕ್ರಮವನ್ನು ನೋಡಿ ಆತನ ಕಣ್ಣು ತೆರೆಯುತ್ತದೆ.

ತನ್ನ ಮನೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂದು ಆತ ಅದೇ ಕ್ಷಣದಲ್ಲಿ ಅರ್ಥ ಮಾಡಿಕೊಂಡ. ಇದರ ಅಗತ್ಯವೇನು? ಎಂಬುದು ಈಗ ಆತನಿಗೂ ಅರ್ಥವಾಗಿದೆ.





ರಾಜುವಿನ ತಂದೆ ಗ್ರಾಮದ ಮುಖ್ಯಸ್ಥರು. ಅವರು ಗ್ರಾಮಸಭೆಯೊಂದಿಗೆ ಸೇರಿ ಎಲ್ಲರಿಗೂ ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯವನ್ನು ಕಟ್ಟಿಸಲು ಪ್ರೇರೇಪಿಸುತ್ತಾರೆ. ಇವರ ಈ ಗ್ರಾಮ ಸ್ವಚ್ಛತೆಯ ಪ್ರಯತ್ನದಲ್ಲಿ ರಾಜು ಮತ್ತು ರವಿ ಕೂಡ ಉತ್ಸಾಹದಿಂದ ಭಾಗಿಯಾಗುತ್ತಾರೆ.

ಅವರು ಕೂಡ ಈ ವೈದ್ಯರು, ಟೀಚರ್, ಎಎನ್‌ಎಮ್ ದಾದಿಯಂತೆ 'ನಿಗಾ ಸಮಿತಿ'ಯ ಸದಸ್ಯರಾಗಿದ್ದಾರೆ. 'ನಿಗಾ ಸಮಿತಿ'ಯೊಂದಿಗೆ ಸೇರಿ ಅವರು ಇಡೀ ಗ್ರಾಮವನ್ನು ಬಯಲಿನಲ್ಲಿ ಶೌಚ ಮಾಡುವುದರಿಂದ ತಡೆಯುತ್ತಾರೆ. ಶೌಚಾಲಯವನ್ನು ಕಟ್ಟಿಸಲು ಅವರಲ್ಲಿ ಅರಿವನ್ನು ಮೂಡಿಸುತ್ತಾರೆ ಹಾಗೂ ಸ್ವಚ್ಛತಾ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುತ್ತಾರೆ.

ಈಗ ರವಿಯ ಮನೆಯಲ್ಲಿ ಮತ್ತೆ ಸಂತೋಷ ತುಂಬಿದೆ. ಆತನೊಬ್ಬ ಜವಾಬ್ದಾರ ಮತ್ತು ಅರಿವಿರುವ ನಾಗರೀಕನಾಗಿದ್ದಾನೆ, ಹಿಂದೊಮ್ಮೆ 'ಯಾರೋ ಮಾಡುವುದು–ಎಲ್ಲರೂ ಅನುಭವಿಸುವುದು' ಎಂಬ ಮಾತನ್ನು ರುಜು ಪಡಿಸುತ್ತಿದ್ದ ರವಿ ಈಗ 'ಒಂದು ದೀಪದಿಂದ ನೂರು ದೀಪಗಳು ಉರಿಯುವವು' ಎಂಬ ಆದರ್ಶವನ್ನು ಪಾಲಿಸುತ್ತಿದ್ದಾನೆ. ■

ಲೇಖನ

# ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಾಹಣೆಯ ಬಗ್ಗೆ ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ




ನಿಂಗೇಗೌಡ

ನಿವೃತ್ತ ಪೀಠಾಧಿಕಾರಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್
ಇಲಾಖೆ.


**ಗ್ರಾಮ ಪಂಚಾಯತಿಗಳು ತಮ್ಮ ಅಧಿಕಾರವನ್ನು ಮಿರಿದರೆ ಅಥವಾ ದುರುಪಯೋಗಪಡಿಸಿ ಕೊಂಡಿದ್ದರೆ, ಪಂಚಾಯತ್ ರಾಜ್ ಅಧಿನಿಯಮದಡಿ ವಹಿಸಿರುವ ಅಥವಾ ಸರ್ಕಾರದ ಯಾವುದೇ ಕನೂನಿನ ಮೂಲಕ ವಹಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೆರವೇರಿಸುವಲ್ಲಿ ತಪ್ಪಿದ್ದರೆ ಜಿಲ್ಲಾ ಪಂಚಾಯತಿಯು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಅಂಥ ಗ್ರಾಮ ಪಂಚಾಯತಿಗಳನ್ನು ವಿಸರ್ಜಿಸಬಹುದು.**

## (ಪ್ರಕರಣ 232)

- ಜಿಲ್ಲಾ ಪಂಚಾಯತಿ ಸಂಬಂಧದಲ್ಲಿ ಸರ್ಕಾರದಿಂದ ಪ್ರಾಧಿಕೃತಗೊಂಡ ಯಾವುದೇ ಅಧಿಕಾರಿ, ತಾಲ್ಲೂಕು ಪಂಚಾಯತಿ ವಿಷಯದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಥವಾ ಅವರಿಂದ ಪ್ರಾಧಿಕೃತಗೊಂಡ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ವಿಷಯಗಳಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿ ಅಥವಾ ಅವರಿಂದ ಪ್ರಾಧಿಕೃತಗೊಂಡ ತಾಲ್ಲೂಕು ಪಂಚಾಯತಿಯ ಯಾವುದೇ ಅಧಿಕಾರಿ, ಸಂಬಂಧಪಟ್ಟ ಕಛೇರಿಗಳ ದಾಖಲೆ ಕೈಗೊಂಡಿರುವ ಕಾಮಗಾರಿಗಳು ಲೆಕ್ಕ ಪುಸ್ತಕಗಳನ್ನು ಪರಿವೀಕ್ಷಣೆ ಮಾಡಬಹುದು ಹಾಗೂ ಸೂಚನೆಗಳನ್ನು ನೀಡುವ ಅಧಿಕಾರ ಹೊಂದಿರುತ್ತಾರೆ. ಪಂಚಾಯತ್ ರಾಜ್ ಸಂಸ್ಥೆಯ ಮುಖಾಂತರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುವಾಗ, ಕಾಮಗಾರಿಗಳಿಗೆ ಸಂಬಂಧಿಸಿದ ವಿಷಯಗಳನ್ನು, ಗುಣಮಟ್ಟಗಳನ್ನು ಖಚಿತ ಪಡಿಸಲು ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ಅಥವಾ ವಿಭಾಗಿಯ ಮಟ್ಟದ ಅಧಿಕಾರಿಗಳು ಪರಿವೀಕ್ಷಣೆ ನಡೆಸಬಹುದಾಗಿದೆ. ತಾಂತ್ರಿಕ ಮತ್ತಿತರೆ ಸಲಹೆ ಸೂಚನೆಗಳನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳು ಪಾಲಿಸಬೇಕು(ಪ್ರಕರಣ 233).
- ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯು ಪಂಚಾಯತ್ ರಾಜ್ ಅಧಿನಿಯಮದಲ್ಲಿ ನಿರೂಪಿಸಿರುವ ಯಾವುದೇ ಕರ್ತವ್ಯವನ್ನು ನೆರವೇರಿಸುವುದರಲಿ ತಪ್ಪಿದರೆ, ಅಂಥಹ ಜವಾಬ್ದಾರಿಯನ್ನು ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ನಿರ್ವಹಿಸುವಂತೆ ಅಗತ್ಯಪಡಿಸಬಹುದಾಗಿದೆ. ಈ ನಿರ್ದೇಶನದ ವಿರುದ್ಧ ಅಗತ್ಯವಿದ್ದರೆ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಯು 30 ದಿನದೊಳಗೆ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು(ಪ್ರಕರಣ 234).
- ಸರ್ಕಾರವು, ಜಿಲ್ಲಾ ಪಂಚಾಯತಿಯು ಯಾವುದೇ ಕರ್ತವ್ಯ ಮತ್ತು ಜವಾಬ್ದಾರಿಯನ್ನು ನಿರ್ವಹಿಸಲು ತಪ್ಪಿದ್ದರೆ. ಅಂಥಹ ಜವಾಬ್ದಾರಿ ಮತ್ತು ಕರ್ತವ್ಯವನ್ನು ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ನಿರ್ವಹಿಸುವಂತೆ ಅಗತ್ಯಪಡಿಸಬಹುದಾಗಿದೆ (ಪ್ರಕರಣ 234).
- ಗ್ರಾಮ ಪಂಚಾಯತಿಯು, ತಾಲ್ಲೂಕು ಪಂಚಾಯತಿಯು ಅಥವಾ ಜಿಲ್ಲಾ ಪಂಚಾಯತಿಯು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಾಗ "ತಪ್ಪು" ಎಸಗಿದ್ದಾಗ, ಗ್ರಾಮ ಪಂಚಾಯತಿಯ ವಿಷಯದಲ್ಲಿ ತಾಲ್ಲೂಕು ಪಂಚಾಯತಿಯು, ತಾಲ್ಲೂಕು ಪಂಚಾಯತಿಯ ವಿಷಯದಲ್ಲಿ ಜಿಲ್ಲಾ ಪಂಚಾಯತಿಯು, ಜಿಲ್ಲಾ ಪಂಚಾಯತಿಯ ವಿಷಯದಲ್ಲಿ ಸರ್ಕಾರವು ಸೂಕ್ತ ವಿಚಾರಣೆಯನ್ನು ನಡೆಸಿದ ನಂತರ ಅಂಥಹ ತಪ್ಪುಗಳನ್ನು ತಿದ್ದುಕೊಳ್ಳಲು ಒಂದು ನಿರ್ದಿಷ್ಟ ಅವಧಿಯನ್ನು ಗೊತ್ತುಪಡಿಸಬೇಕು. ಒಂದು ವೇಳೆ ಗ್ರಾಮ ಪಂಚಾಯತಿಯು ಇಂತಹ ನಿರ್ದೇಶನವನ್ನು



ಒಪ್ಪದಿದ್ದರೆ, ತಾಲ್ಲೂಕು ಪಂಚಾಯತಿಯ ನಿರ್ದೇಶನದ ವಿರುದ್ಧ ಜಿಲ್ಲಾ ಪಂಚಾಯತಿಗೆ ಮತ್ತು ಜಿಲ್ಲಾ ಪಂಚಾಯತಿಯ ನಿರ್ದೇಶನದ ವಿರುದ್ಧ ತಾಲ್ಲೂಕು ಪಂಚಾಯತಿಯು ಸರ್ಕಾರಕ್ಕೆ 30 ದಿನದೊಳಗೆ ಮೇಲ್ಮನವಿ ಸಲ್ಲಿಸಬೇಕು(ಪ್ರಕರಣ 235).

- ಸರ್ಕಾರ ಯಾವುದೇ ಸಮಯದಲ್ಲಿ ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಯ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಬಹುದಾಗಿದೆ(ಪ್ರಕರಣ 236).
- ಗ್ರಾಮ ಪಂಚಾಯತಿಯ ಯಾವುದೇ ಆದೇಶ ಅಥವಾ ನಿರ್ಣಯ ಕಾನೂನು ಬಾಹಿರ, ಸಾರ್ವಜನಿಕರಿಗೆ ಹಾನಿ ಅಥವಾ ಶಾಂತಿ ಭಂಗಕ್ಕೆ ಕಾರಣವಾಗುತ್ತದೆಂದು ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಅಭಿಪ್ರಾಯಪಟ್ಟರೆ ಅಂಥಹ ಸಮಯದಲ್ಲಿ ಗ್ರಾಮ ಪಂಚಾಯತಿಯ ನಿರ್ಣಯವನ್ನು ಆದೇಶದ ಮೂಲಕ "ಅಮಾನತ್ತು"ಗೊಳಿಸಬಹುದಾಗಿದೆ ಹಾಗೂ ಅದರ ಪ್ರತಿಯನ್ನು ಗ್ರಾಮ ಪಂಚಾಯತಿಗೆ ಮತ್ತು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು. ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮಾಡಿದ ಯಾವುದೇ ಆದೇಶವನ್ನು ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಸೂಕ್ತ ಅವಕಾಶವನ್ನು ಕೊಟ್ಟು ಸೂಕ್ತ ನಿರ್ಧಾರ ಕೈಗೊಳ್ಳಬಹುದಾಗಿದೆ. ಆದರೆ ಪ್ರಕರಣ 64,66,67,68,69 ರಡಿಯ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಕರಣ 70(3) ರನ್ವಯ ಮೇಲ್ಮನವಿಯನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಬೇಕು ಮತ್ತು ಅವರ ತೀರ್ಮಾನವೆ ಅಂತಿಮವಾಗಿರುತ್ತದೆ.
- ಗ್ರಾಮ ಪಂಚಾಯತಿಗಳು ತಮ್ಮ ಅಧಿಕಾರವನ್ನು ಮೀರಿದರೆ ಅಥವಾ ದುರುಪಯೋಗಪಡಿಸಿಕೊಂಡಿದ್ದರೆ, ಪಂಚಾಯತ್ ರಾಜ್ ಅಧಿನಿಯಮದಡಿ ವಹಿಸಿರುವ ಅಥವಾ ಸರ್ಕಾರದ ಯಾವುದೇ ಕನೂನಿನ ಮೂಲಕ ವಹಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೆರವೇರಿಸುವಲ್ಲಿ ತಪ್ಪಿದ್ದರೆ ಜಿಲ್ಲಾ ಪಂಚಾಯತಿಯು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಅಂಥ ಗ್ರಾಮ ಪಂಚಾಯತಿಗಳನ್ನು ವಿಸರ್ಜಿಸಬಹುದು(ಪ್ರಕರಣ 268(1)).
- ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳು ತಮ್ಮ ಅಧಿಕಾರವನ್ನು ಮೀರಿದರೆ ಅಥವಾ ದುರುಪಯೋಗಪಡಿಸಿಕೊಂಡಿದ್ದರೆ, ಪಂಚಾಯತ್ ರಾಜ್ ಅಧಿನಿಯಮದಡಿ ವಹಿಸಿರುವ ಅಥವಾ ಸರ್ಕಾರದ ಯಾವುದೇ ಕನೂನಿನ ಮೂಲಕ ವಹಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನೆರವೇರಿಸುವಲ್ಲಿ ತಪ್ಪಿದ್ದರೆ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಅಂಥಹ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳನ್ನು ವಿಸರ್ಜಿಸಬಹುದು (ಪ್ರಕರಣ 268(2)).

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಡಿಯಲ್ಲಿ ಗುರುತಿಸಲಾಗಿರುವ ಮೇಲ್ಮನವಿ ಪ್ರಾಧಿಕಾರಗಳು

| ಕ್ರ. ಸಂ. | ವಿಷಯ | ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಾಧಿಕಾರ ಮತ್ತು ಪ್ರಕರಣಗಳು | ಮೇಲ್ಮನವಿ ಪ್ರಾಧಿಕಾರ |
|---|---|---|---|
| 1 | ಚುನಾಯಿತ ಸದಸ್ಯರುಗಳನ್ನು, ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಹುದ್ದೆಯಿಂದ ತೆಗೆದು ಹಾಕುವ ಪ್ರಕರಣಗಳು | ಗ್ರಾಮ ಪಂಚಾಯತಿ ಸದಸ್ಯರು 43–ಎ–48<br>ತಾಲ್ಲೂಕು ಪಂಚಾಯತಿ 136–140<br>ಜಿಲ್ಲಾ ಪಂಚಾಯತಿ ಪ್ರಕರಣ 174–179<br>ವಜಾ ಮಾಡುವ ಪ್ರಾಧಿಕಾರ – ಸರ್ಕಾರ | ----- |
| 2 | ಕಟ್ಟಡ ನಿರ್ಮಾಣದ ಲೈಸನ್ಸ್ | ಗ್ರಾಮ ಪಂಚಾಯತಿ<br>ಪ್ರಕರಣ 64(5) | 30 ದಿನದೊಳಗೆ<br>ತಾಲ್ಲೂಕು ಪಂಚಾಯತಿ<br>ಕಾರ್ಯನಿರ್ವಾಹಣಾಧಿಕಾರಿ |
| 3 | ಗ್ರಾಮ ಪಂಚಾಯತಿಗಳಿಂದ ಕಾರ್ಖಾನೆ ನಿರ್ಮಿಸಲು ಮತ್ತು ಯಂತ್ರೋಪಕರಣ ಸ್ಥಾಪಿಸಲು ಅನುಮತಿ ನೀಡುವ ನಿರಾಕ್ಷೇಪಣ ಪತ್ರ | ಗ್ರಾಮ ಪಂಚಾಯತಿ<br>ಪ್ರಕರಣ 70(3) | 30 ದಿನದೊಳಗೆ<br>ತಾಲ್ಲೂಕು ಪಂಚಾಯತಿ<br>ಕಾರ್ಯನಿರ್ವಾಹಣಾಧಿಕಾರಿ |
| 4 | ಗ್ರಾಮ ಪಂಚಾಯತಿ ನೌಕರರ ವಿರುದ್ಧದ ದಂಡನೆ ವಿರುದ್ಧ | ಗ್ರಾಮ ಪಂಚಾಯತಿ<br>ಪ್ರಕರಣ 113(2) – ಪಂ.ಅ.ಅ.<br>ಪ್ರಕರಣ 113(3) – ಗ್ರಾ.ಪಂ. | ತಾ.ಪಂ.<br>ಕಾರ್ಯನಿರ್ವಾಹಣಾಧಿಕಾರಿ<br>ಮುಖ್ಯ<br>ಕಾರ್ಯನಿರ್ವಾಹಣಾಧಿಕಾರಿ |
| 5 | ಜಿಲ್ಲಾ ಪಂಚಾಯತಿ ನಿರ್ಣಯವು ಅಧಿನಿಯಮಕ್ಕೆ ಅಸಂಗತವಾಗಿದ್ದರೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸಿರುವ ಪ್ರಕರಣಗಳಲ್ಲಿ | ಜಿ.ಪಂ.<br>ಪ್ರಕರಣ 197(3) | ಸರ್ಕಾರಕ್ಕೆ 15 ದಿನಗಳೊಳಗೆ<br>ತಿಳಿಸಬೇಕು |
| 6 | ಪ್ರಕರಣ 199 ರಡಿಯಲ್ಲಿ ತೆರಿಗೆ ನಿರ್ಧರಣೆ ಬಗ್ಗೆ(ನಿಯಮಗಳಲ್ಲಿ ಸೇರಿಸಲಾಗಿದೆ) | ಗ್ರಾಮ ಪಂಚಾಯತಿ<br>ಪ್ರಕರಣ 201 | ಮುಖ್ಯ<br>ಕಾರ್ಯನಿರ್ವಾಹಣಾಧಿಕಾರಿ |
| 7 | ಪ್ರಕರಣ 202 ರಡಿಯಲ್ಲಿ ಕಾರ್ಖಾನೆ ಪ್ರದೇಶಗಳಲ್ಲಿ ತೆರಿಗೆ ನಿರ್ಧರಣೆಯ ಪ್ರಕರಣ | ಗ್ರಾಮ ಪಂಚಾಯತಿ<br>ಪ್ರಕರಣ 202(2) | ಮುಖ್ಯ<br>ಕಾರ್ಯನಿರ್ವಾಹಣಾಧಿಕಾರಿ |
| 8 | ಗ್ರಾಮ ಪಂಚಾಯತಿಯ ಯಾವುದೇ ಆದೇಶದ ವಿರುದ್ಧ ದೂರು | ಗ್ರಾಮ ಪಂಚಾಯತಿ<br>ಪ್ರಕರಣ 269 | ತಾಲ್ಲೂಕು ಪಂಚಾಯತಿ<br>ಕಾರ್ಯನಿರ್ವಾಹಣಾಧಿಕಾರಿ |
| 9 | ಕುಂದು ಕೊರತೆ ನಿವಾರಣಾ ಪ್ರಾಧಿಕಾರದಲ್ಲಿ ದಾಖಲಾಗುವ ದೂರುಗಳು | ಗ್ರಾ.ಪಂ. /ತಾ.ಪಂ. / ಜಿ.ಪಂ.<br>ನಿರ್ಧಾರಗಳ ವಿರುದ್ಧ ದೂರುಗಳು<br>ಪ್ರಕರಣ 296–ಎ | ——— |

ಕವಿಯ(ಕ್ಷ) ಪ್ರಶ್ನೆ



# ಬಯಲು ಬಹಿರ್ದೆಸೆ ಮುಕ್ತ ರಾಜ್ಯ ನಮ್ಮದಾಗಲಿ.....

ಗ್ರಾಮೀಣ ಭಾಗದಲ್ಲಿ ಜನರು ಬಹಿರ್ದೆಸೆಗಾಗಿ ಬಯಲನ್ನು ಅವಲಂಬಿಸಿರುವುದು ನಾವುಗಳು ಹಿಂದಿನಿಂದಲೂ ನೋಡುತ್ತಾ ಬಂದಿದ್ದೇವೆ. ಮಹಿಳೆಯರು, ಹೆಣ್ಣು ಮಕ್ಕಳು ಮುಜುಗರದೊಂದಿಗೆ ಬಯಲಿಗೆ ಹೋಗುವುದು ಕೆಲವೊಮ್ಮೆ ಬಾದೆಗೆ ಒಳಗಾಗುತ್ತಾರೆ. ಬಯಲು ಬಹಿರ್ದೆಸೆಯಿಂದಾಗಿ ಪರಿಸರ ಹಾಳಾಗುವುದಲ್ಲದೆ ಜನರಲ್ಲಿ ರೋಗ ರುಜಿನಗಳುಂಟಾಗುತ್ತಿದೆ. ಇದೆಲ್ಲವನ್ನು ಅರಿತು ನಮ್ಮ ಸರ್ಕಾರ ಗಾಂಧೀಜಿಯವರ ಗ್ರಾಮ ಸ್ವರಾಜ್ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಮಾಡಲು ಪಣತೊಟ್ಟಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಶೌಚಾಲಯ ನಿರ್ಮಾಣಕ್ಕಾಗಿ ಶಾಲಾ ಮಕ್ಕಳು ತಮ್ಮ ಪೋಷಕರನ್ನು ಒಲ್ಲೈಸಿ ತಮ್ಮ ಮನೆಗಳಲ್ಲಿ ಶೌಚಾಲಯವನ್ನು ಕಟ್ಟಿಸಿರುವುದು, ಶೌಚಾಲಯ ನಿರ್ಮಾಣಕ್ಕಾಗಿ ಮದುವೆ, ಮನೆಯನ್ನು ತೊರೆದಿರುವುದನ್ನು ನಾವು ಕೇಳಿದ್ದೇವೆ, ಪತ್ರಿಕೆಗಳಲ್ಲಿ ಓದಿದ್ದೇವೆ ಕೂಡ. ಸರ್ಕಾರವು ಶೌಚಾಲಯ ನಿರ್ಮಾಣಕ್ಕಾಗಿ ಅನುದಾನ ನೀಡುತ್ತಿರುವುದು ಕೂಡ ಹೆಮ್ಮೆಯ ವಿಷಯವೇ. ಸರ್ಕಾರದ ಕಾರ್ಯಕ್ರಮಗಳ ಜೊತೆ ನಾವು ಕೈಜೋಡಿಸಿದಲ್ಲಿ ಗಾಂಧೀಜಿಯವರ ಕನಸು ನನಸಾಗುವುದು ನಿಜವೇ.

## ಕೆಲವು ಪ್ರಶ್ನೆಗಳು ?

1. ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ?
2. ಗ್ರಾಮೀಣ ಜನರಲ್ಲಿ ಶೌಚಾಲಯ ನಿರ್ಮಾಣದ ಬಗ್ಗೆ ಅರಿವು ಮೂಡಿಸುವ ಕಾರ್ಯ ನಮ್ಮದಲ್ಲವೇ?
3. ಶಾಲಾ ಮಕ್ಕಳೇ ಶೌಚಾಲಯ ನಿರ್ಮಾಣಕ್ಕಾಗಿ ಹೋರಾಟ ಮಾಡುವಾಗ ನಾವುಗಳು ಅವರ ಭಾವನೆಗೆ ಮಾನ್ಯತೆ ಕೊಡವುದು ಸರಿಯಲ್ಲವೇ?
4. ಬಯಲು ಬಹಿರ್ದೆಸೆಯಿಂದಾಗುವ ಆರೋಗ್ಯ ತೊಂದರೆಗಳನ್ನು ತಡೆಗಟ್ಟುವ ಮಾರ್ಗೋಪಾಯ ಶೌಚಾಲಯ ನಿರ್ಮಾಣವಷ್ಟೇ ಅಲ್ಲವೇ?



**ಹರ್ಷಿತಾ ಗಾಂಧಿ**
ನಂ.ಡಬ್ಲೂ–49, 'ಎ' ಅಡ್ಡರಸ್ತೆ,
ಬಸಪ್ಪ ಗಾರ್ಡನ್ ಮುಖ್ಯರಸ್ತೆ,
ಪೈಪ್‌ಲೈನ್, ಮಲ್ಲೇಶ್ವರಂ, ಬೆಂಗಳೂರು 560003.

## ಕಾವ್ಯ ವಿಕಾಸ



# ಆರೋಗ್ಯ ಸಿರಿ ಸೌಭಾಗ್ಯ

ಸ್ವಚ್ಛತಾ ಆಂದೋಲನ !
ಜನತೆಗೆ ನೀಡಿದೆ ಸ್ಪಂದನ
ಅರಿವು ಆರೋಗ್ಯ !
ನಮ್ಮ ಬಾಳಿನ ಸಿರಿ ಸೌಭಾಗ್ಯ

ಊರಿಗೆ ಹಲವಾರು ದೇವಾಲಯ
ಪ್ರತಿ ಮನೆಗಿರಲೊಂದೊಂದು ಶೌಚಾಲಯ
ಸರ್ಕಾರದ ಗುರಿ ಸಾಕಾರಾ!
ನಮ್ಮ ಬದುಕಿಗೆ ಯೋಜನೆ ಸಹಕಾರ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

ಬಡವ-ಬಲ್ಲಿದರೆಂಬ ಭೇದ ಇದರೊಳಗಿಲ್ಲ
ಮಕ್ಕಳು-ಮುದುಕರೆಂಬ
ಅಂತರವೆಂದಿಗೂ ಇಲ್ಲ
ಶಾಲೆ ಜೀವಂತ ದೇವಾಲಯ
ಅಲ್ಲದೆ ಬಳಸುವ ಶೌಚಾಲಯ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

ಗಂಡು-ಹೆಣ್ಣು ಭೇದ ಮರೆತು
ಬನ್ನಿರಣ್ಣ ಎಲ್ಲರೀಹೊತ್ತು
ಕಟ್ಟೋಣ ಸಮೂಹ ಶೌಚಾಲಯ
ಆರೋಗ್ಯಕ್ಕೆ ಅದು ದೇವಾಲಯ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

ಕಣ್ಣ ತುಂಬಾ ಸ್ವಚ್ಛತೆ ಕನಸಿರಲಿ
ಮನತುಂಬಾ ಯೋಜನೆ ಬೆಳಕಿರಲಿ
ಆಡುವ ಮಾತೆದೆ ತಟ್ಟಲಿ
ಮಾಡು ಕೆಲಸ ಗುರಿಮುಟ್ಟಲಿ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

ಹೆಣ್ಣು ಕೊಡು ತಾಯಿ-ತಂದೆ
ಸಣ್ಣಾಗಿ ಮಾತಾಡ್ತಾರಾ ಕೂಂತ
ದೊಡ್ಡಮನೆ ಹಿತ್ಲಾಗಾ
ಪಾಯಿಖಾನೆ ಇದೆ ಏನಂತ
ನೀ ಕಟ್ಟಿಸು ಪಾಯಿಖಾನೆ
ದೂರಿಡು ದವಾಖಾನೆ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

ಓ.... ಯಜಮಾನ....
ಬಿಡು ಬಿಡು ನಿನ್ನ ಬಿಗುಮಾನ
ಯೋಜನೆಗೆ ನೀಡು ನೀ ಸ್ಪಂದನ
ಅಂದರೆ ಬಾಳು ಚಂದನ
ಕಟ್ಟಿಸಿರಿ ಶೌಚಾಲಯ
ಹೆಚ್ಚಿಸಿರಿ ಸೌಖ್ಯಾಲಯ
ಅಂದರೆ ಆರೋಗ್ಯ
ನಮ್ಮ ಬಾಳಿನ ಸಿರಿಸೌಭಾಗ್ಯ

**ಎಮ್.ಜಿ ದಾಸರ್**
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕ್ಷೇತ್ರ ಸಂಪನ್ಮೂಲ ಕೇಂದ್ರ ಕೊಪ್ಪಳ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 991 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 29.08.2017

# ಸುತ್ತೋಲೆ

**ವಿಷಯ:** ದಿನಾಂಕ 01.10.2017 ರಿಂದ 15.10.2017 ರವರೆಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಸಮೃದ್ಧಿ ಹಾಗೂ ಸ್ವಚ್ಛತಾ ಪಾಕ್ಷಿಕ ಆಚರಿಸುವ ಬಗ್ಗೆ.

**ಉಲ್ಲೇಖ:** ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರ ಅ.ಸ.ಪತ್ರ ಸಂಖ್ಯೆ: RD/GSESP/States:2017, ದಿನಾಂಕ 18.07.2017

***

ದೇಶದಾದ್ಯಂತ ದಿನಾಂಕ 01.10.2017 ರಿಂದ 15.10.2017 ರವರೆಗೆ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಸಮೃದ್ಧಿ ಹಾಗೂ ಸ್ವಚ್ಛತಾ ಆಚರಣೆ ಮಾಡಲು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಗಳು ಉಲ್ಲೇಖಿತ ಪತ್ರದಲ್ಲಿ ನಿರ್ದೇಶನ ನೀಡಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಈ ಪಾಕ್ಷಿಕ ಆಚರಣೆಯನ್ನು ಎರಡು ಪ್ರಮುಖ ವಿಭಾಗಗಳನ್ನಾಗಿ ಮಾಡಲಾಗಿದೆ.

**1) ಸ್ವಚ್ಛತಾ ಪಾಕ್ಷಿಕ ಆಚರಣೆಯನ್ನು ರಾಜ್ಯದಾದ್ಯಂತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಚರಿಸುವುದು.**

- ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ದಿನಾಂಕ 02.10.2017 ರಂದು ಗ್ರಾಮ ಸಭೆಗಳನ್ನು ಆಯೋಜಿಸುವುದು.
- ಆ ದಿನ ಸ್ವಚ್ಛತೆ ಬಗ್ಗೆ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಇದಕ್ಕೆ ಪೂರಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಚಿತ್ರ ಪ್ರದರ್ಶನಗಳು, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವುದು.
- ಸ್ವಚ್ಛತಾ ಆಂದೋಲನ ಅಂಗವಾಗಿ ಕುಡಿಯುವ ನೀರು, ನೈರ್ಮಲ್ಯ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ನಿಷೇಧ, ಇತರೆ ಸ್ವಚ್ಛತಾ ಕಾರ್ಯಕ್ರಮಗಳ ಬಗ್ಗೆ ಗ್ರಾಮೀಣ ಜನರು ಹಾಗೂ ಮುಖ್ಯವಾಗಿ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ನಮ್ಮ ಗ್ರಾಮ ನಮ್ಮ ಯೋಜನೆ ಬಗ್ಗೆ ಚರ್ಚಿಸುವುದು.
- ಈ ಕಾರ್ಯಕ್ರಮಗಳ ಬಗ್ಗೆ ಕರಪತ್ರಗಳು, ಧ್ವನಿ ಮಾಧ್ಯಮ, ದೃಶ್ಯ ಮಾಧ್ಯಮಗಳು ಹಾಗೂ ಇತರೆ ಮಾಧ್ಯಮಗಳ ಮೂಲಕ ಗ್ರಾಮೀಣ ಜನರಲ್ಲಿ ಹಾಗೂ ಫಲಾನುಭವಿಗಳಲ್ಲಿ ಅರಿವು ಮೂಡಿಸುವುದು.

**ಉಸ್ತುವಾರಿ:**

1. ನಿರ್ದೇಶಕರು(ಪಂ.ರಾಜ್–1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ನಿರ್ದೇಶಕರು(ಪಂ.ರಾಜ್–2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ನಿರ್ದೇಶಕರು, ಎ.ಎನ್.ಎಸ್.ಎಸ್.ಐ.ಆರ್.ಡಿ., ಮೈಸೂರು.
4. ಮುಖ್ಯಸ್ಥರು, ಸ್ವಚ್ಛ ಭಾರತ್ ಮಿಷನ್.

**2) ಮಿಷನ್ ಅಂತ್ಯೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮ ಪಂಚಾಯತಿ / ಕ್ಲಸ್ಟರ್‌ಗಳ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು.**

– ಮಿಷನ್ ಅಂತ್ಯೋದಯದಡಿ ಆಯ್ಕೆಯಾದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ, , ಸ್ವಚ್ಛ ಭಾರತ್ ಮಿಷನ್, ಸಂಸದ ಆದರ್ಶ ಗ್ರಾಮ, RURBAN ಯೋಜನೆ, ಪಿಎಂಎವೈ, ಪಿಎಂಜಿಎಸ್‌ವೈ, ಗ್ರಾಮೀಣ ವಸತಿ ಯೋಜನೆ, ಸಾಮಾಜಿಕ ಭದ್ರತಾ ಯೋಜನೆ, ಡಿಜಿಟಲ್ ಸಾಕ್ಷರತೆ ಹಾಗೂ ಇತರೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ಉಸ್ತುವಾರಿ:**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.
3. ಮಿಷನ್ ನಿರ್ದೇಶಕರು, ಎನ್.ಆರ್.ಎಲ್.ಎಂ.
4. ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ.
5. ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ–2

ಈ ಅವಧಿಯಲ್ಲಿ ಎನ್.ಎಲ್.ಎಂ. ರವರು ಈ ಕಾರ್ಯಕ್ರಮಗಳ ಮೇಲ್ವಿಚಾರಣೆ ನಡೆಸುವುದು. ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೌಶಲ್ಯಾಭಿವೃದ್ಧಿ ಇತ್ಯಾದಿ ಇಲಾಖೆಗಳ ವತಿಯಿಂದ ಈ ಆಂದೋಲನದಲ್ಲಿ ತಮ್ಮ ಇಲಾಖೆ ಕಾರ್ಯಕ್ರಮಗಳ ಬಗ್ಗೆ ಪ್ರಚುರಪಡಿಸಲು ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡುವುದು. ಅಲ್ಲದೆ, ಈ ಕಾರ್ಯಕ್ರಮಗಳ ಉಸ್ತುವಾರಿಗಾಗಿ ರಾಜ್ಯ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸುವುದು.

ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಯವರನ್ನು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಹೋಬಳಿ ಮಟ್ಟದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವುದು.

ಎಲ್ಲಾ ಜಿಲ್ಲಾ ಪಂಚಾಯತಿಗಳು ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವಿವರವಾದ ಜಿಲ್ಲಾವಾರು ಕ್ರೂಢೀಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ವಹಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಂದ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ವರದಿ ಪಡೆದು, ಆಯಾ ಜಿಲ್ಲಾ ಪಂಚಾಯತಿಗಳಿಗೆ ಸಲ್ಲಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮೇಲಿನಂತೆ ಕಾರ್ಯಕ್ರಮಗಳನ್ನು ಆಯೋಜಿಸಿ, ಯಶಸ್ವಿಯಾಗಿ ನಡೆಸಿ, ನಡೆಸಿದ ಬಗ್ಗೆ ವರದಿಯನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸುವುದು.

ಈ ಕಾರ್ಯಕ್ರಮ ಅನುಷ್ಠಾನದಲ್ಲಿ ತಮ್ಮ ವ್ಯಾಪ್ತಿಯ ಎಲ್ಲಾ ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ರಾಜ್ಯಸಭಾ/ಲೋಕಸಭಾ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳುವುದು.

ಯೋಜನೆಯ ಅನುಷ್ಠಾನದ ಬಗ್ಗೆ ಸುದ್ಧಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು.

ಈ ಬಗ್ಗೆ ಕೈಗೊಂಡ ಕ್ರಮದ ಕುರಿತು ಜಿಲ್ಲಾವಾರು ಕ್ರೂಢೀಕೃತ ವರದಿಯನ್ನು ಹಾರ್ಡ್ ಮತ್ತು ಸಾಫ್ಟ್ ಪ್ರತಿಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.



**(ಎಂ.ಕೆ.ಕೆಂಪೇಗೌಡ)**
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ತಾಲ್ಲೂಕು ಪಂಚಾಯತ್ ಕಟ್ಟಡಗಳ ನಿರ್ಮಾಣ ಮಾಡಲು ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:– 1) ಸರ್ಕಾರದ ಆದೇಶ ಸಂ.ಗ್ರಾಅಪ/06/ತಾಪಸ2011(ಪಿ–1)ಬೆಂಗಳೂರು, ದಿನಾಂಕ:24–07–2017.

2) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಟಿಪ್ಪಣಿ ಸಂಖ್ಯೆ:408 ದಿನಾಂಕ:18–08–2017.

****

## ಪ್ರಸ್ತಾವನೆ

2017–18ನೇ ಸಾಲಿನ ಕರ್ನಾಟಕ ರಾಜ್ಯ ಆಯವ್ಯಯದ ಲೆಕ್ಕಶೀರ್ಷಿಕೆ 2215–01–102–1–16–059 (ಗ್ರಾಮೀಣಾಭಿವೃದ್ಧಿ ಭವನ ಮತ್ತು ಇತರೆ ಕಟ್ಟಡಗಳ)ರಡಿ ಇತರೆ ಖರ್ಚುಗಳಿಗಾಗಿ ರೂ.30.00 ಕೋಟಿಗಳನ್ನು ಒದಗಿಸಲಾಗಿದೆ. ಈ ಅನುದಾನವನ್ನು ವಿನಿಯೋಗಿಸಿಕೊಳ್ಳುವ ಬಗ್ಗೆ ದಿನಾಂಕ:23–05–2017 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂಚಾಯತ್ ರಾಜ್) ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2017–18ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ.30.00 ಕೋಟಿಗಳಲ್ಲಿ ತಾಲ್ಲೂಕು ಪಂಚಾಯತಿ ಕಟ್ಟಡ ನಿರ್ಮಾಣಕ್ಕಾಗಿ ರೂ.5.00 ಕೋಟಿಗಳನ್ನು ರಾಜ್ಯದ 5 ತಾಲ್ಲೂಕು ಪಂಚಾಯತಿಗಳಿಗೆ (ಗದಗ, ಹಳಿಯಾಳ, ಕನಕಪುರ, ಹುಮನಾಬಾದ್ ಹಾಗೂ ಬ್ಯಾಡಗಿ) ತಲಾ ರೂ.1.00 ಕೋಟಿ (ಒಂದು ಕೋಟಿ ರೂಪಾಯಿಗಳು ಮಾತ್ರ) ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಅದರಂತೆ, 2017–18ನೇ ಸಾಲಿನ ಕರ್ನಾಟಕ ರಾಜ್ಯ ಆಯವ್ಯಯದ ಲೆಕ್ಕಶೀರ್ಷಿಕೆ 2215–01–102–1–16–059 (ಗ್ರಾಮೀಣಾಭಿವೃದ್ಧಿ ಭವನ ಮತ್ತು ಇತರೆ ಕಟ್ಟಡಗಳ)ರಡಿ ಇತರೆ ಖರ್ಚುಗಳಿಗಾಗಿ ಒದಗಿಸಿರುವ ಅನುದಾನವನ್ನು ಹಂಚಿಕೆ ಮಾಡಲು ತಿಳಿಸಿರುವುದರಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.11.ಗ್ರಾಮೂಸೌ.2017 ಬೆಂಗಳೂರು, ದಿನಾಂಕ:21–08–2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2017–18ನೇ ಸಾಲಿನ ಕರ್ನಾಟಕ ರಾಜ್ಯ ಆಯವ್ಯಯದ ಲೆಕ್ಕಶೀರ್ಷಿಕೆ 2215–01–102–1–16–059 (ಗ್ರಾಮೀಣಾಭಿವೃದ್ಧಿ ಭವನ ಮತ್ತು ಇತರೆ ಕಟ್ಟಡಗಳ)ರಡಿ ಇತರೆ ಖರ್ಚುಗಳಿಗಾಗಿ ರೂ.5.00 ಕೋಟಿಗಳನ್ನು ಈ ಕೆಳಕಂಡ ತಾಲ್ಲೂಕು ಪಂಚಾಯತಿಗಳಿಗೆ ಕಟ್ಟಡ ನಿರ್ಮಿಸಲು ಮಂಜೂರಾತಿ ನೀಡಿದೆ.

| ಕ್ರ. ಸಂ. | ಜಿಲ್ಲೆ | ತಾಲ್ಲೂಕು ಪಂಚಾಯತಿ | ರೂ.ಕೋಟಿಗಳಲ್ಲಿ |
|---|---|---|---|
| 1 | ಗದಗ | ಗದಗ | 1.00 |
| 2 | ಉತ್ತರ ಕನ್ನಡ | ಹಳಿಯಾಳ | 1.00 |
| 3 | ರಾಮನಗರ | ಕನಕಪುರ | 1.00 |
| 4 | ಬೀದರ್ | ಹುಮನಾಬಾದ್ | 1.00 |
| 5 | ಹಾವೇರಿ | ಬ್ಯಾಡಗಿ | 1.00 |
| **ಒಟ್ಟು:- ಐದು ಕೋಟಿ ರೂಪಾಯಿಗಳು ಮಾತ್ರ** | | | **5.00** |

**ಷರತ್ತುಗಳು:-**

1. ಈ ಆದೇಶದಲ್ಲಿ ಅನುಮೋದಿಸಿರುವ ಕಟ್ಟಡ ಕಾಮಗಾರಿಯು ಜಿಲ್ಲಾ ಪಂಚಾಯತ್‌ನ ಇತರೆ ಯೋಜನೆಯಡಿ/ಕಾರ್ಯಕ್ರಮದಡಿ/ಲೆಕ್ಕಶೀರ್ಷಿಕೆಯಡಿ ಯಾವುದೇ ಕಾರಣಕ್ಕೂ ಪುನರಾವರ್ತನೆ ಯಾಗಿರುವುದಿಲ್ಲವೆಂಬ ಅಂಶವನ್ನು ಧೃಡಪಡಿಸಿಕೊಳ್ಳತಕ್ಕದ್ದು.
2. ಸದರಿ ಕಟ್ಟಡ ಕಾಮಗಾರಿಯ ಅನುಷ್ಠಾನ ಏಜನ್ಸಿಯಾಗಿ ಕೆಆರ್‌ಐಡಿಎಲ್‌ನ್ನು ನಿಗದಿಪಡಿಸಿದೆ.
3. ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವಾಗ ಹಾಗೂ ಮುಕ್ತಾಯದ ತರುವಾಯ ಕಟ್ಟಡದ ಛಾಯಾಚಿತ್ರಗಳನ್ನು ತೆಗೆದು "ಗಾಂಧಿ ಸಾಕ್ಷಿ ಕಾಯಕ " ದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸುವುದು.
4. ಕಾಮಗಾರಿಯ ಗುಣಮಟ್ಟ ಪರೀಕ್ಷೆಯನ್ನು ಜಿಲ್ಲಾ ಪಂಚಾಯತಿಯ ಗುಣನಿಯಂತ್ರಣ ವಿಭಾಗದಿಂದ ಪರಿವೀಕ್ಷಣೆ ಮಾಡಿಸಿ ಸರ್ಕಾರಕ್ಕೆ ಕಾಲಕಾಲಕ್ಕೆ ವರದಿ ಸಲ್ಲಿಸಬೇಕು.

ಈ ಅನುದಾನವನ್ನು ಆರ್ಥಿಕ ಇಲಾಖೆಯ ಆದೇಶ ದಿನಾಂಕ:05-04-2017ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಷರತ್ತುಗೊಳಿಸಲಾಗಿರುವ ಅಧಿಕಾರದನ್ವಯ ಹಂಚಿಕೆ ಮಾಡಲು ಆದೇಶ ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರ ಟಿಪ್ಪಣಿ **ಸಂ.ಗ್ರಾಅಪ/408 ದಿನಾಂಕ:18-08-2017** ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
**(ಎನ್.ಕೃಷ್ಣಪ್ಪ ಕೋಡಿಪಾಳ್ಯ)**
ನಿರ್ದೇಶಕರು(ಗ್ರಾ.ಮೂ.ಸೌ-2) ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
panchayat.build@gmail.com Ph.No.080-22343509



ದಿನಾಂಕ: 22.08.2017 ರಂದು ಸಿದ್ದಗಂಗಾ ಮಠದ ಪ್ರಾರ್ಥನಾ ಮಂದಿರದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993ರ ರಜತ ವರ್ಷಾಚರಣೆಯನ್ನು ಇಲಾಖೆಯ ಸಚಿವರಿಂದ ಉದ್ಘಾಟನೆ.



# KARNATAKA VIKAS : SEPTEMBER 2017

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 9th, 10th, 11th of every month.
This issue is permitted to be posted on 21st September 2017


## ವಿಶ್ವ ಸಾಕ್ಷರತಾ ದಿನಾಚರಣೆ

**ಸೆಪ್ಟೆಂಬರ್ 08, 2017**




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Mubarak Ahmed**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price :
ಬೆಲೆ : ₹10.00